"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

13ನೇ ನವೆಂಬರ್ 2017
ಸೋಮವಾರ

**ವಿಷಯಾನುಕ್ರಮಾಣಿಕೆ**

1. **ಪ್ರಕಟಣೆ**

2. **ಅಭಿನಂದನೆ**

**ನೂತನ ಸಭಾನಾಯಕರಾಗಿ ಶ್ರೀ ಎಂ.ಆರ್.ಸೀತಾರಾಂರವರು ಆಯ್ಕೆಗೊಂಡಿರುವ ಬಗ್ಗೆ**

– ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರು)
– ಶ್ರೀ ರಮೇಶ್ ಬಾಬು
– ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

3. **ಪ್ರಕಟಣೆಗಳು**

4. **ಸಂತಾಪ ಸೂಚನೆ**

**ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎನ್.ಧರ್ಮಸಿಂಗ್ ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾಗಿದ್ದ ಮಾನ್ಯ ಪೋತ್‌ದಾರ್ ರಾಮಾಭಾವು ಭೀಮಾರಾವ್, ವಿಧಾನ ಪರಿಷತ್ತಿನ ಸದಸ್ಯರುಗಳಾಗಿದ್ದ ಶ್ರೀಯುತರುಗಳಾದ ಬಿ.ಬಿ.ಶಿಪ್ಪನವರು, ವಿದ್ಯಾಧರ ಗುರೂಜಿ, ಡಾಃಸೈಯದ್ ಏಜಾಸುದ್ದೀನ್, ಎಸ್. ಚಿಕ್ಕಮಾದು, ಲೋಕಸಭೆಯ ಮಾಜಿ ಸದಸ್ಯರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಖಮರುಲ್ ಇಸ್ಲಾಂ, ಅಂತರರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಹಾಗೂ ಬಾಹ್ಯಾಕಾಶ ವಿಜ್ಞಾನ ಭೀಷ್ಮ ಪ್ರೊಃಯು.ಆರ್.ರಾವ್, ಯಕ್ಷಗಾನದ ಮೇರು ಕಲಾವಿದ ಶ್ರೀಯುತ ಚಿಟ್ಟಾಣಿ ರಾಮಚಂದ್ರ ಹೆಗಡೆ ಹಾಗೂ ಹಿರಿಯ ರಂಗಭೂಮಿ ಕಲಾವಿದ ಏಣಗಿ ಬಾಳಪ್ಪ ಇವರುಗಳ ನಿಧನದ ಬಗ್ಗೆ.**

– ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)
– ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

5. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ಶ್ರೀ ಎಂ.ಕೆ.ಗಣಪತಿ, ಡಿವೈಎಸ್‌ಪಿ ರವರ ಪ್ರಕರಣವನ್ನು ಸಿ.ಬಿ.ಐ.ನವರು ಕೈಗೆತ್ತಿಕೊಂಡು ಎಫ್‌ಐಆರ್ ದಾಖಲಿಸಿರುವುದರಿಂದ ಶ್ರೀ ಕೆ.ಜೆ.ಜಾರ್ಜ್‌ರವರನ್ನು ಸಚಿವಸ್ಥಾನದಿಂದ ವಜಾಗೊಳಿಸಬೇಕೆನ್ನುವ ಬಗ್ಗೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಪುಟ್ಟಣ್ಣ
– ಶ್ರೀ ರಾಮಚಂದ್ರಗೌಡ
– ಶ್ರೀ ಬಿ.ಜೆ.ಪುಟ್ಟಸ್ವಾಮಿ

**(ಭಾರತೀಯ ಜನತಾ ಪಕ್ಷದ ಸದಸ್ಯರುಗಳಿಂದ ಧರಣಿ)**

– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)
– ಶ್ರೀ ವಿ.ಸೋಮಣ್ಣ
– ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು)
– ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**(ನಿಲುವಳಿ ಸೂಚನೆ ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು)**

**(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)**

<><><>

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(913)13-11-2017(11-00)ಎಲ್ಎಂ(ಬಿಎಸ್ಡಿ)ಆರ್ಎನ್

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, 13 ನೇ ನವೆಂಬರ್ 2017

ಸದನವು ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ *11 ಗಂಟೆ 08 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

(ಸದನವು ವಂದೇಮಾತರಂ ಗೀತೆಯೊಂದಿಗೆ ಪ್ರಾರಂಭವಾಯಿತು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಬಹಳ ನೊಂದು ಹೇಳುತ್ತಿದ್ದೇನೆ. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಶ್ರೀ ರೋಷನ್‌ಬೇಗ್, ಶ್ರೀ ತನ್ವೀರ್ ಸೇಠ್, ಶ್ರೀ ಜಾರಕಿಹೊಳಿ, ಶ್ರೀ ವಿನಯ್ ಕುಲಕರ್ಣಿ, ಶ್ರೀ ರುದ್ರಪ್ಪ ಲಮಾಣಿ, ಶ್ರೀ ಎ. ಮಂಜು, ಶ್ರೀ ಹೆಚ್.ಎಂ. ರೇವಣ್ಣ, ಶ್ರೀ ಈಶ್ವರ್ ಖಂಡ್ರೆ, ಶ್ರೀ ಆರ್.ಬಿ. ತಿಮ್ಮಾಪೂರ್ ಇವರುಗಳಲ್ಲಿ ಒಬ್ಬರಾದರೂ ಇದ್ದಾರೆಯೇ?

**ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಇದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಅವರಿಗೆ ಮತ್ತು ಅವರ ಹೆಸರನ್ನು ಹೇಳಲಿಲ್ಲ.

**ಶ್ರೀ ಹೆಚ್. ಆಂಜನೇಯ:–** ಉಳಿದ ಸಚಿವರು ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಬೆಳಗಾವಿಯ ಅಧಿವೇಶನವನ್ನು ಕರೆಯುವುದು ಏಕೆ? ಒಬ್ಬ ಮಂತ್ರಿಗಳು ಬರಲಿಲ್ಲವೆಂದರೆ ಸದನ ಏಕೆ ನಡೆಯಬೇಕು? ಮಂತ್ರಿಗಳಿಗೆ ಜವಾಬ್ದಾರಿ ಏನಿದೆ? ಮಾನ್ಯ ರಮೇಶ್‌ಕುಮಾರ್ ರವರು ಈಗ ಪ್ರಶ್ನೆಗೆ ಉತ್ತರ ಕೊಡಬೇಕು. ಅದಾದ ನಂತರ ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಇವರು ಉತ್ತರ ಕೊಡಬೇಕು. ಈ ರೀತಿಯಾದರೆ ಸದನವನ್ನು ಏಕೆ ಕರೆಯಬೇಕು? ಒಬ್ಬ ಮಂತ್ರಿಯವರು ಈ ಸದನದಲ್ಲಿ ಉಪಸ್ಥಿತರಿಲ್ಲದಿರುವಾಗ ನಾವು ಇಲ್ಲಿ ಕೂರಬೇಕೆ? ಅವರೇ ಛೀಮಾರಿ ಹಾಕಿ ಸದನಕ್ಕೆ ಕರೆಸಬೇಕು. ನಾವು ಛೀಮಾರಿ ಹಾಕುವುದಲ್ಲ. ಇಲ್ಲಿ ಇರಬೇಕಾದ ಮಂತ್ರಿಗಳು ಇಲ್ಲ ಎಂದಾಗ ಕೊಟ್ಟಿರುವ ಲಿಸ್ಟ್ ಅನ್ನು ಹರಿದುಹಾಕಲಿ. ಇದನ್ನು ನಾನು ಹರಿದು ಹಾಕಬೇಕೆ ಅಥವಾ ಅವರೇ ಹರಿದು ಹಾಕುತ್ತಾರೆಯೇ?

**ಶ್ರೀ ಹೆಚ್. ಆಂಜನೇಯ:–** ಸ್ವಲ್ಪ ಸಮಯ ಕೊಡಿ, ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸಮಯ ಕೊಡುವುದಾದರೆ ಸದನವನ್ನು ಮುಂದೂಡಲಿ. ನಾನು ಈ ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕು. ಸದನದಲ್ಲಿ ಇಂತಿಂಥ ಮಂತ್ರಿಗಳು ಇರಬೇಕೆಂದು ಸರ್ಕಾರದಿಂದ ಏಕೆ ಲಿಸ್ಟ್ ಕಳುಹಿಸುತ್ತಾರೆ? ಆ ಲಿಸ್ಟ್‌ನಲ್ಲಿನ ಒಬ್ಬ ಮಂತ್ರಿಯೂ ಸದನದಲ್ಲಿ ಇಲ್ಲ. ಮೊದಲನೆಯ ದಿನ ಉತ್ತರ ಕೊಡಬೇಕಾದ ಮಂತ್ರಿಯವರು ಸದನದಲ್ಲಿ ಇಲ್ಲವೆಂದರೆ ಏನು ಮಾಡಬೇಕು. ಈಗ ಈ ಸದನವನ್ನು ಮುಂದೂಡಿ, ಪುನಃ ಕರೆಯಿರಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(914)13-11-2017(11-10)ಬಿಎಸ್‌ಡಿ/ಆರ್‌ಎನ್

ಶ್ರೀ ಯು.ಟಿ. ಖಾದರ್‌ಃ- ಪ್ರಶ್ನೋತ್ತರ ಅವಧಿಯಲ್ಲಿ ನಾವೆಲ್ಲರೂ ಉತ್ತರ ಹೇಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪಃ- ಹಾಗಾದರೆ ಈ ಲಿಸ್ಟ್ ಅನ್ನು ಹರಿದುಹಾಕುತ್ತಾರೆಯೇ? ಆದ್ದರಿಂದ ನಾನು ಹೇಳುವುದೇನೆಂದರೆ ಜವಾಬ್ದಾರಿ ಇಲ್ಲದ ಮಂತ್ರಿಗಳ ರಾಜೀನಾಮೆ ತೆಗೆದುಕೊಂಡು ಹೊಸಬರಿಗೆ ಮಂತ್ರಿಸ್ಥಾನ ನೀಡಲಿ. ಇದನ್ನು ಸದನ ಎಂದು ಕರೆಯಬೇಕೆ? ನಾವು ಏಕೆ ಸದನವನ್ನು ನಡೆಸಬೇಕು?

ಶ್ರೀ ಎಂ. ನಾರಾಯಣಸ್ವಾಮಿಃ- ಮಾನ್ಯ ಸಭಾಪತಿಯವರೇ, ಇವತ್ತು ಮೊದಲನೆಯ ದಿವಸ ಆಗಿರುವುದರಿಂದ ಎಲ್ಲರೂ ಬರುತ್ತಿದ್ದಾರೆ. ಆದ್ದರಿಂದ ಸ್ವಲ್ಪ ತಾಳ್ಮೆ ಇರಬೇಕು. ನಮಗೂ ಕಾಳಜಿ ಇದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪಃ- ನಮ್ಮ ಎಲ್ಲಾ ಸದಸ್ಯರು ಬಂದಿದ್ದಾರೆ. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಮಂತ್ರಿಗಳು ಒಬ್ಬರೂ ಹಾಜರಿರದೇ ಇರುವುದರಿಂದ ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಐವನ್ ಡಿ'ಸೋಜಾಃ- ಮಾನ್ಯ ಸಭಾಪತಿಯವರೇ, ಅವರಿಗೆ ಆಸಕ್ತಿ ಇಲ್ಲ. ನಾವು ಉತ್ತರ ಕೊಡಲು ತಯಾರಿದ್ದೇವೆ.

ಶ್ರೀ ಯು.ಟಿ. ಖಾದರ್‌ಃ- ಅವರಿಗೆ ಆಸಕ್ತಿ ಇಲ್ಲದಿರುವುದರಿಂದ ಯಾವುದೋ ಒಂದು ತಪ್ಪು ಹುಡುಕಿಕೊಂಡು ಮಾಡುತ್ತಿದ್ದಾರೆ.

ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):- ಮಾನ್ಯ ಸಭಾಪತಿಯವರೇ,

"ನಾನಿಲ್ಲದ ವಿಶ್ವ ಏನಾದರೇನಂತೆ,
ಕಾಲಿಲ್ಲದ ಅಶ್ವ ಏನಾದರೇನಂತೆ,
ಮಂತ್ರಿಗಳಿಲ್ಲದ ಸದನ ಏನಾದರೇನಂತೆ"

ಎನ್ನುವಂತಾಗಿದೆ.

(ಈ ಹಂತದಲ್ಲಿ ಬಿ.ಜೆ.ಪಿ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಕಟಣೆ**

ಸಭಾಪತಿಯವರುಃ- ಮಾನ್ಯ ಮುಖ್ಯಮಂತ್ರಿಯವರು ದಿನಾಂಕಃ 9/11/2017ರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(1)ರ ಪ್ರಕಾರ ಶ್ರೀಯುತರಾದ ಎಂ.ಆರ್.ಸೀತಾರಾಂ, ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರನ್ನು ವಿಧಾನ ಪರಿಷತ್ತಿನ ಸಭಾನಾಯಕರಾಗಿ ನಾಮನಿರ್ದೇಶನ ಮಾಡಿರುತ್ತಾರೆಂಬ ವಿಷಯವನ್ನು ಈ ಮೂಲಕ ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀಯುತ ಎಂ.ಆರ್.ಸೀತಾರಾಂ ರವರು ಸಭಾನಾಯಕರ ಆಸನದಲ್ಲಿ ಉಪಸ್ಥಿತರಾಗಬೇಕಾಗಿ ಸೂಚಿಸುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ನೂತನ ಸಭಾನಾಯಕರನ್ನು ಮೇಜು ಕುಟ್ಟಿ ಸ್ವಾಗತಿಸಿದರು, ತದನಂತರ ಶ್ರೀ ಎಂ.ಆರ್. ಸೀತಾರಾಂ ರವರು ಸಭಾನಾಯಕರ ಪೀಠವನ್ನು ಅಲಂಕರಿಸಿದರು)**

ಶ್ರೀ ಎಂ.ಆರ್. ಸೀತಾರಾಂ(ಸಭಾನಾಯಕರು)ಃ- ಮಾನ್ಯ ಸಭಾಪತಿಯವರೇ, ಶತಮಾತನದ ಇತಿಹಾಸವುಳ್ಳ ಕರ್ನಾಟಕ ವಿಧಾನ ಪರಿಷತ್ತಿನ ಸಭಾನಾಯಕನಾಗಿ ನನ್ನನ್ನು ನೇಮಕ ಮಾಡಿರುವ ನಮ್ಮ ನಾಯಕರೂ ಹಾಗೂ ಮಾನ್ಯ ಮುಖ್ಯಮಂತ್ರಿಯಾಗಿರುವ ಶ್ರೀ ಸಿದ್ದರಾಮಯ್ಯನವರಿಗೆ ನಾನು ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಹಿಂದೆ ಹಲವಾರು ಹಿರಿಯರು ಸಭಾನಾಯಕರ ಕೆಲಸ ಮಾಡಿಕೊಂಡು, ಸದನದ ಘನತೆ ಮತ್ತು ಗೌರವಗಳನ್ನು ಎತ್ತಿ ಹಿಡಿದಿರುತ್ತಾರೆ. ನಾನೂ ಸಹ ಇದೇ ದಿಸೆಯಲ್ಲಿ ಮುಂದುವರೆಯುತ್ತೇನೆಂದು ಎಲ್ಲರಿಗೂ ಆಶ್ವಾಸನೆ ನೀಡುತ್ತಿದ್ದೇನೆ. ಕಳೆದ ಒಂದು ಶತಮಾನದ ಇತಿಹಾಸವುಳ್ಳ ಈ ಸದನದ ಸಭಾನಾಯಕರುಗಳಾಗಿ ಮಾನ್ಯ ಶಂಕರಮೂರ್ತಿಯವರು, ದಿವಂಗತ ಡಾಃ ವಿ.ಎಸ್. ಆಚಾರ್ಯರವರು, ಮಾನ್ಯ ಸದಾನಂದಗೌಡರು, ಮಾನ್ಯ ಸೋಮಣ್ಣನವರು, ಶ್ರೀಯುತ ಎಸ್.ಆರ್. ಪಾಟೀಲ್‌ರವರು ಹಾಗೂ ಡಾಃ ಪರಮೇಶ್ವರ್ ರವರುಗಳು ಸದನದ ಕಾರ್ಯವಿಧಾನ ಹಾಗೂ ನಡವಳಿಕೆಗಳನ್ವಯ ಮತ್ತು ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿರುತ್ತಾರೆ. ನಾನೂ ಸಹ ಈ ಹಿರಿಯರು ಹಾಕಿಕೊಟ್ಟಿರುವ ಮಾರ್ಗದರ್ಶನದಂತೆ ಈ ಸದನದ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಮತ್ತು ಸದನದ ಕಾರ್ಯವನ್ನು ನಿರ್ವಹಿಸಲು ಸದನದ ಎಲ್ಲಾ ಮಾನ್ಯ ಸದಸ್ಯರುಗಳು ಸಲಹೆ, ಸೂಚನೆ ಹಾಗೂ ಸಹಕಾರವನ್ನು ನೀಡಬೇಕೆಂದು ಕೋರುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಅಭಿನಂದನೆ**

**ನೂತನ ಸಭಾನಾಯಕರಾಗಿ ಶ್ರೀ ಎಂ.ಆರ್.ಸೀತಾರಾಂರವರು ನೇಮಕಗೊಂಡಿರುವ ಕುರಿತು.**

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)ಃ-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿ ಮೇರೆಗೆ ಶ್ರೀ ಎಂ.ಆರ್. ಸೀತಾರಾಂ ರವರಿಗೆ ನಾನು ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಮಾನ್ಯ ಎಂ.ಆರ್. ಸೀತಾರಾಂ ರವರು ವಿಧಾನ ಪರಿಷತ್ತಿನ ಸಭಾನಾಯಕರಾಗಿ ನೇಮಕವಾಗಿರುವುದು ನಮಗೆಲ್ಲರಿಗೂ ಸಂತೋಷವನ್ನು ತರುವ ವಿಚಾರವಾಗಿದೆ. ಇವರು ಸುಧೀರ್ಘವಾದ ಸೇವೆಯನ್ನು ಸಾರ್ವಜನಿಕ ಜೀವನದಲ್ಲಿ ಸಲ್ಲಿಸಿದ್ದಾರೆ. ಇದೇ ಸಂದರ್ಭದಲ್ಲಿ ದಿವಂಗತ ಎಂ.ಎಸ್. ರಾಮಯ್ಯನವರ ಸುಧೀರ್ಘ ಸೇವೆಯನ್ನು ಸ್ಮರಣೆ ಮಾಡಿಕೊಳ್ಳುತ್ತೇನೆ. ಅವರ ಸಹೋದರರಾದ ಶ್ರೀಯುತ ಎಂ.ಎಸ್. ಜಯರಾಂ ರವರು ವಿಧಾನ ಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

(ಮುಂದು)

**(915+916)13.11.2017/11.20/ಹೆಚ್‌ವಿಃವಿಕೆ**

**ಶ್ರೀ ರಮೇಶ್‌ಬಾಬು(ಮುಂದುವರೆದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಆರ್.ಸೀತಾರಂರವರು ಹಿಂದೆ ಮಲೇಶ್ವರಂ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಅಲ್ಲದೇ ಅವರು ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ ಹಾಗೂ ಕೊಡುತ್ತಾ ಬರುತ್ತಿದ್ದಾರೆ. ಅವರ ಸುದೀರ್ಘವಾದ ಅನುಭವದ ಹಿನ್ನೆಲೆಯಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ, ಸಚಿವರಾಗಿ ಈಗ ಸಭಾನಾಯಕರಾಗಿ ಕಾರ್ಯನಿರ್ವಹಿಸುತ್ತಾರೆ ಎನ್ನುವ ಆಶಯದಿಂದ ಈ ಸದನದ ವಿರೋಧ ಪಕ್ಷದ ಸದಸ್ಯರುಗಳ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರುಗಳು ಸದನಕ್ಕೆ ಆಗಮಿಸಿದರು.)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ. ಈ ದಿನದ ‘ವಿಶ್ವವಾಣಿ’ ದಿನಪತ್ರಿಕೆಯಲ್ಲಿನ ‘ದಾರಿದೀಪೋಕ್ತಿ’ ಶೀರ್ಷಿಕೆಯಡಿಯಲ್ಲಿ “ಟೀಕಾಕಾರರ ಭಯ ಇಲ್ಲದಿದ್ದರೆ ನಾವು ಮಾಡಿರುವುದೇ ಸರಿ ಎನ್ನುವ ಭಾವನೆ ಬರಬಹುದು. ಟೀಕಾಕಾರರು ಹೇಳುವುದನ್ನೆಲ್ಲ ಕೇಳಬೇಕು. ಆದರೆ, ಅದನ್ನು ಯಾವ ರೀತಿಯಲ್ಲಿ ಸ್ವೀಕರಿಸಬೇಕು ಎನ್ನುವುದು ನಿಮಗೆ ಬಿಟ್ಟಿದ್ದು, ಹಾಗೆಂದು ಟೀಕಾಕಾರರು ಇರಲೇಬಾರದು ಎಂದು ಅಪೇಕ್ಷಿಸಬಾರದು” ಎಂದು ಪ್ರಕಟಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನಲ್ಲಿ ಹಿಂದೆ ಶ್ರೀಯುತರುಗಳಾದ ಎಸ್.ಆರ್.ಪಾಟೀಲ್‌ರವರು ಮತ್ತು ಡಾ॥ಪರಮೇಶ್ವರ್‌ರವರು ಸಭಾನಾಯಕರುಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಅದೇ ರೀತಿಯಲ್ಲಿ ಈಗ ಮಾನ್ಯ ಎಂ.ಆರ್.ಸೀತಾರಾಂರವರು ಸಭಾನಾಯಕರಾಗಿದ್ದಾರೆ. ಉತ್ತಮ ವ್ಯಕ್ತಿತ್ವದ ವ್ಯಕ್ತಿಗಳೇ ಸಭಾನಾಯಕರಾಗಿ ಅಧಿಕಾರವನ್ನು ಸ್ವೀಕರಿಸುತ್ತಿದ್ದಾರೆ. ವಿಧಾನ ಪರಿಷತ್ತಿಗೆ ಗೌರವ ತರುವಂತಹ ವ್ಯಕ್ತಿಗಳನ್ನು ಸಭಾನಾಯಕರನ್ನಾಗಿ ಆಯ್ಕೆ ಮಾಡುತ್ತಿರುವುದಕ್ಕೆ ನಾನು ಈ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಮಾನ್ಯ ಎಂ.ಆರ್.ಸೀತಾರಾಂ ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿರೋಧ ಪಕ್ಷದವರನ್ನು ದಯವಿಟ್ಟು ತಾತ್ಸಾರ ಮಾಡಬಾರದೆಂದು ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಅಪೇಕ್ಷೆ ಉತ್ತಮವಾಗಿರುತ್ತದೆ. ಆದರೆ, ಆ ಅಪೇಕ್ಷೆಯಂತೆ ಸರ್ಕಾರ ನಡೆದುಕೊಳ್ಳುವುದಿಲ್ಲ. ಸರ್ಕಾರ ಆ ದಿಸೆಯಲ್ಲಿ ನಡೆಯದೇ ಇರುವಂತಹ ಸಂದರ್ಭದಲ್ಲಿ ಟೀಕೆ ಮಾಡುವುದಕ್ಕಾಗಿಯೇ ವಿರೋಧ ಪಕ್ಷ ಇರುವುದು. ವಿರೋಧ ಪಕ್ಷದವರ ಟೀಕೆಗೆ ಉತ್ತರ ನೀಡುವ ಪಾಂಡಿತ್ಯ ಸರ್ಕಾರಕ್ಕೆ ಬಹಳಷ್ಟು ಇರಬಹುದು. ಆದರೆ, ಸರ್ಕಾರ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವುದಕ್ಕೆ ಈ ಸದನವನ್ನು ವೇದಿಕೆಯನ್ನಾಗಿ ಮಾಡಿಕೊಳ್ಳಬಾರದು. ವಿರೋಧ ಪಕ್ಷದವರು ಟೀಕೆ ಮಾಡುತ್ತಿರುವುದರಲ್ಲಿ ಸತ್ಯವಿದೆಯೋ, ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಡಳಿತ ಪಕ್ಷದವರಿಗೂ ಮತ್ತು ವಿರೋಧ ಪಕ್ಷದವರಿಗೂ ಜನರ ಕಲ್ಯಾಣವೇ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕೆನ್ನುವುದು ನನ್ನ ಪ್ರಾರ್ಥನೆಯಾಗಿದೆ. ಮಾನ್ಯ ಸಭಾ ನಾಯಕರಿಗೆ ಸರ್ಕಾರ ಯಾವ್ಯಾವ ಖಾತೆಗಳನ್ನು ಹಂಚಿಕೆ ಮಾಡಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡುವುದು ಉಪಯುಕ್ತವಲ್ಲ. ಆದರೆ, ಮಲೆನಾಡಿನ ಅಭಿವೃದ್ಧಿ ಮಂಡಳಿ ಅವರ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಮಲೆನಾಡಿನ ಅಭಿವೃದ್ಧಿ ಮಂಡಳಿಗೆ ಮಲೆನಾಡಿನ ಹಲವಾರು ಪ್ರದೇಶಗಳು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸೇರುತ್ತವೆ. ಅವುಗಳ ಅಭಿವೃದ್ಧಿಗೆ ಸರ್ಕಾರದ ಬಳಿ ಹಣವೇ ಇಲ್ಲವೆಂದ ಮೇಲೆ ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ? ಮಾನ್ಯ ಎಂ.ಆರ್.ಸೀತರಾಂರವರು, ಈ ದಿನದಿಂದ ಸಚಿವರಾಗಿ ಮತ್ತು ವಿಧಾನ ಪರಿಷತ್ತಿನ ಸಭಾನಾಯಕರಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಭಾನಾಯಕರ ಸ್ಥಾನದ ಗೌರವವನ್ನು ಉಳಿಸಿಕೊಂಡು, ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರುವಂತಹ ಎಲ್ಲ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಗರಿಷ್ಠ ಪ್ರಮಾಣದಲ್ಲಿ ಹಣವನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಅವರು ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಭಾಷಣದಲ್ಲಿ ಈ ಮಂಡಳಿಗೆ ಬಿಡುಗಡೆ ಮಾಡಲಾಗುವ ಹಣದ ಪ್ರಮಾಣವನ್ನು ಮತ್ತು ಇಂತಿಂಥ ಶಾಸಕರಿಗೆ ಇಷ್ಟಿಷ್ಟು ಹಣ ಎಂದು ಘೋಷಣೆ ಮಾಡಿದ್ದಾರೆ. ಘೋಷಣೆ ಮಾಡಿದ್ದಾರೆಯೇ ವಿನಃ ಹಣವನ್ನು ಬಿಡುಗಡೆ ಮಾಡಿಲ್ಲ. ಆದರೆ, ಮುಖ್ಯಮಂತ್ರಿಗಳು ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಡುವುದಿಲ್ಲ. ಅವರು ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಟ್ಟರೆ ಸಂತೋಷ. ಆ ಹಣದಲ್ಲಿ ಮಲೆನಾಡು ಅಭಿವೃದ್ಧಿಪಡಿಸಿ ಅದರ ಕೀರ್ತಿಯನ್ನು ಸಹ ಅವರು ಪಡೆದುಕೊಳ್ಳಬೇಕೆನ್ನುವುದು ನನ್ನ ಮನವಿಯಾಗಿದೆ. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಅವರು ಸಭಾನಾಯಕರಾಗಿ ತಮ್ಮ ಕರ್ತವ್ಯವನ್ನು ನಿಭಾಯಿಸಬೇಕಾಗುತ್ತದೆ. ಇನ್ನು ಕೇವಲ ಎರಡು ಅಧಿವೇಶನಗಳಿಗೆ ಮಾತ್ರ ಅವರು ಸಭಾನಾಯಕರಾಗಿರುತ್ತಾರೆ. ನಂತರದ ಅಧಿವೇಶನದ ಹೊತ್ತಿಗೆ ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಬಹುದಾದ ಸಾಧ್ಯತೆ ಇರುವುದರಿಂದ ಬಹುಶಃ ಅವರು ಸಭಾನಾಯಕರಾಗಿ ಇರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಚುನಾವಣೆಯಲ್ಲಿ ನಾವೇ ಗೆಲ್ಲುತ್ತೇವೆ. ಅಧಿಕಾರಕ್ಕೆ ಬರುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಕನಸು ಕಾಣುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, ಕನಸನ್ನು ನನಸು ಮಾಡುತ್ತೇವೆ. ಕನಸು ಕಾಣುತ್ತಿರುವುದು ವಿರೋಧ ಪಕ್ಷದ ನಾಯಕರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಚುನಾವಣೆಯಲ್ಲಿ ನಾವು ಗೆದ್ದು ಬರುತ್ತೇವೆ ಎನ್ನುವ ವಿಶ್ವಾಸವಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದ ಜನರು ಈಗಾಗಲೇ ಈ ಸರ್ಕಾರವನ್ನು ನಿರಾಕರಿಸಿದ್ದಾರೆ. ಆದರೆ, ಇವರುಗಳು ಇನ್ನೂ ನಾವು ಗೆಲ್ಲುತ್ತೇವೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ. ನನ್ನ ಪ್ರಕಾರ ಮಾನ್ಯ ಎಂ.ಆರ್.ಸೀತಾರಂರವರು ಈ ಅಧಿವೇಶನದಲ್ಲಿ ಮತ್ತು ಮುಂದಿನ ಆಯವ್ಯಯದ ಅಧಿವೇಶನಕ್ಕೆ ಮಾತ್ರ ಸಭಾ ನಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಈ ಸಂದರ್ಭದಲ್ಲಿ ನಿಷ್ಪಕ್ಷಪಾತವಾಗಿ ಅವರು ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಮಾನ್ಯ ಐವನ್ ಡಿ'ಸೋಜರವರು ವಿಲವಿಲ ಒದ್ದಾಡುತ್ತಿರುತ್ತಾರೆ. ಅವರ ಒದ್ದಾಟವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಭಾನಾಯಕರು ಸಹ ಸಹಕರಿಸಬೇಕಾಗುತ್ತದೆ. ಯಾವ್ಯಾವ ಮಂತ್ರಿಗಳು ಯಾವ ರೀತಿಯಲ್ಲಿ ಸದನದಲ್ಲಿ ಕೆಲಸ ಮಾಡಬೇಕು, ಯಾವ ರೀತಿಯಲ್ಲಿ ಉತ್ತರವನ್ನು ಮಂಡಿಸಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ. ಬಂಡತನದ ಉತ್ತರಗಳಿಂದ ಏನು ಲಾಭವಾಗುವುದಿಲ್ಲ. ಆದ್ದರಿಂದ ಸಭಾನಾಯಕರಾಗಿ ಈ ಸದನದ ಆಡಳಿತ ಪಕ್ಷದ ಸದಸ್ಯರಿಗೆ ಮತ್ತು ವಿರೋಧ ಪಕ್ಷದ ಸದಸ್ಯರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮಾನ್ಯ ಸಭಾ ನಾಯಕರು ಯಶಸ್ವಿಯಾಗಬೇಕೆಂದು ಹಾರೈಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

## <u>೩. ಸಂತಾಪ ಸೂಚನೆಗಳು</u>

**ವಿಷಯ: ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎನ್.ಧರ್ಮಸಿಂಗ್ ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾಗಿದ್ದ ಮಾನ್ಯ ಪೋತ್‌ದಾರ್ ರಾಮಾಭಾವು ಭೀಮಾರಾವ್, ವಿಧಾನ ಪರಿಷತ್ತಿನ ಸದಸ್ಯರುಗಳಾಗಿದ್ದ ಶ್ರೀಯುತರುಗಳಾದ ಬಿ.ಬಿ.ಶಿಪ್ಪನವರು, ವಿದ್ಯಾಧರ ಗುರೂಜಿ, ಡಾ:ಸೈಯದ್ ಏಜಾಸುದ್ದೀನ್, ಎಸ್. ಚಿಕ್ಕಮಾದು, ಲೋಕಸಭೆಯ ಮಾಜಿ ಸದಸ್ಯರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಖಮರುಲ್ ಇಸ್ಲಾಂ, ಅಂತರರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಹಾಗೂ ಬಾಹ್ಯಾಕಾಶ ವಿಜ್ಞಾನ ಭೀಷ್ಮ ಪ್ರೊ:ಯು.ಆರ್.ರಾವ್, ಯಕ್ಷಗಾನದ ಮೇರು ಕಲಾವಿದ ಶ್ರೀಯುತ ಚಿಟ್ಟಾಣಿ ರಾಮಚಂದ್ರ ಹೆಗಡೆ ಹಾಗೂ ಹಿರಿಯ ರಂಗಭೂಮಿ ಕಲಾವಿದ ಏಣಗಿ ಬಾಳಪ್ಪ ಇವರುಗಳ ನಿಧನದ ಬಗ್ಗೆ.**

.........

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಕಳೆದ ಅಧಿವೇಶನ ಮುಗಿದ ನಂತರ ಇವತ್ತಿನ ತನಕ ನಮ್ಮ ರಾಜ್ಯದ ಮತ್ತು ದೇಶದ ಹಲವು ಗಣ್ಯರು ನಮ್ಮನ್ನು ಅಗಲಿದ್ದಾರೆ. ಅವರಲ್ಲಿ ಕೆಲವರನ್ನು ನಾನು ನೆನಪು ಮಾಡಿಕೊಳ್ಳುತ್ತಿದ್ದೇನೆ. ಸಂತಾಪ ಸೂಚನೆಯ ನಿರ್ಣಯವನ್ನು ನಾನು ಸದನ ಮುಂದೆ ಮಂಡಿಸುತ್ತಿದ್ದೇನೆ.

01. **ಶ್ರೀ ಎನ್. ಧರ್ಮಸಿಂಗ್**

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಯವರಾಗಿದ್ದ ಹಾಗೂ ಮಾಜಿ ಲೋಕಸಭಾ ಸದಸ್ಯರಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರು ದಿನಾಂಕ:28.07.2017ರಂದು ನಿಧನ ಹೊಂದಿರುತ್ತಾರೆ.

25ನೇ ಡಿಸೆಂಬರ್, 1936ರಂದು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನೆಲೋಗಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಎಲ್‌ಎಲ್.ಬಿ. ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು.

1977ರಲ್ಲಿ ವಿಧಾನ ಸಭಾ ಚುನಾವಣೆಗೆ ಜೇವರ್ಗಿ ಕ್ಷೇತ್ರದಿಂದ ಸ್ಪರ್ಧಿಸಿ, ಸತತವಾಗಿ 5,6,7,8,9,10 ಹಾಗೂ 11ನೇ ವಿಧಾನ ಸಭೆಗೆ 07 ಬಾರಿ ವಿಧಾನ ಸಭಾ ಸದಸ್ಯರಾಗಿ, 1980 ಮತ್ತು 2009ರಲ್ಲಿ ಎರಡು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಶ್ರೀಯುತರು 1990ರಲ್ಲಿ ಕೆ.ಪಿ.ಸಿ.ಸಿ.ಯ ಅಧ್ಯಕ್ಷರಾಗಿಯೂ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಹಿಂದುಳಿದ ವರ್ಗಗಳ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರಲ್ಲದೆ, ನಗರಾಭಿವೃದ್ಧಿ, ಗೃಹ, ಸಮಾಜ ಕಲ್ಯಾಣ, ಕಂದಾಯ ಹಾಗೂ ಲೋಕೋಪಯೋಗಿ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ರಾಜ್ಯದ 17ನೇ ಮುಖ್ಯಮಂತ್ರಿಯಾಗಿದ್ದರು.

ಸದರಿಯವರ ನಿಧನದಿಂದಾಗಿ ರಾಜ್ಯವು ಸರಳ, ಸಜ್ಜನ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

02. **ಪೋತ್‌ದಾರ್ ರಾಮಾಭಾವು ಭೀಮಾರಾವ್**

**ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಹಾಗೂ ಮಾಜಿ ಸಚಿವರಾಗಿದ್ದ** ಶ್ರೀ ಪೋತ್‌ದಾರ್ ರಾಮಾಭಾವು ಭೀಮಾರಾವ್ ಅವರು ದಿನಾಂಕ:26.08.2017ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕ್ಟೋಬರ್, 1924ರಂದು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ.,(ಅರ್ಥಶಾಸ್ತ್ರ) ಪದವೀಧರರಾಗಿದ್ದು, ಮರಾಠಿ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು.

ಮಾರ್ಕಂಡೇಯ ಸಹಕಾರ ಸಕ್ಕರೆ ಕಾರ್ಖಾನೆ ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀಯುತರು ಪಯೋನಿಯರ್ ಬ್ಯಾಂಕ್‌ನ ಸಂಸ್ಥಾಪಕ ಸದಸ್ಯರಾಗಿದ್ದು, 1975ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ತುರ್ತು ಪರಿಸ್ಥಿತಿ ನಂತರ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡು 1976 ರಿಂದ 1994ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಹಾಗೂ ಜುಲೈ 1983 ರಿಂದ 1986ರವರೆಗೆ ಹಂಗಾಮಿ ಸಭಾಪತಿಗಳಾಗಿ, ನಂತರ ದಿನಾಂಕ:08.04.1985ರಲ್ಲಿ ಮಾನ್ಯ ಸಭಾಪತಿಗಳಾಗಿ, 1985ರಲ್ಲಿ ರಾಮಕೃಷ್ಣ ಹೆಗಡೆ ಅವರ ಸರ್ಕಾರದಲ್ಲಿ ಕೈಗಾರಿಕಾ ಮತ್ತು ಸಹಕಾರ ಸಚಿವರಾಗಿದ್ದರಲ್ಲದೆ, 08 ವರ್ಷಗಳು ಬೆಳಗಾವಿ ಎ.ಪಿ.ಎಂ.ಸಿ. ಅಧ್ಯಕ್ಷರಾಗಿದ್ದರು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಗೊತ್ತುವಳಿ ಮಂಡಿಸುವ ಮೂಲಕ ಕನ್ನಡ ಪ್ರೇಮ ಮೆರೆದಿದ್ದರು.

ಸದರಿಯವರ ನಿಧನದಿಂದ ರಾಜ್ಯವು ಸರಳ, ಸಜ್ಜನ ಜನತಾ ಪರಿವಾರದ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 03. ಶ್ರೀ ಬಿ.ಬಿ. ಶಿವಪ್ಪ

ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾನ್ಯ ಮಾಜಿ ಸದಸ್ಯರಾಗಿದ್ದ ಶ್ರೀ ಬೇಳೂರು ಬಸಪ್ಪ ಶಿವಪ್ಪ ಅವರು ದಿನಾಂಕ:31.07.2017ರಂದು ನಿಧನ ಹೊಂದಿರುತ್ತಾರೆ.

27ನೇ ಸೆಪ್ಟೆಂಬರ್, 1929ರಂದು ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಬೇಳೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎಸ್.ಎಲ್.ಸಿ.ವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀಯುತರು ಅನೇಕ ವಿದ್ಯಾ ಸಂಸ್ಥೆಗಳ ಅಧ್ಯಕ್ಷರಾಗಿ, ಕಾವೇರಿ ಸಿಮೆಂಟ್ಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ಕಾರ್ಯನಿರ್ವಾಹಕರಾಗಿ, ಹಾಸನದ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಸಂಸ್ಥಾಪಕ ನಿರ್ದೇಶಕರು, ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕ ಸದಸ್ಯರಾಗಿ ಹಾಗೂ ಗುಲ್ಬರ್ಗಾ ಇಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. 1981ರಲ್ಲಿ ಬಿ.ಜೆ.ಪಿ. ಸೇರಿದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀಯುತರು 1983 ರಿಂದ 1988ರವರೆಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ, 1984 ರಿಂದ 1990 ಹಾಗೂ 2007 ರಿಂದ 2009ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ, 10ನೇ ಮತ್ತು 11ನೇ ವಿಧಾನ ಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಸದರಿಯವರ ನಿಧನದಿಂದಾಗಿ ಬಿ.ಜೆ.ಪಿ.ಯ ಹಿರಿಯ ಮುಖಂಡ ಹಾಗೂ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

04. **ವಿದ್ಯಾಧರ ಗುರೂಜಿ**

ಸ್ವಾತಂತ್ರ ಯೋಧ, ಶತಾಯುಷಿ, ಕರ್ನಾಟಕ ರಾಜ್ಯದ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ವಿದ್ಯಾಧರ ಗುರೂಜಿ ಅವರು ದಿನಾಂಕ:29.07.2017ರಂದು ನಿಧನ ಹೊಂದಿರುತ್ತಾರೆ.

30ನೇ ಡಿಸೆಂಬರ್, 1914ರಲ್ಲಿ ಕಲಬುರಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಗುರುಮಠಕಲ್‌ನಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ.,(ಹಿಂದಿ) ಪದವಿಯನ್ನು ಪಡೆದಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

1962ರಲ್ಲಿ ವಿಧಾನ ಸಭಾ ಸದಸ್ಯರು, 1988ರಲ್ಲಿ ನಾಮನಿರ್ದೇಶಿತ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀಯುತರು ಸ್ಥಳೀಯ ಹಿಂದಿ ಪ್ರಚಾರ ಸಭಾದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಕರ್ನಾಟಕ ಹಿಂದಿ ಪ್ರಚಾರ ಸಭಾ ಹುಟ್ಟು ಹಾಕುವ ಮೂಲಕ ಹಿಂದಿ ಭಾಷೆಯನ್ನು ಉತ್ತುಂಗಕ್ಕೇರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು. ಮಹಾನ್ ದೇಶಭಕ್ತರಾದ ಇವರು 1931ರಲ್ಲಿ ಭಗತ್‌ಸಿಂಗ್, ರಾಜಗುರು, ಸುಖದೇವ್ ಅವರನ್ನು ಗಲ್ಲಿಗೇರಿಸಿದ ಸುದ್ದಿ ತಿಳಿದು ಸಹವರ್ತಿಗಳನ್ನು ಒಂದುಗೂಡಿಸಿ, ಗುರುಮಠಕಲ್‌ನಲ್ಲಿ ಮೆರವಣಿಗೆ ಏರ್ಪಡಿಸಿ, ಬ್ರಿಟಿಷರ ವಿರುದ್ಧ ಘೋಷಣೆ ಕೂಗಿದರು. 1938 ರಿಂದ 1942ರವರೆವಿಗೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು.

ಸದರಿಯವರ ನಿಧನದಿಂದಾಗಿ ಸ್ವಾತಂತ್ರ್ಯ ಯೋಧ ಹಾಗೂ ಸರಳ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

05. **ಡಾ. ಸೈಯದ್ ಏಜಾಸುದ್ದೀನ್**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧಾನ ಪರಿಷತ್ತಿನ ಮಾನ್ಯ ಮಾಜಿ ಸದಸ್ಯರು ಹಾಗೂ ಹಿರಿಯ ಸಾಹಿತಿಗಳಾಗಿದ್ದ** ಡಾ. ಸೈಯದ್ ಏಜಾಸುದ್ದೀನ್ ಅವರು ದಿನಾಂಕ:21.08.2017ರಂದು ನಿಧನ ಹೊಂದಿರುತ್ತಾರೆ.

8ನೇ ಜನವರಿ, 1944ರಂದು ತುಮಕೂರಿನಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ. (ಹಿಂದಿ), ಪಿ.ಹೆಚ್.ಡಿ.,(ಹಿಂದಿ) ಪದವೀಧರರಾಗಿದ್ದು, ವೃತ್ತಿಯಲ್ಲಿ ಸಾಹಿತಿಗಳಾಗಿದ್ದರು.

ಮಹಾರಾಣಿ ಕಾಲೇಜಿನಲ್ಲಿ ಹಿಂದಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ್ದು, ಹಿಂದಿ ಹಾಗೂ ಜೈನ ಸಾಹಿತಿಯಲ್ಲಿ ಅಪಾರ ಜ್ಞಾನ ಹೊಂದಿದ್ದ ಶ್ರೀಯುತರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದರು. ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ನಾಡಿನಲ್ಲಿ ಸಾಮಾಜಿಕ ಸಾಮರಸ್ಯ, ಭಾಷಾ ಸೌಹಾರ್ದತೆ ಹಾಗೂ ಸರ್ವಧರ್ಮ ಸಮನ್ವಯತೆಗೆ ದಶಕಗಳ ಕಾಲ ತಮ್ಮನ್ನು ಅರ್ಪಿಸಿಕೊಂಡಿರುವುದಲ್ಲದೆ, 1995 ರಿಂದ 2001ರವರೆವಿಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಸದರಿಯವರ ನಿಧನದಿಂದ ಒಬ್ಬ ಹಿರಿಯ ಸಾಹಿತಿ ಹಾಗೂ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**06. <u>ಖಮರುಲ್ ಇಸ್ಲಾಂ</u>**

ಕರ್ನಾಟಕ ರಾಜ್ಯದ ಮಾಜಿ ಸಚಿವರು, ಲೋಕಸಭೆಯ ಮಾಜಿ ಸದಸ್ಯರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಖಮರುಲ್ ಇಸ್ಲಾಂ ಅವರು ದಿನಾಂಕ:18.09.2017ರಂದು ನಿಧನ ಹೊಂದಿರುತ್ತಾರೆ.

27ನೇ ಜನವರಿ, 1948ರಂದು ಕಲಬುರಗಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಇ., (ಮೆಕ್ಯಾನಿಕಲ್ ಇಂಜಿನಿಯರಿಂಗ್) ಪದವೀಧರರಾಗಿದ್ದು, ವೃತ್ತಿಯಲ್ಲಿ ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತರಾಗಿದ್ದರು.

ಮುಸ್ಲಿಂ ಲೀಗ್ ಮೂಲಕ ರಾಜಕೀಯ ಜೀವನ ಆರಂಭಿಸಿ, 1978ರಲ್ಲಿ ಕಲಬುರಗಿಯ ಉತ್ತರ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾದ ಶ್ರೀಯುತರು 1978-1983, 1989-1994, 1994-1996, 1999-2004, 2008-2013 ಹಾಗೂ 2013-2017ರವರೆಗೆ ಒಟ್ಟು ಆರು ಬಾರಿ ಸ್ಪರ್ಧಿಸಿ, ಎಲ್ಲಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚುನಾವಣೆಗಳಲ್ಲಿಯೂ ಗೆಲುವು ಸಾಧಿಸಿರುತ್ತಾರೆ. 1996–1998ರವರೆಗೆ ಲೋಕ ಸಭಾ ಸದಸ್ಯರಾಗಿದ್ದರಲ್ಲದೆ, ಕಾರ್ಮಿಕ, ಸಣ್ಣ ಕೈಗಾರಿಕೆ, ಹಜ್, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ, ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೆ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಸದರಿಯವರ ನಿಧನದಿಂದ ರಾಜ್ಯವು ಮುಸ್ಲಿಂ ಸಮುದಾಯದ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

### 07.ಶ್ರೀ ಎಸ್. ಚಿಕ್ಕಮಾದು

ಹಾಲಿ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಸ್. ಚಿಕ್ಕಮಾದು ಅವರು ದಿನಾಂಕ: 01.11.2017ರಂದು ನಿಧನ ಹೊಂದಿರುತ್ತಾರೆ.

1951ರ ಮಾರ್ಚ್, 07ರಂದು ಕೆ.ಆರ್. ನಗರ ತಾಲ್ಲೂಕಿನ ಹೊಸೂರು ಕಲ್ಲಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ, ಎಲ್‌ಎಲ್.ಬಿ., ಪದವಿಯನ್ನು ಪಡೆದಿದ್ದರು ಹಾಗೂ ವೃತ್ತಿಯಲ್ಲಿ ಕೃಷಿಕರಾಗಿದ್ದರು. ಇವರು ಹಿಂದುಳಿದ ನಾಯಕ ಜನಾಂಗವನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ಉದ್ದೇಶದಿಂದ ಸೇವಾ ಕ್ಷೇತ್ರವನ್ನು ಪ್ರವೇಶಿಸಿದ್ದರು.

1977ರ ಲೋಕಸಭಾ ಚುನಾವಣೆಗೆ ಮೈಸೂರು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದ ಇವರು 2006ರಲ್ಲಿ ವಿಧಾನ ಪರಿಷತ್ತಿನ ಸದಸ್ಯರು, 1991–1994ರಲ್ಲಿ ವಿಧಾನ ಸಭಾ ಸದಸ್ಯರು, 1986–1991ರವರೆಗೆ ಜಿಲ್ಲಾ ಪರಿಷತ್ ಸದಸ್ಯರು, 1986ರಲ್ಲಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದ ಜಿಲ್ಲಾ ಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸಿದ್ದರು. 1991ರ ಹುಣಸೂರು ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರವರ ಆಹ್ವಾನದ ಮೇರೆಗೆ ಜೆಡಿಎಸ್ ಸೇರ್ಪಡೆಗೊಂಡ ಶ್ರೀಯುತರು 2007–2008ರಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರಲ್ಲದೆ, ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷರಾಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ 2013ರಲ್ಲಿ 14ನೇ ವಿಧಾನ ಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಎಚ್.ಡಿ. ಕೋಟೆ ಮೀಸಲು ಕ್ಷೇತ್ರದಿಂದ ಜಯಗಳಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## ೦೮. ಪ್ರೊ. ಉಡುಪಿ ರಾಮಚಂದ್ರರಾವ್

ಅಂತರರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಹಾಗೂ ಬಾಹ್ಯಾಕಾಶ ವಿಜ್ಞಾನದ ಭೀಷ್ಮ ಎಂದೇ ಹೆಸರು ಪಡೆದಿದ್ದ ಪ್ರೊ. ಯು.ಆರ್. ರಾವ್ ಅವರು ದಿನಾಂಕ:24.07.2017ರಂದು ನಿಧನ ಹೊಂದಿರುತ್ತಾರೆ.

10ನೇ ಮಾರ್ಚ್, 1932ರಂದು ಉಡುಪಿ ಜಿಲ್ಲೆಯ ಆದಮಾರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು 1952ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ., 1954ರಲ್ಲಿ ಬನಾರಸ್ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ., ಹಾಗೂ 1960ರಲ್ಲಿ ಗುಜರಾತ್ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ., ಪದವಿಯನ್ನು ಪಡೆದಿದ್ದು, ವೃತ್ತಿಯಲ್ಲಿ ವಿಜ್ಞಾನಿಯಾಗಿದ್ದ ಇವರು ದೇಶಕಂಡ ಮಹಾನ್ ವಿಜ್ಞಾನಿಗಳಲ್ಲಿ ಒಬ್ಬರು.

ಅಮೆರಿಕಾದ ಮೆಸಾಚುಸೆಟ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ್ದ ಶ್ರೀಯುತರು ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿ, ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದರು. ಆರ್ಯಭಟದಿಂದ ಮಂಗಳಯಾನದವರೆಗೆ ಬಾಹ್ಯಾಕಾಶಕ್ಕೆ ಅನೇಕ ಉಪಗ್ರಹಗಳನ್ನು ಸೇರಿಸಿದ ಕೀರ್ತಿ ಇವರದ್ದಾಗಿತ್ತು. 1985ರಲ್ಲಿ ಇಸ್ರೋ ಮುಖ್ಯಸ್ಥರಾಗಿದ್ದು, 1984-1994ರವರೆಗೆ ಇಸ್ರೋ ಅಧ್ಯಕ್ಷರಾಗಿ ತಮ್ಮ ಜೀವನವನ್ನು ಇಸ್ರೋಗಾಗಿ ಮುಡಿಪಾಗಿಟ್ಟಿದ್ದರು.

ಶ್ರೀಯುತರು 1972ರಲ್ಲಿ ಉಪಗ್ರಹ ನಿರ್ಮಾಣದ ಜವಾಬ್ದಾರಿ ಹೊತ್ತು ಭಾರತದ ಪ್ರಪ್ರಥಮ "ಆರ್ಯಭಟ"ವನ್ನು 1975ರಲ್ಲಿ ಅಭಿವೃದ್ಧಿಪಡಿಸಿ ಉಡಾಯಾನ ಮಾಡಿದರು. 1985ರಲ್ಲಿ ಭಾರತದ ಬಾಹ್ಯಾಕಾಶ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡು ರಾಕೆಟ್ ತಂತ್ರಜ್ಞಾನದ ಬಳಕೆಗೆ ವಿಶೇಷ ಆದ್ಯತೆ ನೀಡಿ, 1992ರಲ್ಲಿ ಎ.ಎಸ್.ಎಲ್.ವಿ. ರಾಕೆಟ್‌ನ್ನು ಉಡಾಯಾನ ಮಾಡಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

350ಕ್ಕೂ ಅಧಿಕ ಲೇಖನಗಳನ್ನು ರಾಷ್ಟ್ರೀಯ, ಅಂತಾರಾಷ್ಟೀಯ ವಿಜ್ಞಾನ ನಿಯತಕಾಲಿಕೆಗಳಲ್ಲಿ ಬರೆದಿದ್ದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ಪ್ರತಿಷ್ಠಿತ ಸ್ಪೇಸ್ ನಿಯತಕಾಲಿಕವು ಬಾಹ್ಯಾಕಾಶ ವಿಜ್ಞಾನಕ್ಕೆ ಕೊಡುಗೆ ನೀಡಿದ ಶ್ರೇಷ್ಟರಲ್ಲಿ ಒಬ್ಬರು ಎಂದು ಗುರುತಿಸಿತು. 1975ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1976ರಲ್ಲಿ ಪದ್ಮಭೂಷಣ ಪ್ರಶಸ್ತಿ, 1983ರಲ್ಲಿ ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿ, 1997ರಲ್ಲಿ ರವೀಂದ್ರನಾಥ ಠಾಗೂರ್ ಪ್ರಶಸ್ತಿ, 2001ರಲ್ಲಿ ನಾಡೋಜ ಗರಿ ಪ್ರಶಸ್ತಿ, 2005ರಲ್ಲಿ ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್‌ನಿಂದ ಭಾರತ ರತ್ನ ರಾಜೀವ್‌ಗಾಂಧಿ ಅವರ ಹೆಸರಿನಲ್ಲಿರುವ ಅತ್ಯುತ್ತಮ ನಾಯಕತ್ವ ಪ್ರಶಸ್ತಿ, 2007ರಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಜೀವಮಾನದ ಸಾಧನ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, 2017ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಅಲ್ಲದೆ ಇನ್ನಿತರೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಸದರಿಯವರ ನಿಧನದಿಂದ ರಾಜ್ಯ ಹಾಗೂ ದೇಶವು ಒಬ್ಬ ಬಾಹ್ಯಾಕಾಶ ವಿಜ್ಞಾನದ ಭೀಷ್ಮರನ್ನು ಕಳೆದುಕೊಂಡಂತಾಗಿದೆ.

## ೦9. <u>ಚಿಟ್ಟಾಣಿ ರಾಮಚಂದ್ರ ಹೆಗಡೆ</u>

ಯಕ್ಷಗಾನದ ಮೇರು ಕಲಾವಿದ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರು ದಿನಾಂಕ:03.10.2017ರಂದು ನಿಧನ ಹೊಂದಿರುತ್ತಾರೆ.

09ನೇ ಸೆಪ್ಟೆಂಬರ್, 1935ರಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಸಂತೆಗುಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭಾಸ್ಕೇರಿ ಗ್ರಾಮದ ಚಿಟ್ಟಾಣಿಯಲ್ಲಿ ಜನಿಸಿದ್ದ ಶ್ರೀಯುತರು ಚಿಟ್ಟಾಣಿ ಕುಣಿತ ಎಂಬ ತಮ್ಮದೇ ಆದ ವಿಶಿಷ್ಟ ಶೈಲಿಯ ನರ್ತನದಿಂದ ಖ್ಯಾತರಾಗಿದ್ದರು. ವೃತ್ತಿಯಲ್ಲಿ ಯಕ್ಷಗಾನ ಕಲಾವಿದರಾಗಿದ್ದರು.

ಶ್ರೀಯುತರು ಕೇವಲ 14ರ ಹದಿವಯಸ್ಸಿನಲ್ಲೇ ಯಕ್ಷಗಾನದ ಪ್ರಮುಖ ಪಾತ್ರಗಳನ್ನು ಮಾಡುವ ಮೂಲಕ ಬಾಳೆಗದ್ದೆ ರಾಮಚಂದ್ರ ಭಟ್ಟರ ಶಿಷ್ಯರಾಗಿ ಎಲ್ಲರ ಗಮನ ಸೆಳೆದಿದ್ದರು. ಖಳ ಪಾತ್ರಗಳಲ್ಲಿ ಅವರನ್ನು ಮೀರಿಸಿದ ಕಲಾವಿದರು ಇನ್ನೊಬ್ಬರಿಲ್ಲ ಎಂಬಷ್ಟರ ಮಟ್ಟಿಗೆ ಕಲೆಯಲ್ಲಿ ಪಳಗಿದ್ದರು. ಕೌರವ, ದುಷ್ಟಬುದ್ಧಿ, ಭಸ್ಮಾಸುರ, ಕೀಚಕ, ಕರ್ಣ, ರುದ್ರಕೋಪ, ಕಂಸ ಮೊದಲಾದ ಖಳ ಪಾತ್ರಗಳು ಅವರಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖ್ಯಾತಿ ತಂದ ಪಾತ್ರಗಳಾಗಿದ್ದವು. ಅವರ ಪಾತ್ರ ವೈಶಿಷ್ಟ್ಯತೆಯಿಂದಾಗಿ **ಚಿಟ್ಟಾಣಿ ಘರಾನಾ** ಎಂದು ಹೆಸರು ಬಂದಿದೆ.

ಯಕ್ಷಗಾನವನ್ನೇ ಉಸಿರಾಗಿಸಿಕೊಂಡಿದ್ದ ಶ್ರೀಯುತರ ವಿಶೇಷತೆಯೆಂದರೆ ಪದ್ಮ ಪ್ರಶಸ್ತಿಗೆ ಪಾತ್ರರಾದ ಮೊದಲ ಯಕ್ಷಗಾನ ಕಲಾವಿದರಾಗಿದ್ದರು. 1991ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2004ರಲ್ಲಿ ಜಾನಪದಶ್ರೀ, 2009ರಲ್ಲಿ ಶಿವರಾಂ ಕಾರಂತ, ಕಾರ್ಕಿ ವೆಂಕಟರಮಣ ಶಾಸ್ತ್ರಿ, 2012ರಲ್ಲಿ ಪದ್ಮಶ್ರೀ ಹಾಗೂ ಆಳ್ವಾಸ್ ನುಡಿಸಿರಿ ಪ್ರಶಸ್ತಿ, 2013ರಲ್ಲಿ ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿಗಳಲ್ಲದೆ ಇನ್ನಿತರೆ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ **"ಯಕ್ಷಗಾನ ರಂಗದ ಧ್ರುವತಾರೆ"**ಯನ್ನು ಕಳೆದುಕೊಂಡಂತಾಗಿದೆ.

**10. ಏಣಗಿ ಬಾಳಪ್ಪ**

ಹಿರಿಯ ರಂಗಭೂಮಿಯ ಕಲಾವಿದ ನಾಡೋಜ, ನಾಟ್ಯಭೂಷಣ, ಶತಾಯುಷಿ ಶ್ರೀ ಏಣಗಿ ಬಾಳಪ್ಪ ಅವರು ದಿನಾಂಕ:18.08.2017ರಂದು ನಿಧನ ಹೊಂದಿರುತ್ತಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಏಣಗಿ ಗ್ರಾಮದಲ್ಲಿ 1914ರಂದು ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ರಂಗಭೂಮಿ ಕಲಾವಿದರಾಗಿದ್ದರು.

**ನಡೆದಾಡುವ ರಂಗಭೂಮಿ ಎಂದೇ ಹೆಸರಾಗಿದ್ದ** ಬಾಳಪ್ಪನವರು ನಟರಾಗಿ, ನಾಟಕ ರಚನೆಗಾರರಾಗಿ, ನಿರ್ದೇಶಕರಾಗಿ ಅಪಾರ ಸೇವೆ ಸಲ್ಲಿಸಿದ್ದರು. ಮೊದಲಿಗೆ ಇತರ ತಂಡಗಳಲ್ಲಿ ಕಲಾವಿದರಾಗಿದ್ದ ಅವರು ನಂತರ ತಮ್ಮದೇ ಆದ ಸ್ವತಂತ್ರ ತಂಡ ರಚಿಸಿ, ನೂರಾರು ನಾಟಕಗಳನ್ನು ರಚಿಸಿದರು. ಅದರಲ್ಲಿ ಜಗಜ್ಯೋತಿ ಬಸವೇಶ್ವರ ನಾಟಕದ ಬಸವೇಶ್ವರ ಪಾತ್ರದಿಂದ ಪ್ರಸಿದ್ಧರಾಗಿದ್ದ ಇವರಿಗೆ ನಾಟ್ಯ ಭೂಷಣ ಬಿರುದು ದೊರಕಿತ್ತು ಹಾಗೂ ಶ್ರೀಯುತರು 432ಕ್ಕೂ ಅಧಿಕ ನಾಟಕ, 123 ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಿದ್ದರು. ಜಾನಪದ, ವೃತ್ತಿ, ಹವ್ಯಾಸಿ ಈ ಮೂರು ನೆಲೆಗಳ ರಂಗಭೂಮಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಶ್ರೀಯುತರು ಇಡೀ ವೃತ್ತಿ ರಂಗಭೂಮಿಗೆ ಚಾರಿತ್ರಿಕ ಮಹತ್ವ ತಂದು ಕೊಡಲು ಶ್ರಮಿಸಿದ್ದರು. ಹಲವಾರು ನಾಟಕಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಸ್ತ್ರೀ ಪಾತ್ರಕ್ಕೆ ಜೀವ ತುಂಬಿದ್ದರಲ್ಲದೆ, ಸ್ವಾತಂತ್ರ್ಯ ಹೋರಾಟದಲ್ಲಿ, ಕರ್ನಾಟಕ ಏಕೀಕರಣ ಚಳುವಳಿ ಹಾಗೂ ಗೋಕಾಕ್ ಚಳುವಳಿಗಳಲ್ಲಿ ಭಾಗವಹಿಸಿದ್ದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1973ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 1976ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ, 1978ರಲ್ಲಿ ಸಾಹಿತ್ಯ ಪರಿಷತ್, 1995ರಲ್ಲಿ ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿ, 2005ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ, 2006 ಹಾಗೂ 2017ರಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ಹಿರಿಯ ರಂಗಭೂಮಿ ಕಲಾವಿದ ಹಾಗೂ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡಂತಾಗಿದೆ.

(ಮುಂದು)...

(917)13.11.2017.11.40ಡಿಎಸ್-ಬಿಎನ್ಎಸ್

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, 8 ಬಾರಿ ವಿಧಾನ ಸಭಾ ಸದಸ್ಯರಾಗಿ ಹಾಗೂ ಎರಡು ಬಾರಿ ಲೋಕಸಭಾ ಸದಸ್ಯರಾಗಿದ್ದ ದಿವಂಗತ ಶ್ರೀ ಎನ್. ಧರ್ಮಸಿಂಗ್‌ರವರು ಹಲವಾರು ಖಾತೆಗಳನ್ನು ನಿರ್ವಹಿಸುವ ಮೂಲಕ ಸುಮಾರು 40-45 ವರ್ಷಗಳಷ್ಟು ದೀರ್ಘಕಾಲದ ಸೇವೆಯನ್ನು ಸಲ್ಲಿಸಿರುವುದರ ಜೊತೆಗೆ 2004 ರಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಸಹ ಅವರು ಅಧಿಕಾರ ವಹಿಸಿಕೊಂಡು ಈ ರಾಜ್ಯದ ಜನರ ಸೇವೆಯನ್ನು ಮಾಡಿದ್ದಾರೆ. 1996 ರಿಂದ 1998 ರವರೆಗೆ ಅವರು ನಮ್ಮ ಪಕ್ಷದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದಂತಹ ಸಂದರ್ಭದಲ್ಲಿ ಅವರ ಕೈಕೆಳಗೆ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಸುವರ್ಣಾವಕಾಶ ನನಗೆ ಸಿಕ್ಕಿತ್ತು. ಅವರು ಎಲ್ಲಾ ಜನರನ್ನು ಒಂದೇ ರೀತಿಯ ಭಾವನೆಯಿಂದ ಕಾಣುತ್ತಿದ್ದುದು ಹಾಗೂ ರಾಜಕೀಯ ಜೀವನವನ್ನು ಬಹಳ ತಾಳ್ಮೆಯಿಂದ ನಡೆಸಿದ ರೀತಿ ನಮಗೆಲ್ಲರಿಗೂ ಮಾದರಿಯಾಗಬೇಕಾಗಿದೆ. ಅವರು ತಮ್ಮ ಆಡಳಿತಾವಧಿಯ ಕಾಲದಲ್ಲಿ ಯಾವುದೇ ಕಾರಣಕ್ಕೂ ಕೋಪಕ್ಕೊಳಗಾಗದೆ, ಆಮಿಷಕ್ಕೊಳಗಾಗದೆ ಬಹಳ ಸೌಮ್ಯವಾಗಿ ರಾಜಕಾರಣ ಮಾಡಿರುವುದನ್ನು ನಾವೆಲ್ಲರೂ ಕಲಿಯಬೇಕಾಗಿದೆ.

ಶ್ರೀಯುತ ಪೋತ್‌ದಾರ್ ರಾಮಾಭಾವು ಭೀಮಾರಾವ್‌ರವರು ಇದೇ ಬೆಳಗಾವಿ ಜಿಲ್ಲೆಯವರು. ಅವರು ಬೆಳಗಾವಿ ನಗರದ ಕಾರ್ಖಾನೆಗಳಲ್ಲಿ ಮತ್ತು ರಾಜಕೀಯದಲ್ಲೂ ಹೆಚ್ಚಿನ ಸೇವೆಯನ್ನು ಮಾಡಿದ್ದಾರೆ. ನಮ್ಮ ಪಕ್ಷದಲ್ಲೂ ಅವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ತುರ್ತು ಪರಿಸ್ಥಿತಿಯಲ್ಲಿ ನಮ್ಮ ಪಕ್ಷವನ್ನು ತ್ಯಜಿಸಿ ಜನತಾ ಪಕ್ಷಕ್ಕೆ ಹೋಗಿ ಕೆಲಸ ಮಾಡಿದ್ದಾರೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀಯುತ ಬಿ.ಬಿ.ಶಿವಪ್ಪನವರು ಮತ್ತು ನಾನು ಮೊದಲ ಬಾರಿಗೆ ವಿಧಾನ ಸಭೆಯ ಶಾಸಕನಾಗಿದ್ದಾಗ ಅವರು ಕೂಡ 1999 ರಲ್ಲಿ ಶಾಸಕರಾಗಿದ್ದರು. ನಾನು ಅವರ ಜೊತೆಯಲ್ಲಿ ನಾಲ್ಕೈದು ವರ್ಷಗಳ ಕಾಲ ಹೆಚ್ಚಿನ ಒಡನಾಟದಲ್ಲಿದ್ದೆ. ಅವರು ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ರಾಜ್ಯಕ್ಕೆ ಮಾದರಿಯಾದ ರಾಜಕಾರಣವನ್ನು ಮಾಡಿ ನಮ್ಮೆಲ್ಲರನ್ನು ಅಗಲಿರುವುದು ನಮಗೆ ದುಃಖವನ್ನು ತಂದಿದೆ. ಅವರು ನಡೆದುಕೊಂಡು ಬಂದಿರುವ ದಾರಿಯನ್ನು ನಾವು ಕೂಡ ಅನುಸರಿಸಿದರೆ ನಮಗೆ ಉತ್ತಮವಾದ ಫಲಿತಾಂಶ ಸಿಗುತ್ತದೆ. ಅವರು ಬಹಳ ತಾಳ್ಮೆಯಿಂದ ರಾಜಕಾರಣವನ್ನು ಮಾಡಿದ್ದರು. ನಾವು ಇಂದು ಅದನ್ನು ಸ್ಮರಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೆ, ಮತ್ತೊಬ್ಬ ಮಿತ್ರರಾದ ಶ್ರೀಯುತ ಎಸ್. ಚಿಕ್ಕಮಾದುರವರು ಸುಮಾರು ನಾಲ್ಕು ಬಾರಿ ಶಾಸಕರಾಗಿದ್ದರು. ಅವರು ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಈಗ ಅವರು ಹಾಲಿ ವಿಧಾನ ಸಭೆ ಸದಸ್ಯರಾಗಿ ನಮ್ಮೆಲ್ಲರನ್ನು ಅಗಲಿದ್ದಾರೆ. ಅವರು ದೀರ್ಘಕಾಲ ಹಿಂದುಳಿದ, ಅಲ್ಪಸಂಖ್ಯಾತ, ದೀನದಲಿತರ ಸೇವೆಯಲ್ಲಿ ನಿರತರಾಗಿದ್ದರು. ಅವರು ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಇವತ್ತು ಆ ಭಾಗದಲ್ಲಿ ತುಂಬಲಾರದ ದೊಡ್ಡ vacuum create ಆಗಿದೆ. ಅವರ ಅಗಲಿಕೆಯಿಂದ ಬಹಳ ದುಃಖವಾಗಿದೆ.

ಡಾ:ಯು.ಆರ್.ರಾವ್‌ರವರು ಇಂದು ನಮ್ಮನ್ನು ಅಗಲಿದ್ದಾರೆ. ನಾನು ಕಳೆದ ಒಂದು ವರ್ಷದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವನಾಗಿ ಅವರ ಜೊತೆಯಲ್ಲಿ ಕೆಲಸ ಮಾಡುವ ಸೌಭಾಗ್ಯ ನನಗೆ ದೊರೆತ್ತಿತ್ತು. ಅವರ ನೇತೃತ್ವದಲ್ಲಿ ನಮ್ಮ Jawaharlal Nehru Planetarium ಅನ್ನು upgrade ಮಾಡಿದ್ದು ಅದನ್ನು ಇತ್ತೀಚೆಗೆ digitalization ಮಾಡಲಾಯಿತು. ಅವರು Indian Space Research Organisation (ISRO) ಸಂಸ್ಥೆಯಿಂದ ನಿವೃತ್ತರಾದ ಮೇಲೆ ಕರ್ನಾಟಕ ರಾಜ್ಯದಲ್ಲಿ ಬಹಳ ಹೆಚ್ಚಿನ ಆಸಕ್ತಿಯಿಂದ ಯಾವುದೇ ಆಮಿಷಕ್ಕೆ ಒಳಗಾಗದೆ ಹಾಗೂ ಯಾವುದೇ salary or perks ಅನ್ನು ತೆಗೆದುಕೊಳ್ಳದೆ ವಿಜ್ಞಾನ ಕ್ಷೇತ್ರದಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. Actually, ಅವರಿಗೆ ನಮ್ಮ ಭಾರತ ಸರ್ಕಾರ ‘ಭಾರತ ರತ್ನ’ ಪ್ರಶಸ್ತಿಯನ್ನು ಕೊಡಬೇಕಾಗಿತ್ತು. ಸುಮಾರು 40-50 ವರ್ಷಗಳ ಅವರ ದೀರ್ಘವಾದ ಸೇವೆಯಿಂದ ನಮ್ಮ ಕರ್ನಾಟಕ ರಾಜ್ಯ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮುಂದಾಗಿತ್ತು. ಇಂತಹ ಮಹನೀಯರಿಂದಲೇ ನಮ್ಮ ಕರ್ನಾಟಕ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜ್ಯ ಯಾವಾಗಲೂ ಬಾಹ್ಯಾಕಾಶ ಇಲಾಖೆಯಲ್ಲಿ ಮುಂದೆ ಇರುವುದು. ಡಾ:ಯು.ಆರ್.ರಾವ್ ರವರು pioneer ಆಗಿದ್ದರು. ಇಂತಹವರ ಮಾರ್ಗದರ್ಶನದಲ್ಲಿ ನಮ್ಮ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಂಶೋಧನೆಯಲ್ಲಿ ಈ ದೇಶದಲ್ಲೇ ಮೊದಲನೆ ಸ್ಥಾನದಲ್ಲಿದೆ ಎಂಬುದನ್ನು ನಾವು ಸ್ಮರಿಸಬೇಕಾಗುತ್ತದೆ.

(ಮುಂದು)

(918)13-11-2017/11-50/ಬಿಕೆಪಿ:ಬಿಎನ್ಎಸ್

**ಶ್ರೀ ಎಂ.ಆರ್.ಸೀತಾರಾಮ್(ಮುಂದು. .)**

ಮತ್ತೆ, ಯಕ್ಷಗಾನದ ಮೇರು ಕಲಾವಿದರಾದ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರು ದಿನಾಂಕ 3ನೇ ಅಕ್ಟೋಬರ್ 2017 ರಂದು ನಿಧನ ಹೊಂದಿರುತ್ತಾರೆ. ಅವರ ನಿಧನದಿಂದಾಗಿ ಯಕ್ಷಗಾನದ ಧೃವತಾರೆಯನ್ನು ನಮ್ಮ ಕರ್ನಾಟಕ ರಾಜ್ಯ ಕಳೆದುಕೊಂಡಿದೆ ಎಂದು ಹೇಳಬೇಕಾಗುತ್ತದೆ. ಮತ್ತೆ, ಹಿರಿಯ ರಂಗಭೂಮಿಯ ಕಲಾವಿದ ನಾಡೋಜ, ನಾಟ್ಯಭೂಷಣ ಶತಾಯಿಷಿ ಶ್ರೀ ಏಣಗಿ ಬಾಳಪ್ಪನವರು ನಿಧನ ಹೊಂದಿರುತ್ತಾರೆ. ನಡೆದಾಡುವ ರಂಗಭೂಮಿ ಎಂದೇ ಹೆಸರಾಗಿದ್ದ ಬಾಳಪ್ಪನವರು ನಟರಾಗಿ, ನಾಟಕ ರಚನೆಗಾರರಾಗಿ, ನಿರ್ದೇಶಕರಾಗಿ ಅಪಾರ ಸೇವೆ ಸಲ್ಲಿಸಿದ್ದರು. ಶ್ರೀಯುತರು 432ಕ್ಕೂ ಅಧಿಕ ನಾಟಕಗಳು, 123 ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಿದ್ದರು. 1973 ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 1976 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, 1978 ರಲ್ಲಿ ಸಾಹಿತ್ಯ ಪರಿಷತ್ ಪ್ರಶಸ್ತಿ, ಈ ರೀತಿಯಾಗಿ ಹಲವಾರು ಪ್ರಶಸ್ತಿಗಳು ಮತ್ತು ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಶ್ರೀಯುತರಿಗೆ ದೊರಕಿದ್ದವು. ಹಿರಿಯ ರಂಗಭೂಮಿ ಕಲಾವಿಧರರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಹಾಗೂ ಈ ಎಲ್ಲಾ ಅಗಲಿದ ನಾಯಕರಿಗೆ ಚಿರಶಾಂತಿಯನ್ನು ಹಾಗೂ ಇವರಗಳ ನಿಧನದಿಂದ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರಣಿಸಲೆಂದು ಹಾರೈಸುತ್ತೇನೆ.

ಕ್ಷಮಿಸಬೇಕು. ಹಾಗೆಯೇ ಸ್ವಾತಂತ್ರ ಯೋಧರು, ಶತಾಯಿಷಿ ಶ್ರೀಯುತ ವಿದ್ಯಾಧರ ಗುರೂಜಿಯವರು ದಿನಾಂಕ: 29-07-2017 ರಂದು ನಿಧನ ಹೊಂದಿದ್ದಾರೆ. ಶ್ರೀಯುತರು 1914 ರಲ್ಲಿ ಕಲಬುರಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಗುರುಮಿಠ್‌ಕಲ್‌ನಲ್ಲಿ ಜನಿಸಿದ್ದು, ಎಂ.ಎ., (ಹಿಂದಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದವಿಯನ್ನು ಪಡೆದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು 1962 ರಲ್ಲಿ ವಿಧಾನಸಭಾ ಸದಸ್ಯರಾಗಿ, 1988 ರಲ್ಲಿ ನಾಮನಿರ್ದೇಶಿತ ವಿಧಾನ ಪರಿಷತ್ತಿನ ಸದಸ್ಯರಾಗಿ, ಹಿಂದಿ ಪ್ರಚಾರ ಸಭಾದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ.

ಹಾಗೆಯೇ, ವಿಧಾನ ಪರಿಷತ್ತಿನ ಮಾನ್ಯ ಮಾಜಿ ಸದಸ್ಯರು ಹಾಗೂ ಹಿರಿಯ ಸಾಹಿತಿಗಳಾಗಿದ್ದ ಡಾ|| ಸೈಯದ್ ಏಜಾಸುದ್ದೀನ್ ರವರು ದಿನಾಂಕ: 21-08-2017 ರಂದು ನಿಧನ ಹೊಂದಿರುತ್ತಾರೆ. ಶ್ರೀಯುತರು ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯದ ಮಹಾರಾಣಿ ಕಾಲೇಜಿನಲ್ಲಿ ಹಿಂದಿ ಪ್ರೊಫೆಸರ್ ಆಗಿ ಕೆಲಸ ನಿರ್ವಹಿಸಿದ್ದರು. ಇವರು ಸಹ ನಮ್ಮ ಭಾಗದ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿ, ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ನಾಡಿನಲ್ಲಿ ಸಾಮಾಜಿಕ ಸಾಮರಸ್ಯ, ಭಾಷಾ ಸೌಹಾರ್ದತೆ ಹಾಗೂ ಸರ್ವಧರ್ಮ ಸಮನ್ವಯತೆಗೆ ದಶಕಗಳ ಕಾಲ ತಮ್ಮನ್ನು ಅರ್ಪಿಸಿಕೊಂಡು, ಸೇವೆ ಸಲ್ಲಿಸಿ ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆ. 1995 ರಿಂದ 2001 ರವರೆವಿಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಇನ್ನು, ಕರ್ನಾಟಕ ರಾಜ್ಯದ ಮಾಜಿ ಸಚಿವರು, ಲೋಕಸಭೆಯ ಮಾಜಿ ಸದಸ್ಯರು ಹಾಗೂ ಹಾಲಿ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಖಮರುಲ್ ಇಸ್ಲಾಂ ರವರು ದಿನಾಂಕ: 18-09-2017 ರಂದು ನಿಧನರಾಗಿದ್ದಾರೆ.

ಗುಲ್ಬರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಿಧಾನ ಸಭೆಯ ಸದಸ್ಯರಾಗಿ, ಗುಲ್ಬರ್ಗ ಕ್ಷೇತ್ರದ ಲೋಕಸಭಾ ಸದಸ್ಯರಾಗಿ, ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತರು 1978-1983, 1989-1994, 1994-1996, 1999-2004, 2008-2013 ಹಾಗೂ 2013-2017 ರವರೆಗೆ ಒಟ್ಟು ಆರು ಬಾರಿ ಸ್ಪರ್ಧಿಸಿ, ಎಲ್ಲಾ ಚುನಾವಣೆಗಳಲ್ಲಿಯೂ ಗೆಲವು ಸಾಧಿಸಿರುತ್ತಾರೆ. 1996-1998 ರವರೆಗೆ ಲೋಕ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಕಾರ್ಮಿಕ, ಸಣ್ಣ ಕೈಗಾರಿಕೆ, ಹಜ್, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ, ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಸದರಿಯವರ ನಿಧನದಿಂದ ರಾಜ್ಯವು ಮುಸ್ಲಿಂ ಸಮುದಾಯದ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೆ, ನಮ್ಮೆಲ್ಲರನ್ನು ಅಗಲಿರುವ ಈ ಎಲ್ಲಾ ನಮ್ಮ ನಾಯಕರುಗಳಿಗೆ ಚಿರಶಾಂತಿಯನ್ನು ಮತ್ತು ಅವರ ಕುಟುಂಬ ವರ್ಗದವರಿಗೆ ಅವರುಗಳ ನಿಧನದಿಂದ ಉಂಟಾಗಿರುವ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ತಮ್ಮೆಲ್ಲರ ಜೊತೆಯಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಈ ಹಿರಿಯರ ನಿಧನದಿಂದಾಗಿ ತಾವು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ವಿಶೇಷವಾಗಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನನಗೆ ಅನಿಸಿದ್ದು ಏನೆಂದರೆ ಯಾವ ಹಿಂದುಳಿದ ಮತ್ತು ದಲಿತ ಸಮಾಜಗಳಿವೆ, ಅವುಗಳಿಗೆ ಏನಾದರೂ ಮಾಡಿ ಒತ್ತು ಕೊಡಬೇಕು, ಅವರನ್ನು ಮೇಲೆತ್ತಬೇಕೆನ್ನುವ ಕಳಕಳಿ ಅವರಲ್ಲಿ ಇತ್ತು. ಅವರನ್ನು ನಾನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ನನಗೆ ಹೇಳಿದ್ದರು. ಯಾವುದೋ ಕಾರಣಕ್ಕೆ ಅವರನ್ನು ಬೆಳಗಿನ ಸಮಯದಲ್ಲಿ ಭೇಟಿ ಮಾಡಿದಾಗ ಅವರು ಆಗತಾನೆ ಕಛೇರಿ ಕೊಠಡಿಯಲ್ಲಿ ಕುಳಿತಿದ್ದರು. ಆಗ ಅವರು "ಬಾ ಅಪ್ಪ ಒಳಗಡೆ, ಬೆಳಗ್ಗೆಯೇ ಮೊದಲಿಗೆ ನಿಮ್ಮ ಕುರುಬನನ್ನು ನೋಡಿದ್ದೇನೆ, ಇವತ್ತು ನನಗೆ ಒಳ್ಳೆಯದಾಗುತ್ತೆ, ಎಂದು" ಹೇಳಿದರು. ಏಕೆಂದರೆ, ಕಾಂಗ್ರೆಸ್‌ನವರಿಗೆ ಒಳ್ಳೆಯದಾಗುವುದು ಕಮ್ಮಿ. ನಾನು ಆಗ ಅವರಿಗೆ ಹೇಳಿದೆ. ನೀವು ದೊಡ್ಡವರಿದ್ದೀರಿ, ಹಿರಿಯವರಿದ್ದೀರಿ. ನಿಜಕ್ಕೂ ಕೂಡ ನಿಮಗೆ ಒಳ್ಳೆಯದಾಗಲಿ ಎಂದೇ ನಾನು ಬಂದಿದ್ದೇನೆಂದು, ನಾನು ಬೇರೆ ಕೆಲಸಕ್ಕೆ ಬಂದಿಲ್ಲವೆಂದು ಹೇಳಿ, ಯಾವುದೋ ಒಂದು ಒಳ್ಳೆಯ ಕೆಲಸದ ವಿಷಯವನ್ನು ತೆಗೆದುಕೊಂಡು ಹೋಗಿದ್ದೆ. ಮುಖ್ಯಮಂತ್ರಿಗಳಾದ ಅವರು ಪಕ್ಷವನ್ನು ನೋಡದೇ ಸಾರ್ವಜನಿಕರ ಹಿತದೃಷ್ಟಿಯಿಂದ ಆ ಒಂದು ಕೆಲಸವನ್ನು ಮಾಡಿಕೊಟ್ಟರು. ನಾನು ನೀರಾವರಿ ಸಚಿವನಾದ ಸಂದರ್ಭದಲ್ಲಿ ನಾನು ಮಾಡಿದಂತಹ ಕೆಲಸವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. ಒಳ್ಳೆಯ ಉತ್ತಮ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿದ್ದಂತಹ ಆ ಸಂದರ್ಭದಲ್ಲಿ ಎಲ್ಲಾ ಪ್ರಾಜೆಕ್ಟ್‌ಗಳನ್ನು ಒಂದು ಬಾರಿ ನೋಡಿಕೊಂಡು ಬನ್ನಿ ಎಂದವರು ನನಗೆ ಕೆಲವು ಮಾತುಗಳನ್ನು ಹೇಳುತ್ತಿದ್ದರು. ನೀರಾವರಿ ಬಗ್ಗೆ ವಿರೋಧ ಪಕ್ಷದಲ್ಲಿರುವಂತಹ ಸಂದರ್ಭದಲ್ಲಿ ಆಡಳಿತ ಪಕ್ಷವನ್ನು ಟೀಕೆ ಮಾಡುವುದು ಬಹಳ ಸುಲಭ. ಆದರೆ, ಆಡಳಿತ ಪಕ್ಷಕ್ಕೆ ಬಂದಂತಹ ಸಂದರ್ಭದಲ್ಲಿ ನೀರಾವರಿ ಅಭಿವೃದ್ಧಿ ಮಾಡುವುದು ಏನಿದೆ, ಅದು ನಿಜಕ್ಕೂ ಬಹಳ ಕಷ್ಟದ ಕೆಲಸ. ಈ ಸಂದರ್ಭದಲ್ಲಿ ನಾನು ಇಬ್ಬರನ್ನು ನೆನಪು ಮಾಡಿಕೊಳ್ಳಲೇ ಬೇಕು. ಒಬ್ಬರು, ಶ್ರೀಯುತ ಧರ್ಮಸಿಂಗ್‌ರವರು ಇನ್ನೊಬ್ಬರು ಹಿರಿಯ ರಾಜಕಾರಣಿಗಳಾದ, ಪ್ರಸ್ತುತ ಲೋಕಸಭೆಯಲ್ಲಿರುವಂತಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು. ಉತ್ತರ ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಎಷ್ಟು ಆಸಕ್ತಿಯಿಂದ ಅವರು ತಂದಿದ್ದಾರೆಂದು ಹೇಳುವುದಕ್ಕೆ ನನಗೆ ಖುಷಿಯಾಗುತ್ತದೆ. ದುರದೃಷ್ಟವಶಾತ್ ಅವುಗಳಿಗೆ ಏನೇನು ರೂಪ ಸಿಗಬೇಕಾಗಿತ್ತು, ಇನ್ನು ಸಿಕ್ಕುತ್ತಿಲ್ಲ. ಅದಕ್ಕೋಸ್ಕರ ನಾನು ಶ್ರೀಮಾನ್ ಧರ್ಮಸಿಂಗ್‌ರವರನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಇನ್ನು ಆ ಯೋಜನೆಗಳು ಮುಕ್ತಾಯಗೊಂಡಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅದಕ್ಕೋಸ್ಕರವೇ ನಾನು ನೋವಿನಿಂದ ಹೇಳುತ್ತಿದ್ದೇನೆ. ಆದರೆ, ಅವರುಗಳಿಗೆ ಈ ವಿಚಾರದಲ್ಲಿ ಕಳಕಳಿ ಇತ್ತು. ಉತ್ತರ ಕರ್ನಾಟಕಕ್ಕೆ ಈ ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕು, ಅವುಗಳನ್ನು ಪೂರ್ಣಗೊಳಿಸಬೇಕು, ಸಮಸ್ಯೆಗಳನ್ನು ಬಗೆಹರಿಸಬೇಕೆನ್ನುವ ಆಸಕ್ತಿ ಅವರಿಗಿತ್ತು. ಸರ್ಕಾರ ಆ ನಿಟ್ಟಿನಲ್ಲಿ ಎಷ್ಟು ಗಮನಕೊಟ್ಟು ಪ್ರಯತ್ನ ಮಾಡಬೇಕೋ ಮಾಡಲಿ. ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರ ಆತ್ಮಕ್ಕೆ ಶಾಂತಿ ಸಿಕ್ಕುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ನಡೆಸಲಿ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಹಾಗೆಯೇ, ಪೋತ್‌ದಾರ್ ರಾಮಾಭಾವು ಭೀಮರಾವ್‌ರವರು ನಿಧನ ಹೊಂದಿರುತ್ತಾರೆ. ಅವರ ಬಗ್ಗೆ ನಾನು ಈ ಮೊದಲು ನೋಡಿರಲಿಲ್ಲ. ನಿಮ್ಮ ಸಂತಾಪ ಸೂಚನೆಯಲ್ಲಿ ತಿಳಿಸಿದ ಹಾಗೆ "ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ" ಎಂದು ಗೊತ್ತುವಳಿಯನ್ನು ಮಂಡಿಸುವ ಮೂಲಕ ಕನ್ನಡ ಪ್ರೇಮವನ್ನು ಮೆರೆದಿದ್ದರು. ಇಡೀ ರಾಜ್ಯದಲ್ಲಿ ಇಂತಹ ವ್ಯಕ್ತಿಗಳು ಬೇಕಾಗಿದ್ದಾರೆ. ಇಲ್ಲವೆಂದರೆ . . .

**ಶ್ರೀ ರಾಮಚಂದ್ರಗೌಡ:-** ಅವರು ಒಳ್ಳೆಯ ಮರಾಠಿ ಸಾಹಿತಿಗಳು ಸಹ ಆಗಿದ್ದರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹೌದು, ಅವರು ಒಳ್ಳೆಯ ಮರಾಠಿ ಸಾಹಿತಿಗಳು ಸಹ ಆಗಿದ್ದರು. ಅಂತಹವರು ಬೆಳಗಾವಿಯನ್ನು ಕರ್ನಾಟಕದ ಅವಿಭಾಜ್ಯ ಅಂಗ" ಎಂದು ಗೊತ್ತುವಳಿ ಮಂಡಿಸಿದ್ದು, ನನಗೆ ಅನಿಸುವಂತೆ ಅವರು ನಾಡಿನ ಜನತೆಗೆ ಇವರು ಒಬ್ಬ ಒಳ್ಳೆಯ ಮಾರ್ಗದರ್ಶಕರೆಂದು ಹೇಳುವ ಮೂಲಕ ಅವರನ್ನು ನೆನಪು ಮಾಡಿಕೊಳ್ಳುತ್ತೇನೆ.

ಹಾಗೆಯೇ, ಶ್ರೀಯುತ ಬಿ.ಬಿ.ಶಿವಪ್ಪನವರು ದಿನಾಂಕ: 31-07-2017 ರಂದು ನಿಧನ ಹೊಂದಿರುತ್ತಾರೆ. ಅವರ ಜೊತೆಯಲ್ಲಿ ನಾನು ಹತ್ತಾರು ವರ್ಷ ಕಳೆದಿದ್ದೇನೆ. ಅವರು ಕಾಂಗ್ರೆಸ್ ಪಕ್ಷದಿಂದ ಭಾರತೀಯ ಜನತಾ ಪಕ್ಷಕ್ಕೆ ಬಂದ ಮೇಲೆ, ಅವರ ಮನೆಗೆ ನಾವು ಹೋದಂತಹ ಸಂದರ್ಭದಲ್ಲಿ ಅವರ ನಡವಳಿಕೆಯನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿ ನಾನು ನಿಜವಾಗಿಯೂ ಕಲಿತಿದ್ದೇನೆ. ಯಾರೇ ಅವರ ಮನೆಗೆ ಬರಲಿ " ಬಾರಪ್ಪ ಕುಳಿತುಕೊ ಏನಾಗಬೇಕು" ಎಂದು ಕೇಳುತ್ತಿದ್ದರು. ಆ ಕೆಲಸ ಆಗುತ್ತೋ, ಬಿಡುತ್ತೋ ಅದು ಆಮೇಲೆ. ಅವರು ಕೂರಿಸಿ, ಮಾತಾನಾಡಿಸುವಂತಹ ಸಜ್ಜನಿಕೆಯ ವ್ಯಕ್ತಿತ್ವವನ್ನು ನಾನು ಶಿವಪ್ಪನವರಿಂದ ಕಲಿತಿದ್ದೇನೆ. ಅದರಿಂದ ಇವತ್ತಿನವರೆವಿಗೂ ರಾಜಕಾರಣದಲ್ಲಿ ನನಗೆ ಅನುಕೂಲವಾಗಿದೆ. ಅದು ನಮ್ಮ ಕರ್ತವ್ಯ. ರಾಜಕಾರಣಿಗಳು ಚುನಾಯಿತ ಪ್ರತಿನಿಧಿಗಳಾದ ನಮ್ಮ ಹತ್ತಿರ ಏತಕ್ಕೆ ಬರುತ್ತಾರೆಂದರೆ ಅವರು ನಮಗೆ ಏನೋ ಒಂದು ಅನುಕೂಲ ಮಾಡಿಕೊಡುತ್ತಾರೆಂದು ನಮ್ಮ ಹತ್ತಿರ ಬರುತ್ತಾರೆ. ಆ ನಂಬಿಕೆಯನ್ನು ಉಳಿಸಿಕೊಳ್ಳಬೇಕಾದರೆ ಪ್ರೀತಿಯಿಂದ ಕೂರಿಸಿ, ಮಾತುಕತೆ ಮಾಡಬೇಕಲ್ಲವೇ? ಅದನ್ನು ನಾನು ಶ್ರೀಮಾನ್ ಶಿವಪ್ಪನವರಿಂದ ನಿಜವಾಗಿಯೂ ಕಲಿತಿದ್ದೇನೆ. ಶಿವಪ್ಪನವರು ನಮ್ಮ ಪಕ್ಷಕ್ಕೆ ಮಾಡಿದಂತಹ ಕೆಲಸ ಇವತ್ತು ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಸರ್ಕಾರ ರಚನೆ ಮಾಡಿದ್ದೆವು, ಒಂದು ರೂಪಕ್ಕೆ ಬಂದಿದ್ದೇವೆ.

ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದಿದೆ. ಇದೆಲ್ಲಾ ಬರುವುದಕ್ಕೆ ಶಿವಪ್ಪನವರಂತಹ ಹಿರಿಯರ ತ್ಯಾಗ. ಅವರ ಹತ್ತಿರ ಒಂದು ಹಳೆಯ ಕಾರು ಇತ್ತು. ಈ ವಿಚಾರವನ್ನು ಮಾನ್ಯ ಸಭಾಪತಿಯವರಾದ ಶ್ರೀಮಾನ್ ಶಂಕರಮೂರ್ತಿಯವರಿಗೆ ಹೇಳುವಂತಹ ಅಗತ್ಯ ಇಲ್ಲ. ನೀವು ಅವರ ಒಡನಾಡಿಗಳಾಗಿ ಕೆಲಸ ಮಾಡಿದ್ದೀರಿ. ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಭಾಷಣ ಮಾಡುತ್ತಿದ್ದರೆ ನೀವು ಅದನ್ನು ಅನುವಾದ ಮಾಡುತ್ತಿದ್ದಿರಿ. ಅವರು ಶಿವಪ್ಪನವರ ಕಾರಿನಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಬರುತ್ತಿದ್ದರು. ಆ ಸಂದರ್ಭದಲ್ಲಿ ಅದನ್ನು ಬಿಟ್ಟರೆ ನಮಗೆ ಬೇರೆ ಏನೂ ಇರಲಿಲ್ಲ. ಭಾರತೀಯ ಜನತಾ ಪಕ್ಷದಲ್ಲಿ ಯಾವುದೇ ಆಸ್ತಿ-ಪಾಸ್ತಿ ಇರಲಿಲ್ಲ. ಆಗಿನ ನಮ್ಮ ಆಸ್ತಿ ಎಂದರೆ ಸಾಮಾನ್ಯ ಕಾರ್ಯಕರ್ತರೆ. ಅವರಿಗೆ ಸ್ಫೂರ್ತಿಯನ್ನು ಕೊಟ್ಟುಕೊಂಡು, ಇಡೀ ರಾಜ್ಯದಲ್ಲಿ ಅವರ ಕಾರಿನಲ್ಲಿಯೇ ಅವರೇ ಓಡಾಡಿಕೊಂಡು ಎಲ್ಲರನ್ನೂ ಜೊತೆಗೆ ಸೇರಿಸಿ, ಆಗ ಸಂಕಷ್ಟದಲ್ಲಿರುವಾಗ ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಒಂದು ಸ್ಥಿತಿಗೆ ಬರುವುದಕ್ಕೆ ಶ್ರಮಿಸಿದ ಹಿರಿಯರಾದ ಶ್ರೀಯುತ ಶಿವಪ್ಪನವರನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. ಅವರ ಶ್ರಮದ ಫಲವಾಗಿ ಇವತ್ತು ರಾಜ್ಯದಲ್ಲಿ ಮತ್ತು ದೇಶದಲ್ಲಿ ಭಾರತೀಯ ಜನತಾಪಾರ್ಟಿ ಈ ಸ್ಥಿತಿಗೆ ಬರಲಿಕ್ಕೆ ಕಾರಣವಾಗುತ್ತದೆ. ಅವರು ನಡೆದಂತಹ ದಾರಿಯಲ್ಲಿ ನಾವು ನಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದು ರಾಜ್ಯಕ್ಕೆ ಮತ್ತು ದೇಶಕ್ಕೆ ಒಳ್ಳೆಯದಾಗುತ್ತದೆನ್ನುವ ವಿಶ್ವಾಸ ನನಗೆ ಇದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ಶ್ರೀಯುತ ವಿದ್ಯಾಧರ ಗುರೂಜಿಯವರು ದಿನಾಂಕ: 29-07-2017 ರಂದು ನಿಧನ ಹೊಂದಿರುತ್ತಾರೆ. ನಾನು ಈ ಭಗತ್‌ಸಿಂಗ್, ರಾಜಗುರು, ಸುಖ್‌ದೇವ್ ಇವರುಗಳ ಹೆಸರುಗಳ ಬಗ್ಗೆ ಹೇಳುವುದಾದರೆ ಇವರುಗಳು ಭಾರತ ಸ್ವಾತಂತ್ರಕ್ಕೆ ಹೋರಾಟ ಮಾಡಿದಂತಹವರು, ಬಲಿದಾನ ಮಾಡಿದಂತಹವರು ಎಂದು ಹೆಸರುಗಳನ್ನು ಮಾತ್ರ ಕೇಳಿದ್ದೆವು. ಆದರೆ, ಆ ಸಂದರ್ಭದಲ್ಲಿ ಶ್ರೀಯುತ ವಿದ್ಯಾಧರ ಗುರೂಜಿಯವರು ಭಗತ್‌ಸಿಂಗ್, ರಾಜಗುರು, ಸುಖ್‌ದೇವ್‌ರವರನ್ನು 1931 ರಲ್ಲಿ ಗಲ್ಲಿಗೇರಿಸಿದಂತಹ ದು:ಖದ ಸುದ್ದಿಯನ್ನು ಕೇಳಿದಾಗ ಎಲ್ಲರನ್ನು ಜೊತೆಯಲ್ಲಿ ಕರೆದುಕೊಂಡು ಗುರುಮಿಠ್‌ಕಲ್‌ನಲ್ಲಿ ಮೆರವಣಿಗೆ ಏರ್ಪಡಿಸಿ, ಬ್ರಿಟಿಷರ ವಿರುದ್ಧ ಆ ಸಂದರ್ಭದಲ್ಲಿಯೇ ಘೋಷಣೆಗಳನ್ನು ಕೂಗಿದರು. 1938 ರಿಂದ 1942 ರವರೆವಿಗೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು ಎಂದರೆ ನಮ್ಮ ದೇಶದ ಸ್ವಾತಂತ್ರಕ್ಕೋಸ್ಕರ ಹೋರಾಟ ಮಾಡಿದಂತಹ ಮಹಾಪುರುಷರನ್ನು ಎಷ್ಟು ಬಾರಿ ಸಾಷ್ಟಾಂಗ ನಮಸ್ಕಾರ ಮಾಡಿದರು ಸಾಕಾಗುವುದಿಲ್ಲ.

**ಮುಂದು. .**

(919)13.11.2017/12.00/ಎಸ್‌ವಿ-ಕೆಎಸ್

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು) (ಮುಂದು):-**

ಇಂಥವರ ಒಂದು ಸಾಲಿನಲ್ಲಿ ದಿವಂಗತ ಶ್ರೀ ವಿದ್ಯಾಧರ ಗುರೂಜಿಯವರು ಸೇರುತ್ತಾರೆ. ಅವರು ಕಲಬುರಗಿ ಜಿಲ್ಲೆಯವರಾಗಿದ್ದು, ಅವರ ಪುತ್ರನೂ ಸಹ ನನಗೆ ಬಹಳ ಆತ್ಮೀಯರಾಗಿದ್ದಾರೆ. ಅಂತಹ ಮಹನೀಯರ ತ್ಯಾಗ-ಬಲಿದಾನಗಳು ನಮಗೆ ಮಾರ್ಗದರ್ಶನವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ದಿವಂಗತ ಡಾ: ಸೈಯದ್ ಏಜಾಸುದ್ದೀನ್‌ರವರು ನನಗೆ ಒಂದು ದಿನ ರೈಲಿನಲ್ಲಿ ಸಿಕ್ಕಿದ್ದರು. ಅವರು ಸಹಜವಾಗಿ ಮಾತನಾಡುತ್ತಿದ್ದರು. ಅವರನ್ನು ಮಾತನಾಡಿಸಿದಂತಹ ಸಂದರ್ಭದಲ್ಲಿ ನಿಜಕ್ಕೂ ಕೂಡ ಅವರು ಯ್ಯಾರೆಂದು ನನಗೆ ತಿಳಿದಿರಲಿಲ್ಲ. ಬಹಳ ದೊಡ್ಡ ಮನುಷ್ಯರು. ಹಿಂದಿ, ಆಂಗ್ಲ, ಕನ್ನಡ ಮತ್ತು ಎಲ್ಲಾ ಭಾಷೆಗಳನ್ನು ಅರಿತವರಾಗಿದ್ದರು. ಅವರನ್ನು "ನೀವು ಯಾರು" ಎಂದು ಹೇಗೆ ಕೇಳುವುದು ಎಂದು ಸುಮ್ಮನಿದ್ದೆ. ಕೊನೆಯಲ್ಲಿ ವಿಧಿಯಿಲ್ಲದೆ ಕೇಳಿದಾಗ, ಅವರು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷ ಎಂದು ಹೇಳಿದರು. ಜೈನ ಸಾಹಿತ್ಯದಲ್ಲಿಯೂ ಸಹ ಅವರು ಅತಿ ಹೆಚ್ಚು ಜ್ಞಾನವನ್ನು ಪಡೆದಿದ್ದರು ಎನ್ನುವ ಅಂಶವು ಸಂತಾಪ ಸೂಚನೆ ನಿರ್ಣಯದಲ್ಲಿ ಇದೆ.

ದಿವಂಗತ ಶ್ರೀ ಖಮರುಲ್ ಇಸ್ಲಾಂರವರದ್ದು ವರ್ಣರಂಜಿತ ವ್ಯಕ್ತಿತ್ವ. ಅವರ ವ್ಯಕ್ತಿತ್ವ ಹೇಗಿತ್ತು ಎಂದರೆ ಅವರು ಏನೇನು ಒಳ್ಳೆಯದನ್ನು ಮಾಡಿದರು, ಏನೇನು ತಪ್ಪು ಮಾಡಿದರು ಎಂಬುದನ್ನೆಲ್ಲಾ ಈ ಸಮಾಜ ನೋಡಿದೆ. ಅವರು ನಮ್ಮ ಮುಂದೆ ಇಲ್ಲದಂತಹ ಸಂದರ್ಭದಲ್ಲಿ ಅವರ ಬಗ್ಗೆ ಟೀಕೆ ಮಾಡುವುದು ನಮ್ಮ ಸಂಸ್ಕೃತಿಯಲ್ಲ. ಆದರೆ ಅವರಲ್ಲಿದ್ದಂತಹ ಒಳ್ಳೆಯ ಗುಣಗಳನ್ನು ನೆನಪು ಮಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಹಾಗಾಗಿಯೇ ಅವರದ್ದು ವರ್ಣರಂಜಿತ ವ್ಯಕ್ತಿತ್ವ ಎಂದು ಹೇಳಿದ್ದು.

ದಿವಂಗತ ಶ್ರೀ ಚಿಕ್ಕಮಾದು ಅವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರು. ನಾನು ಭಾರತೀಯ ಜನತಾ ಪಕ್ಷದ ಅಧ್ಯಕ್ಷನಾಗುತ್ತಿದ್ದ ಹಾಗೆ ನನ್ನನ್ನು ಹುಡುಕಿಕೊಂಡು ಬಂದಿದ್ದರು. ನನಗೆ ಹಾರ ಹಾಕಿ ಸಿಹಿಯನ್ನು ಕೊಟ್ಟು ಭಾರತೀಯ ಜನತಾ ಪಕ್ಷದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿರುವುದೇ ನನಗೆ ಸಂತೋಷ ಎಂದು ಹೇಳಿದರು. ಇಂದು ಇಡೀ ದೇಶದಲ್ಲಿ ಹಿಂದುಳಿದ ವರ್ಗಗಳ ಅನೇಕರು ಮುಖ್ಯಮಂತ್ರಿಗಳಾಗಿದ್ದಾರೆ, ಆ ಪ್ರಶ್ನೆ ಬೇರೆ. ಹಿಂದುಳಿದ ವರ್ಗದವರು, ದಲಿತರು ಎಂದರೆ ರಾಜಕಾರಣಿಗಳು ಏಕೆ ಹೆಚ್ಚಿನ ಆಸಕ್ತಿಯನ್ನು ವಹಿಸುವುದಿಲ್ಲ ಎಂದು ಶ್ರೀ ಚಿಕ್ಕಮಾದುರವರ ಜೊತೆಯಲ್ಲಿ ಚರ್ಚೆ ಮಾಡಿದಾಗ, ಅವರು ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದ ವ್ಯಕ್ತಿ ಎಂ.ಎಲ್.ಎ ಆಗುವುದಾಗಲೀ, ಎಂ.ಎಲ್.ಸಿ. ಆಗುವುದಾಗಲೀ, ಎಂ.ಪಿ. ಆಗುವುದಾಗಲೀ ಬಹಳ ಕಷ್ಟ. ಈ ಸಮಾಜದಲ್ಲಿರುವ ಜಾತಿ ವ್ಯವಸ್ಥೆಯಲ್ಲಿ ಹಿಂದುಳಿದವರು ಮೇಲೇಳುವುದು ಬಹಳ ಕಷ್ಟ. ದಲಿತರಿಗಾದರೂ ವಿಧಿಯಿಲ್ಲದೆ ಸೀಟನ್ನು ಕೊಡಲೇ ಬೇಕು, ಕೊಡುತ್ತಾರೆ. ಹಿಂದುಳಿದ ವರ್ಗದವರ ಕಥೆಯೇ ಬೇರೆ? ಯಾರೋ ಒಬ್ಬರ ಬಾಲಂಗೋಚಿಯಾಗಿ ಹೋಗಬೇಕು. ಇಲ್ಲದಿದ್ದರೆ ದುಡ್ಡು ಇಟ್ಟುಕೊಳ್ಳಬೇಕೆಂದು ಇದನ್ನೆಲ್ಲಾ ನನಗೆ ಶ್ರೀ ಚಿಕ್ಕಮಾದುರವರು ಹೇಳಿದ್ದರು. ಇದನ್ನೆಲ್ಲಾ ನಾನು ಅನುಭವಿಸುತ್ತಿದ್ದೇನೆ. ಆದರೆ ನಿಮ್ಮ ಪಕ್ಷ ಹಿಂದುಳಿದ ವರ್ಗದವರನ್ನು ಗುರುತಿಸಿ, ನಿಮ್ಮನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದೆ. ಇದಕ್ಕಾಗಿ ನಾನು ನಿಮ್ಮನ್ನೂ ಹಾಗೂ ನಿಮ್ಮ ಪಕ್ಷವನ್ನೂ ಅಭಿನಂದಿಸಲಿಚ್ಛಿಸುತ್ತೇನೆ ಎಂದು ಹೇಳಿದರು. ಅವರು ತಮ್ಮ ಅಂತಿಮ ದಿನಗಳಲ್ಲಿ ಹಲವಾರು ಕಾಯಿಲೆಗಳಿಂದ ಬಳಲಿ ಮೃತರಾದರು ಎಂದು ಕೇಳಿ ನನಗೆ ಬಹಳ ದುಃಖವಾಯಿತು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರೊಫೆಸರ್ ಉಡುಪಿ ರಾಮಚಂದ್ರ ರಾವ್‌ರವರು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರು ಹಾಗೂ 'ಬಾಹ್ಯಾಕಾಶ ಭೀಷ್ಮ' ಎಂದೇ ಹೆಸರು ಪಡೆದಿದ್ದ ಅಂತರರಾಷ್ಟ್ರೀಯ ಖ್ಯಾತಿಯ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಎಂದೇ ಚಿರಪರಿಚಿತರು. ಪ್ರಪಂಚದ ಮುಂದುವರೆದ ರಾಷ್ಟ್ರಗಳ ಮುಂದೆ ಭಾರತ ಬಹಳ ಹಿಂದೆ ಇದೆ ಎನ್ನುವಂತಹ ಭಾವನೆ ಇತ್ತು. ವಿದೇಶದವರು ಭಾರತವನ್ನು 'ಭಿಕ್ಷುಕರ ನಾಡು', ಇವರು ದುಡ್ಡು ಕೇಳುವುದಕ್ಕೆ ಬರುತ್ತಾರೆ ಎಂದು ತಿಳಿದುಕೊಂಡಿದ್ದರು. ಅಮೇರಿಕಾದಿಂದ ನಮ್ಮ ದೇಶಕ್ಕೆ ಗೋಧಿ, ಹಾಲುಪುಡಿ ಎಲ್ಲಾ ಆಮದು ಮಾಡಿಕೊಳ್ಳಲಾಗುತ್ತಿತ್ತು. ಇಂದು ಪ್ರೊ.ಯು.ಆರ್.ರಾವ್ ಎನ್ನುವಂತಹವರು ಭಾರತ ಪ್ರಪಂಚದ ಯಾವುದೇ ರಾಷ್ಟ್ರಕ್ಕಿಂತ ಏನೂ ಕಡಿಮೆ ಇಲ್ಲ ಎಂಬ ಹಿರಿಮೆಯನ್ನು ತಂದು ಕೊಟ್ಟಿದ್ದಾರೆ. ಇವರ ಸಾಧನೆಗಳ ಬಗ್ಗೆ, ಪ್ರಶಸ್ತಿಗಳ ಬಗ್ಗೆ ತಾವು ಕೊಂಡಾಡಿದ್ದೀರಿ. ಇಂತಹ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿರುವುದು ನಮಗೆ ಬಹಳ ದುಃಖವಾಗಿದೆ.

ಇತ್ತೀಚೆಗೆ ನಾನು ದಕ್ಷಿಣ ಕನ್ನಡ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ದಿವಂಗತ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದರು. ಅವರ ಹೆಸರಿನಲ್ಲಿ ಏರ್ಪಡಿಸಲಾಗಿದ್ದ ಒಂದು ಯಕ್ಷಗಾನ ಕಾರ್ಯಕ್ರಮಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಅವರು ಯಾವ ಯಾವ ಪಾತ್ರದಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದರು ಎಂದು ತಾವು ಹೇಳಿರುತ್ತೀರಿ. ಅಂತಹ ಆಕರ್ಷಕ ವ್ಯಕ್ತಿತ್ವವನ್ನು ಅವರು ಹೊಂದಿದ್ದರು.

ರಂಗಭೂಮಿ ಕಲಾವಿದರಾಗಿದ್ದಂತಹ ಶ್ರೀ ಏಣಗಿ ಬಾಳಪ್ಪನವರನ್ನು ನಾವು ಕಳೆದುಕೊಂಡಿರುವುದು ಬಹಳ ನೋವಿನ ಸಂಗತಿ. ಒಟ್ಟಾರೆ ಕರ್ನಾಟಕ ರಾಜ್ಯದ ಇಂತಹ ಹಲವಾರು ಮಹನೀಯರನ್ನು ಕಳೆದುಕೊಂಡಿದ್ದು, ಇವರ ಸ್ಥಾನಗಳನ್ನು ತುಂಬುವುದು ಅಸಾಧ್ಯ. ಏಕೆಂದರೆ ಅವರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ಏನೇನು ಒಳ್ಳೆಯದನ್ನು ಮಾಡಿದ್ದಾರೆಯೋ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದಾಗ ಮಾತ್ರ ಅಗಲಿದ ಗಣ್ಯರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿ, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲಿ ಎಂದು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಸಂತಾಪ ಸೂಚಕ ನಿರ್ಣಯದಲ್ಲಿ ಎರಡು ಸಣ್ಣ ತಿದ್ದುಪಡಿಗಳನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಪದ್ಮಶ್ರೀ ಎನ್ನುವುದು ಒಂದು ರಾಷ್ಟ್ರೀಯ ಪ್ರಶಸ್ತಿ. ಮೇರು ಕಲಾವಿದರಾದ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಎಂದಷ್ಟೇ ಹಾಕಲಾಗಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಎಂಬುದನ್ನು ಅವರ ಹೆಸರಿನ ಮುಂದೆ ಉಲ್ಲೇಖ ಮಾಡಿರುವುದಿಲ್ಲ. ಈ ತಿದ್ದುಪಡಿಗಳನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ, ಮೃತರ ಗೌರವಾರ್ಥ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಮೃತರ ಗೌರವಾರ್ಥ ಸದನವು ಒಂದು ನಿಮಿಷ ಕಾಲ ಮೌನವನ್ನಾಚರಿಸಿತು.)**

ಸದನದಲ್ಲಿ ಪ್ರಸ್ತಾಪಿಸಲಾದ ಸಂತಾಪ ಸೂಚನಾ ನಿರ್ಣಯವನ್ನು ಮೃತ ಗಣ್ಯರ ಕುಟುಂಬದವರಿಗೆ ಕಳುಹಿಸಲಾಗುವುದು.

## 4. ಪ್ರಕಟಣೆಗಳು

**ಸಭಾಪತಿಯವರು:–** ಸಭೆಯ ಗಮನಕ್ಕೆ ಒಂದೆರಡು ಸಣ್ಣ ಪ್ರಕಟಣೆಗಳನ್ನು ತರಬೇಕಿದೆ.

ಅ) ನಮ್ಮ ಸದನದ ಇಬ್ಬರು ಗೌರವಾನ್ವಿತ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ ಮತ್ತು ಶ್ರೀ ಹೆಚ್.ಎಂ.ರೇವಣ್ಣರವರು ಹೊಸದಾಗಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅವರು ಈಗ ಸದನದಲ್ಲಿರುತ್ತಾರೆ. ಅವರುಗಳನ್ನು ಹಾಗೂ ತಮಗೆಲ್ಲರಿಗೂ ಪರಿಚಯವಿರುವಂತಹ ಶ್ರೀ ಸಿ.ಎಂ.ಇಬ್ರಾಹಿಂರವರು ನೂತನವಾಗಿ ವಿಧಾನ ಪರಿಷತ್ ಸದಸ್ಯರಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿ ಬಂದಿದ್ದಾರೆ. ಅವರಿಗೂ ಸಹ ಸ್ವಾಗತವನ್ನು ಬಯಸುತ್ತೇನೆ.

ಆ) ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಮಹಿಳೆಯರು ಯಾರೂ ಪೂರ್ಣಕಾಲೀನ ಕಾರ್ಯದರ್ಶಿಯಾಗಿ ಕಾರ್ಯವನ್ನು ನಿರ್ವಹಿಸಿರಲಿಲ್ಲ. ವಿಧಾನ ಪರಿಷತ್ತಿನ ಹೆಗ್ಗಳಿಕೆ ಎಂದರೆ, ಒಂದು ತಿಂಗಳ ಮಟ್ಟಿಗೆ ಒಬ್ಬ ಮಹಿಳೆ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿಯನ್ನು ಹೊಂದಿದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ ಸದನ ನಡೆಯುತ್ತಿರಲಿಲ್ಲ. ತದನಂತರ ಆ ಸ್ಥಾನದಲ್ಲಿ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿಯವರು ವಿಧಾನ ಪರಿಷತ್ತು ಸಚಿವಾಲಯದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರನ್ನೂ ಸಹ ನಿಮ್ಮೆಲ್ಲರ ಪರವಾಗಿ ಅಭಿನಂದಿಸಬಯಸುತ್ತೇನೆ.

ಇ) ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 20.06.2017ರಂದು "ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017" ಅನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಮತ್ತೊಂದು ಪ್ರಮುಖವಾಗಿರುವ ಪ್ರಕಟಣೆಯನ್ನು ಈಗಾಗಲೇ 'Bulletin' ಮೂಲಕ ತಿಳಿಸಿರುತ್ತೇನೆ. ಈಗ ಅದನ್ನು ಓದಿ ಹೇಳುತ್ತೇನೆ.

ಈ) "ಕರ್ನಾಟಕ ರಾಜ್ಯದ ಏಕಮೇವ ನೌಕಾ ನೆಲೆಯ (ಸೀಬರ್ಡ್) ಕೇಂದ್ರ ಕಛೇರಿಯು ಕಾರವಾರದಲ್ಲಿ ನೆಲೆಗೊಂಡಿದ್ದು, ಕರ್ನಾಟಕ ರಾಜ್ಯದ ಮಾನ್ಯ ಸಂಸದರುಗಳು, ವಿಧಾನ ಸಭಾ/ವಿಧಾನ ಪರಿಷತ್ತಿನ ಸದಸ್ಯರು ಮತ್ತು ಅಧಿಕಾರಿಗಳು ಈ ನೌಕಾ ನೆಲೆಗೆ ಭೇಟಿ ನೀಡಿ ಅಲ್ಲಿ ಕಾರ್ಯ ತತ್ಪರವಾಗಿರುವ ನೌಕೆಯ ಕಾರ್ಯಕ್ಷಮತೆ ಹಾಗೂ ಅವುಗಳ ಸ್ಥಿತಿ-ಗತಿಗಳ ಬಗೆಗಿನ ಪರಿಚಯ ಹೊಂದಬೇಕೆಂದು ಮಾನ್ಯ ಪ್ರಧಾನ ಮಂತ್ರಿಯವರು ಅಪೇಕ್ಷಿಸಿರುವ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ ದಿನಾಂಕ 18.11.2017ರ ಶನಿವಾರದಂದು ಭೇಟಿ ನೀಡಲು ವ್ಯವಸ್ಥೆ ಮಾಡಲಾಗಿರುತ್ತದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ."

**(...ಮುಂದು)**

(920)13.11.2017/12.10/ಕೆ.ಜಿ-ಕೆಎಸ್

**ಸಭಾಪತಿಯವರು:-** ನಾವು ಈಗಾಗಲೇ Bulletin ಕಳುಹಿಸಿದ್ದೇವೆ. ಈಗಾಗಲೇ ಸಾಕಷ್ಟು ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದೀರಿ. ಆದರೆ, ನನ್ನ ಒಂದು ಸಣ್ಣ ಕೋರಿಕೆ ಇದೆ. ಸದರಿ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಎಲ್ಲರೂ ಬರಬೇಕು, ತಾವು ಬರುತ್ತೇವೆಂದು ಹೇಳಿದರೆ, ಇವತ್ತು ಸಂಜೆಯೊಳಗೆ ಕಾರ್ಯದರ್ಶಿಯವರ ಕಛೇರಿಯಲ್ಲಿ ತಮ್ಮ ತಮ್ಮ ಹೆಸರುಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಂದಾಯಿಸಬೇಕು. ಏಕೆಂದರೆ, ಇಲ್ಲಿ ಎರಡು ಸಂಗತಿಗಳು ಇವೆ. ಒಂದು ನಾವು ಅಲ್ಲಿಗೆ ಹೋಗಿ ಬರುವುದಕ್ಕೆ ವ್ಯವಸ್ಥೆ ಮಾಡಬೇಕು. ಅದಕ್ಕೆ ನಾವು ಕೆ.ಎಸ್.ಆರ್.ಟಿ.ಸಿ.ಯಿಂದ ಬಸ್‌ಗಳನ್ನು ಕೇಳಿದ್ದೇವೆ. ಆ ಇಲಾಖೆಯವರು ಬಸ್‌ಗಳನ್ನು ಕೊಡುತ್ತಾರೆ. ನಾವು ಆ ಬಸ್‌ಗಳಲ್ಲಿ ಹೋಗಿ ಬರುವುದು. ಎರಡನೆಯದಾಗಿ, ನಾವು ಅವರಿಗೆ ಯಾರು ಯಾರು ಬರುತ್ತೇವೆಂದು ಮುಂಚೆಯೇ ತಿಳಿಸಬೇಕು. ಈಗಾಗಲೇ Bulletin ಹಾಕಿದ್ದೇವೆ. ದಯವಿಟ್ಟು ತಾವುಗಳು ಅದನ್ನು ಮತ್ತೊಮ್ಮೆ ಓದಿ. ಅವರು ಏನೇನು Identity card ತರಬೇಕು ಮತ್ತು ಯಾವ ರೀತಿಯ ಬಟ್ಟೆಗಳನ್ನು ಹಾಕಿಕೊಂಡು ಬರಬೇಕೆಂದು ತಿಳಿಸಿದ್ದಾರೆ. ಕಾರಣ ಎಂದರೆ, ship ಒಳಗೆ ಕರೆದುಕೊಂಡು ಹೋಗುತ್ತಾರೆ. ಅದಕ್ಕೆ ಭದ್ರತಾ ವ್ಯವಸ್ಥೆ ಇದೆ. ಹೀಗಾಗಿ, ಅವರು ತಿಳಿಸಿರುವಂತಹ ವಿಷಯವನ್ನು ನಾನು Bulletin ಒಳಗೆ ಉಲ್ಲೇಖ ಮಾಡಿ ತಮ್ಮೆಲ್ಲರಿಗೂ ಕಳುಹಿಸಿಕೊಟ್ಟಿದ್ದೇನೆ. ಈಗಾಗಲೇ ಬರುತ್ತೇವೆಂದು ಹೇಳಿರುವವರು fine. ಉಳಿದಿರುವವರು ಗೊತ್ತಾಗಿರಲಿಲ್ಲ ಅಥವಾ ನನಗೆ ಗೊತ್ತಾಗಿರುವುದಿಲ್ಲ. ಅವರೆಲ್ಲರೂ ಸಹ, ಇವತ್ತು ಸಂಜೆವೊಳಗೆ ಕಾರ್ಯದರ್ಶಿಯವರ ಕಛೇರಿಯಲ್ಲಿ ತಮ್ಮ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೇ ಕೆಲವು ಸಚಿವರು ಬರುವುದಕ್ಕೆ ಇಚ್ಛೆ ಪಟ್ಟಿದ್ದಾರೆಂದು ನನಗೆ ಗೊತ್ತಾಗಿದೆ, ಅವರು ಬಂದರೆ, ನನಗೆ ಇನ್ನಷ್ಟು ಸಂತೋಷ. ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರು ಮತ್ತು ವಿಧಾನಸಭೆಯ ಎಲ್ಲಾ ಸಚಿವರಿಗೂ ಇದಕ್ಕೆ ಆಹ್ವಾನ ಇದೆ. ದಯವಿಟ್ಟು ತಾವೆಲ್ಲರೂ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಟಿ.ಖಾದರ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು):-** ಮಾನ್ಯ ಸಭಾಪತಿಯವರೆ, ಸಂತಾಪ ಸೂಚನೆಯಲ್ಲಿ ದಿವಂಗತ ಶ್ರೀಮತಿ ಗೌರಿ ಲಂಕೇಶ್‌ರವರ ಹೆಸರು ಬಿಟ್ಟು ಹೋಗಿದೆ. ಅವರಿಗೂ ಸಹ ಗೌರವ ಸಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಆ ರೀತಿ ನಮ್ಮ ರಾಜ್ಯದಲ್ಲಿರುವ ಅನೇಕರ ಹೆಸರುಗಳು ಬಿಟ್ಟು ಹೋಗಿದೆ. ಈ ರೀತಿಯ ಹಿರಿಯರ ಅಥವಾ ಸಮಾಜ ಸೇವೆ ಮಾಡಿರುವಂತಹವವರು ತೀರಿಕೊಂಡಿದ್ದರೆ ಅವರ ಹೆಸರುಗಳನ್ನು ನಾನು ಸೇರಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಸಂತಾಪ ಸೂಚನೆಯನ್ನು ಮಂಡಿಸುತ್ತೀರಿ, ಅದನ್ನು ನಾವೆಲ್ಲರೂ ಓದಿರುತ್ತೀರಿ. Parliamentary system ನಲ್ಲಿ ಅದನ್ನು ತಾವು ಓದಿದರೆ, ಅದನ್ನು ನಾವೆಲ್ಲರೂ approve ಮಾಡುತ್ತೇವೆ. ಇದನ್ನು ಮೊದಲು

ಎಲ್ಲರೂ ಮಾತನಾಡುತ್ತಿದ್ದೆವು. ಈಗ ಇಬ್ಬರೇ ಮಾತನಾಡುತ್ತಿದ್ದೇವೆ. ಮುಂದಕ್ಕೆ ಇನ್ನಷ್ಟು ಸುಧಾರಣೆಯಾಗಬೇಕೆಂದರೆ, ತಾವು ಓದಿದ ನಂತರ ಅದನ್ನು ಸದನಕ್ಕೆ ಕೊಟ್ಟು ಬಿಡುವಂತಹ Parliamentary system ಮಾಡಿದರೆ ಸಮಯ ಉಳಿಯುತ್ತದೆ. ತಾವು ಓದಿದ್ದನ್ನು ನಾವು ಓದುತ್ತೇವೆ. ಅದಕ್ಕೆ ಆ ಪದ್ಧತಿ ಬೇಡವೆಂದು ನನಗೆ ಅನಿಸುತ್ತದೆ. ಅದಕ್ಕೆ ಮುಂದಿನ ಬಾರಿಗೆ ಈ ರೀತಿ ಆಗಬಾರದೆಂದು ನನ್ನ ಸಲಹೆ.

**ಸಭಾಪತಿಯವರು:-** ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಸಹಮತ ಇದೆ. ಆದರೆ, ಅದರ ತೀರ್ಮಾನವನ್ನು ಈ ಸಭೆಯಲ್ಲಿ ಮಾಡುವುದು ಬೇಡ. ಅದನ್ನು BAC (Business Advisory Committee) ಮಾಡೋಣ. ಏಕೆಂದರೆ, ಇದರ ಎಲ್ಲಾ ಬದಲಾವಣೆಗಳನ್ನು BAC ಮೂಲಕ ಮಾಡಿಕೊಂಡು ಬಂದಿದ್ದೇವೆ. ಅದೇ ಪರಿಪಾಠವನ್ನು ಮಾಡೋಣ. ಹಾಗಾಗಿ, ಅದನ್ನೇ ಮಾಡೋಣ. ಈಗ ನಾನು ಮುಂದಿನ ಕಾರ್ಯಕ್ರಮಕ್ಕೆ ಹೋಗುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಒಂದು Adjournment Motion ಅನ್ನು ಕೊಟ್ಟಿದ್ದೇನೆ...

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಅವಧಿ ಮುಗಿಯುವವರೆಗೆ ಬೇರೆ ಯಾವುದೇ ವಿಷಯವನ್ನು ತೆಗೆದುಕೊಳ್ಳಬಾರದು.

**ಸಭಾಪತಿಯವರು:-** ಒಂದು ನಿಮಿಷ ...

(ಗೊಂದಲ)

**ಶ್ರೀ ಐವನ್ ಡಿ' ಸೋಜಾ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೆ, ಸದನವನ್ನು 10 ನಿಮಿಷಗಳ ಕಾಲ ಮುಂದೂಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಈಗ adjournment ಬೇಡ. ನಮ್ಮಲ್ಲಿ ಏನು ಪದ್ಧತಿ ಮಾಡಿದ್ದೇವೆಂದರೆ, ಈ ರೀತಿಯ ಪ್ರಕಟಣೆ ಅಥವಾ ಈ ರೀತಿಯ ದೌರ್ಭಾಗ್ಯದ ಸಂಗತಿಗಳು ಅಂದರೆ, ಸಂತಾಪ ಸೂಚನೆ ನಮ್ಮ ದೌರ್ಭಾಗ್ಯ. ನಮ್ಮ ಜೊತೆಯಲ್ಲಿದ್ದ ಹಿರಿಯರು ತೀರಿಕೊಳ್ಳುತ್ತಾರೆ. ನಾವು ಅವರಿಗೆ ಸಂತಾಪ ಸೂಚನೆಯನ್ನು ಮಾಡುತ್ತೇವೆ. ಸಂತಾಪ ಸೂಚನೆ ಆದ ನಂತರ ನಾವು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡುತ್ತೇವೆ. ಈಗ ನಮ್ಮ ಪದ್ಧತಿಯಂತೆ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡೋಣ. ನಂತರ ಅದರ ಬಗ್ಗೆ ತಾವು ಏನು ಹೇಳುತ್ತೀರಾ, ಅದನ್ನು ನೋಡೋಣ. ಆದರೆ, ನಮ್ಮಲ್ಲಿ ಒಂದು ಸಣ್ಣ ಪದ್ಧತಿಯನ್ನು ಮಾಡಿಕೊಂಡು ಬಂದಿದ್ದೇವೆ. Adjournment Motion ಅನ್ನು ಅವರು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ಸದಸ್ಯರು ಅಲ್ಲದೇ, ಅವರ ಜೊತೆಗೆ ಕೆಲವು ಸದಸ್ಸರು ಸಹ ಅದಕ್ಕೆ ಸಹಿ ಮಾಡಿ ಕೊಟ್ಟಿದ್ದೀರಿ. ನಾವು Adjournment Motion ಯಾವುದಕ್ಕೆ ಕೊಟ್ಟಿದ್ದೀರಿ, ಏನು ವಿಷಯ ಎಂಬುದರ ಬಗ್ಗೆ 4-5 ನಿಮಿಷಗಳ ಕಾಲ ಪ್ರಸ್ತಾಪ ಮಾಡಿದರೆ, ಅದಾದ ಮೇಲೆ ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಂಡು ಮುಂದಕ್ಕೆ ಹೋಗೋಣ.

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೆ, ಅದು 4 ರಿಂದ 5 ನಿಮಿಷಗಳಿಗೆ ಮುಗಿಯುವುದಿಲ್ಲ. ದಯವಿಟ್ಟು ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಮಾತನಾಡಲಿ. ಅದಕ್ಕೆ ಯಾವುದೇ ತೊಂದರೆ ಇಲ್ಲ. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಮಾತನಾಡಿದರೆ ತೊಂದರೆ ಏನಿದೆ?

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಒಬ್ಬರಾದ ಮೇಲೆ ಒಬ್ಬರು ಮಾತನಾಡಿ. ಈಗ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಮಗೂ ಅವಕಾಶ ಮಾಡಿ ಕೊಡುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಅಜೆಂಡಾ ಪ್ರಕಾರ, ಪ್ರಶ್ನೋತ್ತರ ಅವಧಿ ಆಗಲಿ. ಅವರ Adjournment Motion presentation ಅನ್ನು ನೀವು ಒಪ್ಪುತ್ತೀರೊ ಅಥವಾ ಬಿಡುತ್ತೀರೊ ಅದು ಸದನಕ್ಕೆ ಬಿಟ್ಟ ವಿಚಾರ. ಮೊದಲು ಅಜೆಂಡಾ ಪ್ರಕಾರ ಪ್ರಶ್ನೋತ್ತರ ಅವಧಿ ಆಗಲಿ. ಇದೇ procedure, ಅದನ್ನೇ ನಾನು ಹೇಳುತ್ತಿರುವುದು...

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, please allow me to speak. ಇದುವರೆಗೂ ನಾವು ಅವರು ಒಂದು ಪ್ರಾತಂಕ ಮಾಡಿದ್ದೇವೆ. ಒಂದು 5 ನಿಮಿಷಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವರ Adjournment Motion ಬಗ್ಗೆ ಇದುವರೆವಿಗೂ ಮಾತನಾಡುವುದಕ್ಕೆ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. It is not a new thing he is introducing. Business Advisory Committee ನಲ್ಲಿ ತೀರ್ಮಾನ ಆಗಿದ್ದು ಅದು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಈ ಬಗ್ಗೆ ಏನು ಹೇಳುತ್ತಾರೆಂದು ಕೇಳೋಣ. ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರೆ ದಯವಿಟ್ಟು ಕುಳಿತುಕೊಳ್ಳಿ. ಮೊದಲ ಬಾರಿಗೆ ಮಾನ್ಯ ಸಭಾನಾಯಕರು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಪ್ರಸ್ತಾಪ ಮಾಡಲಿ.

**ಸಭಾನಾಯಕರು:-** ಮಾನ್ಯ ಸಭಾಪತಿಯವರೆ, ಈಗಾಗಲೇ ಕಾರ್ಯಕಲಾಪಗಳ ಪಟ್ಟಿಗಳ ನಗದಿ ಆಗಿದೆ. ಅದರಂತೆ ಮೊದಲು ನಡೆಯಲಿ. ನಂತರ ಅವರು move ಮಾಡುತ್ತಾರೆಂದು ತಾವು ಆದೇಶ ಮಾಡಿದರೆ, ಅದರ ಮೇಲೆ ನಾವು ಮಾತನಾಡುತ್ತೇವೆ. ಪ್ರಶ್ನೋತ್ತರ ಅವಧಿ ಮೊದಲು ನಡೆಯಲಿ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾನಾಯಕಯವರೆ, ಐದು ನಿಮಿಷ ಆದ ಕೊಡಲೇ we will think about it ಎಂದು ಮಾನ್ಯ ಸಭಾಪತಿಯವರು ಹೇಳುತ್ತಿದ್ದಾರೆ.

(ಗೊಂದಲ)

**ಸಭಾನಾಯಕರು:-** ಮಾನ್ಯ ಸಭಾಪತಿಯವರೆ, ಆ ರೀತಿ ಆಗುವುದಿಲ್ಲ ಇಲ್ಲ ಇಲ್ಲ...

(ಗೊಂದಲ)

**ಶ್ರೀ ಐವನ್ ಡಿ' ಸೋಜಾ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೆ, ಇಲ್ಲ ಇಲ್ಲ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಕಡತದ ರೀತಿ...

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)-** ಮಾನ್ಯ ಸಭಾಪತಿಯವರೆ, Adjournment Motion ವಿರೋಧ ಪಕ್ಷದ ಹಕ್ಕು.

(ಗೊಂದಲ

**ಸಭಾನಾಯಕರು:-** ಮಾನ್ಯ ಸಭಾಪತಿಯವರೆ, ನಮ್ಮ ನಿಲುವನ್ನು ನಾವು ಹೇಳುತ್ತೇವೆ. ಅದನ್ನು ತಿಳಿದುಕೊಂಡು ತಾವು ಹೇಳಿ.

(ಗೊಂದಲ

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಆಯಿತು. ತಮ್ಮ ಅಭಿಪ್ರಾಯ ಹೇಳಿ. ನೀವು ಮೂರು ಜನರು ಹೇಳಬೇಡಿ. ನಿಮ್ಮಲ್ಲಿ ಯಾರಾದರೂ ಒಬ್ಬರು ಹೇಳಿ.

**ಶ್ರೀ ಐವನ್ ಡಿ' ಸೋಜಾ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೆ, ನಮ್ಮ ಸದನದಲ್ಲಿ ಪ್ರಶ್ನೋತ್ತರ ಅವಧಿ ತೆಗೆದುಕೊಂಡ ಮೇಲೆ Adjournment Motion ಅನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ, ಪ್ರಶ್ನೋತ್ತರ ಅವಧಿ ನಡೆಯಲಿ. ಆದಾದ ಮೇಲೆ ಅವರಿಗೆ ಅವಕಾಶ ಕೊಡಿ. ಅಜೆಂಡಾ ಮುಗಿದ ಮೇಲೆ ಅದನ್ನು ಚರ್ಚೆ ಮಾಡೋಣ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಅದರ ಉದ್ದೇಶ ಇರುವುದೇ ಸದನದ ಎಲ್ಲಾ ಕಾರ್ಯಕಾಲಪಗಳನ್ನು ಬಿಟ್ಟು ಎತ್ತುಕೊಳ್ಳಿ ಎಂದು. ಅದರ ಉದ್ದೇಶ ಇರುವುದೇ ಹಾಗೆ. ಪ್ರಶ್ನೋತ್ತರ ಅವಧಿ ಮಾಡಿದ ರೀತಿ ಮಾಡುತ್ತೇವೆಂದರೆ, ಅದು ನಿಲುವಳಿ ಸೂಚನೆ ಏಕೆ ಆಗಬೇಕು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ತಾವು ಏನು ಹೇಳುತ್ತೀರಿ we will accept it.

(ಗೊಂದಲ)

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೆ, ಅವರು ಹೇಳಿರುವಂತಹ ಉದ್ದೇಶದ ಪ್ರಕಾರ, ಅದು ಈಗಾಗಲೇ ಒಂದು ಬಾರಿ ಚರ್ಚೆ ಆಗಿದೆ. ಎರಡನೆ ಬಾರಿ ಹೇಳುವಂತಹ ಪ್ರಶ್ನೆಯೇ ಬರುವುದಿಲ್ಲ, it has already been discussed.

(ಗೊಂದಲ)

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)-** ಮಾನ್ಯ ಸಭಾಪತಿಯವರೆ, ಇನ್ನು ಸದನದ ಮುಂದೆ ವಿಷಯವೆ ಪ್ರಸ್ತಾಪ ಆಗಿಲ್ಲ. ಮಾನ್ಯ ಸದಸ್ಯರು ಏಕೆ ಅಷ್ಟೊಂದು panic ಆಗುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸದಸ್ಯರೆ, let the Hon'ble Chairman say on this.

**ಸಭಾನಾಯಕರು:-** ಮಾನ್ಯ ಸಭಾಪತಿಯವರೆ, ಮೊದಲು ಪ್ರಶ್ನೋತ್ತರ ಅವಧಿ ನಡೆಯಲಿ. ಆ ನಂತರ ಇದನ್ನು ತೆಗೆದುಕೊಳ್ಳೋಣ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ...

(ಗೊಂದಲ)

**ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ನನಗೆ ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟರೆ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಆಯಿತು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಸಂದೀಯ ಕಾರ್ಯಕಲಾಪಗಳಲ್ಲಿ ನಮ್ಮಲ್ಲಿ ನಾವೇ ನಮ್ಮನ್ನು ನಡೆಸಿಕೊಳ್ಳುವುದಕ್ಕೆ ಹಾಕಿಕೊಂಡಿರುವಂತಹ ***'RULES OF PROCEDURE AND CONDUCT OF BUSINESS IN THE KARNATAKA LEGISLATIVE COUNCIL'*** ಪ್ರಕಾರ Question Hour ಆದ ಕೊಡಲೇ ಯಾವುದೇ Business ಇದ್ದರೂ ಸಹ, ಅದನ್ನು ಮುಂದಕ್ಕೆ ಹಾಕಿ ಪೀಠಾಸೀನಾರಾಗಿರುವಂತಹ ತಾವು ಪ್ರಸ್ತಾವಿಕ ಮನವಿಯನ್ನು ಸಲ್ಲಿಸುವುದಕ್ಕೆ ಅವಕಾಶವನ್ನು ಕೊಡುತ್ತೀರಿ. ತಾವು ಒಂದು ವೇಳೆ, ಈಗ ಅವರು ಮಾತನಾಡುವುದಕ್ಕೆ 5 ನಿಮಿಷ ಎಂದರೆ, that is the ruling of the Chair. ಅದನ್ನು ನಾವು accept ಮಾಡುತ್ತೇವೆ. ಆದರೆ, ನಮ್ಮನ್ನು ನಾವೇ ನಡೆಸಿಕೊಳ್ಳುವುದಕ್ಕೆ ಹಾಕಿಕೊಂಡಿರುವಂತಹ Rules ನ violation ಆಗುತ್ತದೆ. There are exceptional situations where the whole House agrees. ಇದನ್ನು ಬದಿಗಿಟ್ಟು ತೆಗೆದುಕೊಳ್ಳೋಣವೆಂದು ಸರ್ಕಾರವೇ ಮುಂದಾದಂತಹ ಪ್ರಸಂಗಗಳು ಇವೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವೇನೆಂದರೆ, ಯಾವಾಗ ತಾವು House prorogue ಆಗಿರುವಂತಹದ್ದನ್ನು cabinet decision ಆಗಿ Governor ಗೆ ಹೋಗಿ summons ಕೊಟ್ಟು House convene ಮಾಡಬೇಕೆಂದು ಹೇಳುತ್ತೀರಿ. ನಿಮ್ಮ ಸಚಿವಾಲಯದಿಂದ ಸದಸ್ಯರಿಗೆ ಪ್ರಶ್ನೆಗಳನ್ನು ಕಳುಹಿಸಿಕೊಡಿ ಎಂದು ಹೇಳುತ್ತೀರಿ. Adjournment Motion ತಮ್ಮ ಕಛೇರಿಗೆ ಈಗ ಬಂದಿರುವಂತಹದ್ದು. ಮೊದಲೇ ಯಾವುದೇ ಭಾಗದ ಸದಸ್ಯರು ತಾವು ಕೊಟ್ಟಿರುವಂತಹ ಪ್ರಶ್ನೆಗೆ ಟೇಬಲ್ ಆಗಿರುತ್ತದೆ. ಅದು ಸಾರ್ವಜನಿಕ ಮಹತ್ವದ್ದು ಆಗಿರುತ್ತದೆ. ಅದು ಒಂದು ಪಕ್ಷಕ್ಕೆ ಅಥವಾ ಒಂದು ಸರ್ಕಾರಕ್ಕೆ ಸೀಮಿತವಾಗಿರುವಂತಹದ್ದು ಅಲ್ಲ. ಅದಕ್ಕೆ ನಾನು ತಮ್ಮಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ, ಪ್ರಶ್ನೋತ್ತರ ಅವಧಿ ಮುಗಿಯುವುದರೊಳಗೆ ಯಾವುದೇ ಹಡಗು ಮುಳುಗಿ ಹೋಗುವುದಿಲ್ಲ. It is a very important issue. Let us definitely discuss about that. But now if you are willing to give credence to the Rules that we have framed to govern ourselves. Please take a decision.

**ಸಭಾಪತಿಯವರು:-** ಈಗ ಮಾನ್ಯ ಸಭಾನಾಯಕರಾಗಲಿ ಅಥವಾ ಗೌರವಾನ್ವಿತ ಹಿರಿಯ ಸಚಿವರಾಗಲಿ ಹೇಳರುವಂತಹ ವಿಷಯಗಳು ಈಗಾಗಲೇ ಸಾಕಷ್ಟು ಬಾರಿ ಚರ್ಚೆ ಆಗಿವೆ. ಈ ವಿಷಯದ ಬಗ್ಗೆ ಹಿಂದಿನ ಸದನ, ಅದರ ಹಿಂದಿನ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆ ಆದಾಗ BAC (Business Advisory Committee) ನಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. BAC ನಲ್ಲಿ ಯಾವ ರೀತಿ ಮಾಡಬೇಕೆಂದು. ಬಹಳಷ್ಟು ಸಭೆಯಲ್ಲಿ ಅವರು ಈ ತರಹ ಪಾತ್ರ ವಹಿಸುತ್ತಾರೆ. ನಮ್ಮ ಸದನದ ಬಹಳ ಹಿರಿಯ ಸದಸ್ಯರಾಗಿತಕ್ಕಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಒಂದು ಪ್ರಸ್ತಾವನೆಯನ್ನು ಆ BAC ನಲ್ಲಿ ತಮ್ಮ ವಿಷಯನ್ನು ಮಂಡಿಸಿದರು. ಅವರು ಹೇಳದ್ದೇನೆಂದರೆ, ನಮ್ಮ rules ಮಾಡಿಕೊಂಡಿದ್ದೇವೆ. ನಮ್ಮ Rule book ನಲ್ಲಿ Question Hour ಆದ ಮೇಲೆ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಇದ್ದರೂ ಸಹ, Adjournment Motion ಅರ್ಥವೇ ಇವೆಲ್ಲವನ್ನು ಬದಿಗಿಟ್ಟು ಇದನ್ನು ಮಾಡಬೇಕೆಂದು ಇದೆ.

(ಮುಂದು...)

(921)13.11.2017-12.20-ಎಂವಿ-ಜಿಆರ್

**ಸಭಾಪತಿಯವರು (ಮುಂದು):-**

ಇದು ಒಂದಕ್ಕೊಂದು contradictory ಇದೆ. ನಾವು ಒಂದು compromise ಮಾಡೋಣ ಎಂದು ಅವರು ಒಂದು ಸಂಗತಿಯನ್ನು ಇಟ್ಟಾಗ, ಆ BAC ನಲ್ಲಿ ಸ್ವತಃ ಮುಖ್ಯಮಂತ್ರಿಗಳು, ಅಂದಿನ ಸಭಾನಾಯಕರು ಮತ್ತು ನಾವುಗಳೆಲ್ಲರೂ ಇದ್ದಂತಹ ಸಭೆಯಲ್ಲಿ ಒಂದು ಸಣ್ಣ ನಿರ್ಣಯವಾಗಿತ್ತು. I am bound by that decision. ಆ ನಿರ್ಣಯ ಏನಾಗಿದೆ ಎಂದರೆ adjournment motion ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ಯಾರಾದರೂ ಹಿರಿಯ ಸದಸ್ಯರು ಕೊಟ್ಟಿದ್ದರೆ, ಅದರ ಬಗ್ಗೆ ಅವರು ಐದರಿಂದ ಎಂಟು ನಿಮಿಷದವರೆಗೆ ಪ್ರಾಸ್ತಾವಿಕವಾಗಿ ಮಾತನಾಡಲಿ. ಅವರು ಮಾತನಾಡಿದ ಮೇಲೆ ಅದನ್ನು ಅಲ್ಲಿಗೆ ನಿಲ್ಲಿಸಿದ ನಂತರ ಕೂಡಲೇ ಏನಾದರೂ ಅದರ ಬಗ್ಗೆ ಸರ್ಕಾರ ಪ್ರತಿಕ್ರಿಯೆ ಮಾಡುವುದಾದರೆ ಮಾಡಲಿ, ಇಲ್ಲವಾದರೆ ಅದನ್ನು ಅಲ್ಲಿಗೆ ನಿಲ್ಲಿಸಿ ಪ್ರಶ್ನೋತ್ತರ ವೇಳೆಯನ್ನು ಮುಗಿಸಿದ, ನಂತರ ಆ ವಿಷಯವನ್ನು ಪೂರ್ಣ ಚರ್ಚೆಗೆ ತೆಗೆದುಕೊಳ್ಳಬಹುದು. ಚರ್ಚೆಗೆ ತೆಗೆದುಕೊಂಡು ಅದನ್ನು ಒಪ್ಪಿಕೊಳ್ಳಬೇಕೋ ಅಥವಾ ಬಿಡಬೇಕೋ ಎಂಬುದನ್ನು discretion of the Chair

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವಂತಹ ನಿರ್ಣಯವನ್ನು ನಾವು ಮಾಡಿದ್ದು, ಅದರಂತೆ ನಾವುಗಳು ಅಂದಿನಿಂದ ನಡೆದುಕೊಂಡು ಬರುತ್ತಿದ್ದೇವೆ. ಹಾಗಾಗಿ I am bound by the BAC Resolution. ನಾನು ಆ Resolution ಅನ್ನು ನೆನಪಿಟ್ಟುಕೊಂಡು ಹೇಳಿದ್ದೇನೆ. ಐದರಿಂದ ಎಂಟು ನಿಮಿಷದವರೆಗೆ ಅದನ್ನು move ಮಾಡಿದವರು ಮಾತನಾಡಬಹುದೆಂದು.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, BAC ಅಂದರೆ, ಸದನದ ಕಲಾಪಗಳನ್ನು ನಡೆಸುವುದಕ್ಕೆ, ನಮ್ಮ ಅನುಕೂಲಕ್ಕೆ ನಾವು ಮಾಡಿಕೊಳ್ಳುವಂತಹ ಒಂದು ಸಮಿತಿ. ಅಂದರೆ ಸದನ ತನ್ನ ಕಲಾಪಗಳನ್ನು ನಡೆಸುವಾಗ ನಿಯಮಗಳನ್ನು ಪ್ರಜ್ಞಾಪೂರ್ವಕವಾಗಿ ಈ ಸದನದ ಪೀಠಾಸೀನಾಧಿಕಾರಿಗಳು ಮತ್ತು ಎಲ್ಲರೂ ಸೇರಿ ನಮ್ಮನ್ನು ನಾವು ಹೇಗೆ ನಿರ್ಬಂದಿಸಿಕೊಳ್ಳಬೇಕು ಮತ್ತು ವ್ಯಾವಹಾರಿಕವಾಗಿ ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ಮಾಡಿರುವಂಥದ್ದು. If the BAC can overrule the rules framed, then thank you Sir....

**ಸಭಾಪತಿಯವರು:-** ಅದು overrule ಆಗಲ್ಲ. ತಾವು ದಯಮಾಡಿ ಕೇಳಿ. ನಾನು ಹೇಳುತ್ತೇನೆ ಒಂದು ನಿಮಿಷ ತಾವು ಕುಳಿತುಕೊಳ್ಳಿ. BAC ತೀರ್ಮಾನವನ್ನು ಸದನದಲ್ಲಿ ಮಂಡಿಸಿ, ಸದನದ ಒಪ್ಪಿಗೆಯನ್ನು ಪಡೆದು, ಅದು ನಮ್ಮ ದಾಖಲೆಗಳಲ್ಲಿ ಬಂದಿದೆ. ಹಾಗಾಗಿ I am bound by that decision. ಇಲ್ಲವೆಂದರೆ ನನಗೆ ಅದರ ಪ್ರಶ್ನೆ ಇಲ್ಲ. BAC ಯಲ್ಲಿ ತೀರ್ಮಾನವಾದ ತಕ್ಷಣ ಅದು ಸುಪ್ರೀಂ ಅಲ್ಲ. ಆ BAC ತೀರ್ಮಾನವನ್ನು ಸದನದಲ್ಲಿ ಮಂಡಿಸಿ, ಸದನದ ಒಪ್ಪಿಗೆಯನ್ನು ಪಡೆದು, ಅಂದಿನಿಂದ ನಾವು ಹಾಗೆಯೇ ನಡೆದುಕೊಂಡು ಬರುತ್ತಿದ್ದೇವೆ. ಆದುದರಿಂದ ಅದರ ಬಗ್ಗೆ ಏನೂ ಚರ್ಚೆ ಬೇಡ, ಮುಂದೆ ನೋಡೋಣ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಹಾಗಾದರೆ ನಿಯಮವನ್ನು ಬದಲಾವಣೆ ಮಾಡಿ.

**ಸಭಾಪತಿಯವರು:-** ಅದನ್ನು ಮತ್ತೆ BAC ಯಲ್ಲಿ ತರೋಣ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನನಗೆ ಈಗಲೂ ಸಹ ಅರ್ಥವಾಗುತ್ತಿಲ್ಲ, ಸದನ ಹೆಚ್ಚೋ, BAC ಯ ನಿಮ್ಮ ಸಮಿತಿ ಹೆಚ್ಚೋ ಅಥವಾ ನಿಯಮ ಹೆಚ್ಚೋ?

**ಸಭಾಪತಿಯವರು:–** ಸದನವೆ ಹೆಚ್ಚು, ಅದನ್ನು ಸದನವೇ ಒಪ್ಪಿದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿದೇಶಿತರು):–** ಮಾನ್ಯ ಸಭಾಪತಿಯವರೇ, ಸದನ ಅನುಸರಿಸಬೇಕಾಗಿರುವುದು Constitution, Acts and Rules. As on today Rules ನಲ್ಲಿ ಏನು ಹೇಳುತ್ತದೆ ಎಂದರೆ, ಯಾವುದೇ Adjournment Motion ಅನ್ನು ... Infact, *Kaul and Shakdher* ರವರ 'Practice and procedure of Parliament' ಪುಸ್ತಕದಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. ಯಾರು move ಮಾಡಿದ್ದಾರೆ, ಅವರು ನಾನು move ಮಾಡಿದ್ದೇನೆ ಎಂದು ಹೇಳಿದಾಗ, ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರವನ್ನು ಕೊಟ್ಟ ಮೇಲೆ, maintainable or not ಎಂದು ಹೇಳಿ ultimately the Chair has to decide. ಇದನ್ನು ನಾಲ್ಕು ಗಂಟೆಯ ಮೇಲೆ ತೆಗೆದುಕೊಳ್ಳಬೇಕು ಎನ್ನುವಂಥದ್ದು *Kaul and Shakdher* ರವರ '*Practice and procedure of Parliament*' ಪುಸ್ತಕದಲ್ಲಿ ಇದೆ. ಹಾಗಾಗಿ ದಯಮಾಡಿ, ಸಂವಿಧಾನ ಬಾಹಿರವಾದಂತಹ ಕೃತ್ಯವನ್ನು ನಡೆಸಿದ್ದಾರೆಂದು ಹೇಳಿ ಈ ನೋಟೀಸ್‌ನಲ್ಲಿ ಕೊಟ್ಟಿದ್ದಾರೆ. ಇಲ್ಲಿ ನಾಲ್ಕು ಘಟನೆಗಳು ನಡೆದಿವೆ. ಒಂದನೆಯದಾಗಿ *Section 174 Criminal Procedure Code* ಕೆಳಗಡೆ ತನಿಖೆ ಆಗಿದೆ. ಎರಡನೆಯದಾಗಿ ಸಿ.ಐ.ಡಿ ತನಿಖೆಯಾಗಿದೆ. ಮೂರನೆಯದಾಗಿ ನ್ಯಾಯಾಂಗ ಆಯೋಗದ ತನಿಖೆ ನಡೆಯುತ್ತಿದೆ ಮತ್ತು ನಾಲ್ಕನೆಯದಾಗಿ ಈಗ ಸಿ.ಬಿ.ಐ. ತನಿಖೆಯಾಗಿದೆ. ಇದರಲ್ಲಿ ಯಾವುದು *urgency* ಇರತಕ್ಕಂಥದ್ದು, ಯಾವುದು *public importance* ಇರತಕ್ಕಂಥದ್ದು? ಕೋರ್ಟ್ ಮುಂದೆ ಇರುವಂಥದ್ದನ್ನು *Adjournment Motion* ನಲ್ಲಿ ತೆಗೆದುಕೊಂಡು ಇದನ್ನು ಚರ್ಚೆ ಮಾಡುತ್ತೇವೆಂದರೆ ಸಂವಿಧಾನಕ್ಕೆ *Kaul and Shakdher* ರವರ '*Practice and procedure of Parliament*' ಪುಸ್ತಕದಲ್ಲಿ ತಿಳಿಸಿರುವ ವಿಷಯಗಳಿಗೆ ಮತ್ತು ನಿಯಮಗಳಿಗೆ ನಾವುಗಳು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೇವೆ? ನಾನು ದಯಮಾಡಿ ಹೇಳುತ್ತೇನೆ, ಇದರ ಬಗ್ಗೆ ಚರ್ಚೆ ಆಗಬೇಕು ಎಂಬುದರ ಬಗ್ಗೆ ನಮ್ಮ ಯಾರ ಅಭ್ಯಂತರವೂ ಇಲ್ಲ. ಆದರೆ, ಚರ್ಚೆಯಾಗುವಂಥದ್ದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೋತ್ತರ ವೇಳೆಯನ್ನು *adjourn* ಮಾಡಿ ಅಥವಾ ಪ್ರಶ್ನೋತ್ತರ ವೇಳೆಯನ್ನು ಬಿಟ್ಟು, ಈಗ ಇದನ್ನು ತೆಗೆದುಕೊಳ್ಳುವಂಥದ್ದು ಕಾನೂನು ಬಾಹಿರವಾಗಿರತಕ್ಕಂಥದ್ದು, ನಿಯಮಾವಳಿಗಳ ಬಾಹಿರವಾಗಿರತಕ್ಕಂಥದ್ದು, ತಾವು ದಯಮಾಡಿ ಪ್ರಶ್ನೋತ್ತರ ವೇಳೆ ಆದಮೇಲೆ ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ಮಾತನಾಡುವುದು. ಕಾರಣ, ಅವರು ಮಾತನಾಡುವುದಕ್ಕೆ ಅವಕಾಶ ಕೋರಿ ಮೊದಲೇ ಕೈ ಎತ್ತಿದ್ದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 59ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮಲ್ಲಿ BAC ಯಲ್ಲಿ ಚರ್ಚೆಯಾಗುತ್ತದೆ. ಸ್ಪಷ್ಟವಾದಂತಹವುಗಳು ಯಾವುದೂ ಇದರಲ್ಲಿ ಇಲ್ಲ. It depends upon the decision of the Chair. ಅದಕ್ಕೆ ತಾವು ಈಗಲೂ ಅನುಮತಿ ಕೊಡಬಹುದು ಅಥವಾ ಪ್ರಶ್ನೋತ್ತರ ವೇಳೆ ಆದಮೇಲೂ ಸಹ ಅನುಮತಿ ಕೊಡಬಹುದು. BAC ಯಲ್ಲಿ ಆಗಿರುವಂಥದ್ದು ಅಂತಿಮ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, BAC ಯಲ್ಲಿ ಆಗಿರುವಂಥದ್ದನ್ನು ಸದನ ಒಪ್ಪಿಕೊಂಡಿದೆ. ಸಾಮಾನ್ಯವಾಗಿ BAC ಯಲ್ಲಿ ಚರ್ಚೆಯನ್ನು ಮಾಡಿದ್ದೇವೆ ಮತ್ತು ಇದನ್ನು ತೆಗೆಯಬೇಕು ಎಂಬುದನ್ನು ಸಹ ನಾವು move ಮಾಡಿದ್ದೇವೆ. ಕೊನೆಗೆ ಎಲ್ಲಾ ಚರ್ಚೆ ಮಾಡಿ ನಂತರ ಏನಾಯಿತು ಎಂದರೆ ಈ ನಿಯಮ 59 ಅನ್ನು ನಾವು ಯಾವಾಗ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಮಾನ್ಯ ಸಭಾಪತಿಯವರು ಯಾವಾಗ ಅನುಮತಿಯನ್ನು ಕೊಡುತ್ತಾರೋ, ಆಗ ಮಾಡಲಿ ಎಂದು BAC ಯನ್ನು ಸದನದಲ್ಲಿ pass ಮಾಡಿದ್ದಾರೆ, ಅದು ತಮಗೆ ಬಿಟ್ಟಿದ್ದು. ಈಗಲಾದರೂ ಕೊಡಬಹುದು ಅಥವಾ ಮುಂದೆ ಆದರೂ ಕೊಡಬಹುದು. ಬಹಳಷ್ಟು ಸಾರಿ ನಾವುಗಳು ಏನನ್ನು ಚರ್ಚೆ ಮಾಡಿದ್ದೇವೆಂದರೆ, limited ಆದಂತಹ ಸಮಯದಲ್ಲಿ ಮುಗಿಸಬೇಕು ಎಂದು ಇದೆ. ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಪ್ರಸ್ತಾಪ ಮಾಡಿದ ಮತ್ತು ಇನ್ನಿತರರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಬೇಕಾದಷ್ಟು ಪರ ಮತ್ತು ವಿರೋಧವಿರುತ್ತದೆ ಎಂಬುದು ಸರಿ.

**ಸಭಾಪತಿಯವರು:-** ಇದು ಏತಕ್ಕಾಗಿ ಬೇಕೆಂದು...

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, It depends upon the decision of the Chair. ಆ ತರಹ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದನ್ನು ತಾವು ತೆಗೆದುಕೊಳ್ಳಿ. ಮಾತನಾಡುವವರು ತಮ್ಮ ತೀರ್ಮಾನಕ್ಕೆ ಬದ್ಧರಾಗಿರಬೇಕು. ಇದನ್ನು ಮಾತ್ರ ನಾನು ತಮ್ಮಲ್ಲಿ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಮಾತನಾಡುವುದು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದೆ ಹಲವಾರು ಬಾರಿ ಈ Adjournment Motion ಬಗ್ಗೆಯೇ, ಇದನ್ನು ಯಾವಾಗ ತೆಗೆದುಕೊಳ್ಳಬೇಕೆಂದು ದಿನಗಟ್ಟಲೆ ಚರ್ಚೆಯಾಗುತಿತ್ತು. ಅದು ತಮಗೂ ಸಹ ಗೊತ್ತು. ಇವೊತ್ತು ಸಹ ಅದೇ ರೀತಿಯಲ್ಲಿ ಚರ್ಚೆ ಪ್ರಾರಂಭವಾಗಿದೆ. ಪ್ರತಿ ದಿವಸ ಅದೇ ಬರುತ್ತಿದ್ದುದ್ದರಿಂದ ಸದನದಲ್ಲಿ ನಮ್ಮೆಲ್ಲರಿಗೂ ಕೂಡ ಬೇಸರವಿತ್ತು. ಈ ತರಹ ಆಗಬಾರದೆಂದು ಒಂದು ದಿವಸ BAC ಯಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿ, ಈಗ ಈ ಕುರಿತು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಎಲ್ಲಿಯವರೆವಿಗೂ ಎಂದರೆ ಮುಂದೆ ನಿಯಮಾವನ್ನು ಬದಲಾವಣೆ ಮಾಡುವವರೆಗೆ ನಾವು ಇದರ ಪ್ರಸ್ತಾಪಕ್ಕೆ ಐದರಿಂದ ಎಂಟು ನಿಮಿಷ ಮೀರದಂತೆ ಅವಕಾಶವನ್ನು ಕೊಡುತ್ತೇವೆ, ನಂತರ ಪೀಠದಿಂದ ತೀರ್ಮಾನ ಕೊಡುತ್ತೇವೆಂದು ಹೇಳಿದ್ದೀರಿ. ಮತ್ತೆ ಪದೇ ಪದೇ ಇದು ಬಂದಾಗ ಮತ್ತು ಪುನಃ ಸದನ ಸೇರಿದಾಗಲೂ ಸಹ ಈ ವಿಚಾರಕ್ಕೆ ಅರ್ಧ ದಿವಸ ಮತ್ತು ಒಂದು ದಿವಸ ಹೋಗುತ್ತದೆ. ದಯವಿಟ್ಟು ಇದು ಅಗತ್ಯವಿಲ್ಲವೆನ್ನುವುದು ನನ್ನ ಭಾವನೆ. ಅದಕ್ಕೆ ತಾವು ಈಗಾಗಲೇ ಏನು ತೀರ್ಮಾನ ತೆಗೆದುಕೊಂಡು, ಸದನದಲ್ಲಿ place ಮಾಡಿ, ಅದನ್ನು ಅನುಮೋಧನೆ ತೆಗೆದುಕೊಂಡಿದ್ದೀರಿ, ಅದರಂತೆ ತಾವು ಏನು ಸಮಯವನ್ನು ನಿಗದಿ ಮಾಡಿದ್ದೀರಿ, ಅಂದರೆ ಐದರಿಂದ ಎಂಟು ನಿಮಿಷ ಮೀರದಂತೆ ಅವರಿಗೆ ನೀವು ಅವಕಾಶ ಕೊಟ್ಟು, ದಯವಿಟ್ಟು ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ತಾವು ಒಂದು ತೀರ್ಮಾನವನ್ನು ನೀಡಿ. ಸುಮ್ಮನೆ ಈ ವಿಷಯವನ್ನು ಅನಗತ್ಯವಾಗಿ ತೆಗೆದುಕೊಳ್ಳಬೇಕೆ ಅಥವಾ ಬೇಡವೆ ಎನ್ನುವುದಕ್ಕೇ ಅರ್ಧ ದಿವಸ ಆಗಿಬಿಡುತ್ತದೆ. ಇಲ್ಲಿಗೆ ನಾವುಗಳು ಏತಕ್ಕೆ ಬಂದಿದ್ದೇವೆ ಎಂಬುದು ಮುಖ್ಯ. ಇದರಿಂದ ಎಲ್ಲರಿಗೂ ಸಹ ಬೇಸರವಾಗಿದೆ. ತಾವು ದಯವಿಟ್ಟು ಇದನ್ನು ಬದಲಾವಣೆ ಮಾಡಬೇಕು. ಇದಕ್ಕೆ ವಾರಕ್ಕೆ ಒಂದು ಅಥವಾ ಎರಡು ದಿವಸಕ್ಕೆ ಅವಕಾಶ ನೀಡಿ. ಇದರ ನಿಯಮಾವಳಿಯನ್ನು ಬದಲಾವಣೆ ಮಾಡಿ. ಅಲ್ಲಿಯವರೆವಿಗೂ ಈ ನಿಯಮಾವಳಿ ಇರುವುದರಿಂದ, ತಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಏನೂ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ದಯಮಾಡಿ ಅದರಂತೆ ತಾವು ಈ ಸದನವನ್ನು ನಡೆಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು**:- ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರ ಗೌಡರು ಮಾತನಾಡುವುದು.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯನ್ನು ವಿಧಾನ ಪರಿಷತ್ತಿನಲ್ಲಿ ತರುವಂಥದ್ದು ಸಾಧ್ಯವಿಲ್ಲ, ಏಕೆಂದರೆ, ನಾವುಗಳು ಸರ್ಕಾರವನ್ನು ಬೀಳಿಸುವುದಕ್ಕೆ ಆಗುವುದಿಲ್ಲ. ಇದರ ಹಿನ್ನೆಲೆಯಲ್ಲಿ ನಾವುಗಳು ಇದನ್ನು ಬೇಕಾದಷ್ಟು ಸಲ ಚರ್ಚೆ ಮಾಡಿದ್ದೇವೆ. ನಿಲುವಳಿ ಸೂಚನೆಯನ್ನು ತರುವುದೇ, ಸರ್ಕಾರ ಎಲ್ಲೋ ಎಡವಿದೆ, ತಪ್ಪು ಮಾಡಿದ್ದಾರೆ. ಸರ್ಕಾರವನ್ನು ತೆಗೆಯಬೇಕು ಎನ್ನುವಂತಹ ದೃಷ್ಟಿಯಿಂದ ತರುವಂಥದ್ದು. ಹೀಗಾಗಿ, ಇಲ್ಲಿ ಆ್ಯಕ್ಟ್ ಏನು ಇದೆ, ಅದನ್ನು ಬದಲಾವಣೆ ಮಾಡಬೇಕೆಂದು ಒಂದು ಸಮಿತಿ ಆಗಿದೆ. ನಾನು ಆ ಸಮಿತಿಯ ಉಪಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಅನೇಕ ವಿಚಾರಗಳ ಬಗ್ಗೆ ಈಗಾಗಲೇ ಬದಲಾವಣೆ ತಂದಿದ್ದೇವೆ. ಆ ಪೈಕಿ ಕೆಲವು ಅಂಶಗಳನ್ನು ವಿಧಾನಸಭೆಯವರು ಒಪ್ಪಿಕೊಂಡಿದ್ದಾರೆ. ಆದರೆ, ನಮ್ಮ ಸದನದಲ್ಲಿ ಇನ್ನೂ ಒಪ್ಪಿಗೆಯಾಗಿಲ್ಲ. ಇಷ್ಟಾದರೂ ಕೂಡ, ನಮ್ಮ ನಿಯಮಾವಳಿಗಳು ಏನಿವೆ, ಅದನ್ನು ಮಾಡುವುದು ಈ ಸದನವೆ. ನಿಯಮಾವಳಿ ಅನುಸಾರ ಸದನ ನಡೆಯಬೇಕು. ನಿಲುವಳಿ ಸೂಚನೆಗೆ ರುಜು ಮಾಡಿರುವವರೆಲ್ಲರೂ ಮಾತನಾಡಬೇಕೆಂದು ಏನೂ ಇಲ್ಲ. ಯಾರಾದರೂ ಒಬ್ಬರು ಮಾತನಾಡಿ, ಅವಶ್ಯಕತೆ ಇದ್ದರೆ ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತು ಅಥವಾ ನಾನು ಇದನ್ನು ತಳ್ಳಿ ಹಾಕುತ್ತೇವೆ ಎನ್ನುವಂತಹ ಮಾತನ್ನು ಈಗಲೇ ತೀರ್ಮಾನ ಮಾಡಿಕೊಳ್ಳಬಹುದು ಎನ್ನುವಂತಹ ಅಭಿಪ್ರಾಯ ನನ್ನದಾಗಿದೆ, ಆದುದರಿಂದ ಇದನ್ನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು**:- ಇದು ಈಗಾಗಲೇ ನಾವು ನಡೆದುಕೊಂಡು ಬಂದಿರುವಂತಹ ಪದ್ಧತಿ, ಅದರ ಚರ್ಚೆಯನ್ನು ಮತ್ತೇ BAC ಯಲ್ಲಿ ಮಾಡಬೇಕಾಗುತ್ತದೆ. ಅದು ಆಗಿ, ಬೇರೆ ನಿರ್ಣಯ ಆಗುವ ತನಕ, ನಾನು ಅದಕ್ಕೆ ಅನುಮತಿ ನೀಡುತ್ತೇನೆಂದು ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಗೌರವಾನ್ವಿತ ಸದಸ್ಯರು ಸಹಿ ಮಾಡಿ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಅವರು ಐದರಿಂದ ಎಂಟು ನಿಮಿಷ ಮಾತನಾಡಿದ ಮೇಲೆ, ಸರ್ಕಾರದ ಪರವಾಗಿ ಅದಕ್ಕೆ ಅವರು ಏನು ಸಮಜಾಯಿಸಿ ಕೊಡಬಹುದು ಅಥವಾ ಈಗ ಬೇಡ ನಂತರ ಕೊಡುತ್ತೇವೆ ಎನ್ನಬಹುದು, ಅದು ಅವರಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಟ್ಟಿರುವಂಥದ್ದು. ತದನಂತರ ಅದನ್ನು ನಾವು ಏನು ಮಾಡಬೇಕು ಎಂದು ತೀರ್ಮಾನ ಮಾಡೋಣ. ಈ ವಿಷಯವನ್ನು ಈಗ ಏಕೆ ತೆಗೆದುಕೊಳ್ಳಬೇಕೆಂದು? ವಿರೋಧ ಪಕ್ಷದ ನಾಯಕರು ಅಥವಾ ಅವರ ಪೈಕಿ ಯಾರಾದರೂ ಒಬ್ಬರು ಐದರಿಂದ ಎಂಟು ನಿಮಿಷ ಈ ವಿಷಯದ ಬಗ್ಗೆ ಮಾತನಾಡಬಹುದು.

**5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ಶ್ರೀ ಎಂ.ಕೆ.ಗಣಪತಿ, ಡಿವೈಎಸ್‌ಪಿ ರವರ ಪ್ರಕರಣವನ್ನು ಸಿ.ಬಿ.ಐ.ನವರು ಕೈಗೆತ್ತಿಕೊಂಡು ಎಫ್‌ಐಆರ್ ದಾಖಲಿಸಿರುವುದರಿಂದ ಶ್ರೀ ಕೆ.ಜೆ.ಜಾರ್ಜ್‌ರವರನ್ನು ಸಚಿವಸ್ಥಾನದಿಂದ ವಜಾಗೊಳಿಸಬೇಕೆನ್ನುವ ಬಗ್ಗೆ.**

.......

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸುಪ್ರೀಂಕೋರ್ಟ್‌ನಲ್ಲಿ Dy.S.P., ಶ್ರೀ ಗಣಪತಿಯವರ ಸಾವಿನ ಪ್ರಕರಣವನ್ನು ಸಿ.ಬಿ.ಐ.ಗೆ ಕೊಟ್ಟು, ಮೂರು ತಿಂಗಳನಲ್ಲಿ ಅದರ ವರದಿಯನ್ನು ಕೊಡಬೇಕೆಂದು ಹೇಳಿದ ನಂತರ, ಇವತ್ತಿನ ದಿವಸ ಈ ಒಂದು ಚರ್ಚೆ ಶುರು ಆಗುತ್ತಿದೆ.

**(ಮುಂದು...)**

(922)13.11.2017-12.30-ಎಲ್‌ಎಲ್-ಜಿಆರ್

**ಶ್ರೀ ಕೆ.ಎಸ್. ಈಶ್ವರಪ್ಪ(ಮಾನ್ಯ ವಿರೋಧ ಪಕ್ಷದ ನಾಯಕರು):-** (ಮುಂದುವರೆದಿದ್ದು...)

ಅದರಲ್ಲಿ ಈಗಾಗಲೇ ಸನ್ಮಾನ್ಯ ಗೃಹ ಸಚಿವರಾಗಿದ್ದಂತಹ ಶ್ರೀ ಕೆ.ಜೆ. ಜಾರ್ಜ್ ಮತ್ತು ಇಬ್ಬರು ಹಿರಿಯ ಐ.ಪಿ.ಎಸ್. ಅಧಿಕಾರಿಗಳಾದ ಶ್ರೀ ಪ್ರಣಬ್ ಮೊಹಂತಿ ಮತ್ತು ಶ್ರೀ ಎ.ಎಂ. ಪ್ರಸಾದ್‌ರವರ ಹೆಸರುಗಳನ್ನು ಸಹ ಉಲ್ಲೇಖ ಮಾಡಲಾಗಿದೆ ಮತ್ತು ಕೆ.ಜೆ. ಜಾರ್ಜ್‌ರವರು ಮೊದಲನೆಯ ಆರೋಪಿ ಕೂಡ ಆಗಿದ್ದಾರೆ. ಇಲ್ಲಿ ನಾನು ಹೇಳುವುದೇನೆಂದರೆ, ಶ್ರೀ ಎಂ.ಕೆ. ಗಣಪತಿಯವರು ನೀಡಿರುವ ಸಂದರ್ಶನದ ವಿಡಿಯೋ ಅನ್ನು ವೀಕ್ಷಿಸಲು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರು ಒಂದು ಟಿ.ವಿ. ಮಾಧ್ಯಮದ ಕ್ಯಾಮೆರಾಗೆ 33 ನಿಮಿಷಗಳ ಸಂದರ್ಶನ ಕೊಟ್ಟಿದ್ದಾರೆ. ಶ್ರೀ ಎಂ.ಕೆ. ಗಣಪತಿಯವರು ನೀಡಿರುವ ಸಂದರ್ಶನದ ವಿಡಿಯೋ ಅನ್ನು ನಮ್ಮ ಇಡೀ ಸದನ ವೀಕ್ಷಣೆ ಮಾಡಲು ಒಂದು ಅವಕಾಶ ಮಾಡಿಕೊಟ್ಟರೆ ನಿಜಕ್ಕೂ ಕೂಡ ಇದರಲ್ಲಿ ಯಾರು ತಪ್ಪಿತಸ್ಥರು, ಯಾರು ಆರೋಪಿಗಳು, ಯಾರಾದರು ಅವರನ್ನು ಕೊಲೆ ಮಾಡಿದ್ದಾರೆಯೇ ಅಥವಾ ಅದು ಆತ್ಮಹತ್ಯೆಯೇ ಈ ಎಲ್ಲಾ ವಿಷಯಗಳು ಹೊರಗೆ ಬರುತ್ತದೆ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ

ಮಾಡುತ್ತೇನೆ ಶ್ರೀ ಎಂ.ಕೆ. ಗಣಪತಿಯವರು ನೀಡಿರುವ ಸಂದರ್ಶನದ ವಿಡಿಯೋ ಅನ್ನು ವೀಕ್ಷಣೆ ಮಾಡುವುದಕ್ಕೆ ತಕ್ಷಣ ಒಂದು ಅವಕಾಶ ಮಾಡಿಕೊಡಬೇಕು.

ಎರಡನೆಯದಾಗಿ, ಅವರು ತಮ್ಮ ಸಂದರ್ಶನದಲ್ಲಿ 8 ಜಿ.ಬಿ. ಸಾಮರ್ಥ್ಯದ ಪೆನ್‌ಡ್ರೈವ್‌ನಲ್ಲಿ ಹಲವಾರು ಸಾಕ್ಷಾಧಾರಗಳನ್ನು ಸಂಗ್ರಹಿಸಲಾಗಿದೆಯೆಂದು ಹೇಳುತ್ತಿದ್ದಾರೆ. ಆದುದರಿಂದ, ಪೂರ್ವಸಿದ್ಧತೆ ಮಾಡಿಕೊಂಡು ಮಾಡಿದಂತಹ ಸಂದರ್ಶನದ ವಿಡಿಯೋ ಅನ್ನು ತಕ್ಷಣ ತಾವು ಇಡೀ ಸದನದ ಮುಂದೆ ತೋರಿಸುವಂತಹ ಪ್ರಯತ್ನ ಮಾಡಬೇಕು. ದುರದೃಷ್ಟವಶಾತ್, ಆ ದಿನ ಸದರಿ ಸಂದರ್ಶನದ ವಿಡಿಯೋ ರಾತ್ರಿ 8 ಗಂಟೆಗೆ ಪ್ರಸಾರವಾಗುತ್ತದೆ. ಆದರೆ, ಅದರ ಮುಂಚೆಯೇ ಶ್ರೀ ಎಂ.ಕೆ. ಗಣಪತಿಯವರ ಮೃತದೇಹ ಮಡಿಕೇರಿ ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಪತ್ತೆಯಾಗುತ್ತದೆ. ಎಷ್ಟು ಆಶ್ಚರ್ಯವಾಗುತ್ತದೆ? ನಾನು ಅದಕೋಸ್ಕರ ಹೇಳುತ್ತಿದ್ದೇನೆ, ಈ ಸಂದರ್ಶನ ಹೇಗೆ ಆಯಿತು? ಅದಕ್ಕೆ ಮುಂಚೆ ಈ ಸಾವು ಹೇಗೆ ಆಯಿತು ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಶ್ರೀ ಎಂ.ಕೆ. ಗಣಪತಿಯವರ ಸಾವು ಆದ ನಂತರ ಅವರ ತಂದೆ ಮತ್ತು ಮಕ್ಕಳು ಪೋಲೀಸ್ ಸ್ಟೇಷನ್‌ಗೆ ಎಫ್.ಐ.ಆರ್., ಹಾಕಿ ಎಂದು complaint ಕೊಡುವುದಕ್ಕೆ ಹೋಗುತ್ತಾರೆ. ಆದರೆ, ಅವರು ಎಫ್.ಐ.ಆರ್., ಹಾಕಿಸಿಕೊಳ್ಳುವುದಿಲ್ಲ. ಈ ಬಗ್ಗೆ ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಕೂಡ ದೂರು ಸಲ್ಲಿಸಿ ಎಫ್.ಐ.ಆರ್., ಎಂದು ಪರಿಗಣಿಸಲು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಆದೇಶ ನೀಡಲು ಅವರು ಕೋರುತ್ತಾರೆ. ಕೊನೆಗೆ ನ್ಯಾಯಾಲಯದಿಂದ ಆದೇಶವಾದ ನಂತರ ಎಫ್.ಐ.ಆರ್., ಹಾಕುತ್ತಾರೆ. ಇಲ್ಲಿ ಏನಾಗುತ್ತಿದೆಯೆಂದರೆ, ಒಬ್ಬ ಸಾಮಾನ್ಯ ವ್ಯಕ್ತಿ ತನಗಾದಂತಹ ನೋವು, ಸಾವು ಇದನ್ನು ಪೋಲೀಸ್ ಸ್ಟೇಷನ್‌ಗೆ ಹೋಗಿ complaint ಕೊಟ್ಟಾಗ ಎಫ್.ಐ.ಆರ್., ಹಾಕಬೇಕಾದಂತಹ ಅಥವಾ complaint ತೆಗೆದುಕೊಳ್ಳಬೇಕಾದಂತಹ ಕರ್ತವ್ಯ ಸಂಬಂಧಪಟ್ಟ ಪೋಲೀಸ್ ಠಾಣೆಯದ್ದಾಗಿರುತ್ತದೆ. ಅದರಲ್ಲಿಯೂ ಕೂಡ ಈ ಸರ್ಕಾರ ವಿಫಲವಾಗಿದೆ ಮತ್ತು ಈ ಎಲ್ಲಾ ಅಂಶಗಳನ್ನು ನಾನು ಗಮನಿಸಿದಾಗ, ಗಣಪತಿ ಸಾವಿನ ಬಗ್ಗೆ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯಲ್ಲಿ ಚರ್ಚೆಯಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈ ಪ್ರಕರಣವನ್ನು ಏಕಾಏಕಿ ಸಿ.ಐ.ಡಿ., ಗೆ ಕೊಟ್ಟುಬಿಡುತ್ತಾರೆ. ಸಿ.ಐ.ಡಿ., ಗೆ ಕೊಟ್ಟು...

**ಶ್ರೀ ಕೆ.ಆರ್. ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ, ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕರಿಸಬೇಕು. ಸದರಿಯವರು ಏನು ನೋಟಿಸ್ ಕೊಟ್ಟಿದ್ದಾರೆಂದು ಓದಲಿ. ಸಂವಿಧಾನಬಾಹಿರವಾಗಿ ಶ್ರೀ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆ.ಜೆ. ಜಾರ್ಜ್‌ರವರು ಸಚಿವ ಸಂಪುಟದಲ್ಲಿ ಮುಂದುವರೆಯುತ್ತಿದ್ದಾರೆ ಎನ್ನುವಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಎಫ್.ಐ.ಆರ್., ಆಗಿದೆ, ಅದರಲ್ಲಿ ಅವರು ಮೊದಲನೇ ಆರೋಪಿಯಾಗಿದ್ದಾರೆ. 'ಬಿ' ರಿಪೋರ್ಟ್ ಕೊಟ್ಟಿದ್ದಾರೆ ಎನ್ನುವಂತಹ ಎಲ್ಲಾ ವಿಷಯಗಳು ಮುಗಿದಿವೆ. ಮಾನ್ಯ ಸುಪ್ರೀಂ ಕೋರ್ಟ್...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ...

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, I am on a point of order. ದಯಮಾಡಿ... ದಯಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ... ನಾನು ತಮಗೆ ಮನವಿ ಮಾಡುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ನನ್ನ ಕ್ರಿಯಾಲೋಪವನ್ನು ಮುಗಿಸಬೇಕಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ನನಗೆ 8 ನಿಮಿಷ ಸಮಯ ನೀಡಿದಾಗ, ಆ 8 ನಿಮಿಷ ಸಮಯವನ್ನು ನಾನು ಮಾತನಾಡಿ ಮುಗಿಸಬೇಕು. ಮಾನ್ಯ ಸಚಿವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರು ತಮಗೆ ಸಮಯ ಕೊಡುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಸಚಿವರು ಕ್ರಿಯಾಲೋಪ ಮಂಡಿಸಲು ಒಂದು ಗಂಟೆ ಸಮಯಾವಕಾಶ ಕೊಡಿ. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ, ನನ್ನ 8 ನಿಮಿಷ ಸಮಯಕ್ಕೆ ಇದು ಸೇರಬಾರದು.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಹೇಳಿರುವ ವಿಚಾರ ಸರಿ ಇದೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಈ ವಿಷಯದಲ್ಲಿ ನಾನು ಕೂಡ ಅವರ ಜೊತೆಗೆ ಇದ್ದೇನೆ. ನಾನು ಏನು ಸಮಯ ತೆಗೆದುಕೊಳ್ಳುತ್ತೇನೆ ಅದನ್ನು ಸೇರಿಸಿ 8 ನಿಮಿಷ ಮಾಡಬಾರದು, ಅವರಿಗೆ ಪ್ರತ್ಯೇಕವಾಗಿ 8 ನಿಮಿಷ ಅಲ್ಲದೇ ಇನ್ನು 2 ನಿಮಿಷ ಹೆಚ್ಚಿಗೆ ಕಾಲಾವಕಾಶ ಕೊಡಿ ಅದಕ್ಕೆ ನನ್ನ ಆಕ್ಷೇಪಣೆ ಇರುವುದಿಲ್ಲ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸುಪ್ರೀಂ ಕೋರ್ಟ್‌ನ ಆದೇಶ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಅದರ ಪರಿಣಾಮವಾಗಿ ಸಿ.ಬಿ.ಐ., ಮಾಡಿರತಕ್ಕಂತಹ ಕೆಲಸ, ಅದಕ್ಕೆ ನಾವು ಸೀಮಿತವಾಗಿರಬೇಕೇ ಹೊರತು, ತತ್ಪರಿಣಾಮವಾಗಿ ಎಫ್.ಐ.ಆರ್., ಹಾಕಿದ್ದಾರೆ, ಉಳಿದದ್ದು matter of urgent public importance ಇದೆಯೋ, matter of recent occurrence ಇದೆಯೋ, ಆ ಯಾವುದೇ ಮೆರಿಟ್ಸ್‌ಗೆ ನಾನು ಹೋಗುತ್ತಿಲ್ಲ. But, the Hon'ble Leader of Oppositon is taking out an issue. What he has mentioned is different from his own notice. ಅವರೇ ಕೊಟ್ಟಿರತಕ್ಕಂತಹ ನೋಟಿಸ್ ಅನ್ನು ಇನ್ನೊಂದು ಬಾರಿ ಓದಿಕೊಳ್ಳಲಿ. ಇದಕ್ಕೆ ಅವರು ಸೀಮಿತವಾಗಬೇಕೇ ಅಥವಾ ಬೇಡವೇ ಎನ್ನುವುದನ್ನು ತಾವು ನಿರ್ಣಯ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ನಾನು ಹೇಳುವುದೇನೆಂದರೆ, ಸುಪ್ರೀಂ ಕೋರ್ಟ್‌ಗೆ ಶ್ರೀ ಕುಶಾಲಪ್ಪನವರು ಹೋದಾಗ ಸಿ.ಬಿ.ಐ., ದಿನಾಂಕ: 05.09.2017ರಲ್ಲಿ ಆದೇಶ ಮಾಡಬೇಕಾದರೆ ಅವರು ಹೇಳುತ್ತಾರೆ, "ಸಿ.ಐ.ಡಿ., ತನಿಖೆಯ ಗಂಭೀರ ಲೋಪದೋಷಗಳ ಬಗ್ಗೆ ಗಮನಿಸಿದ್ದು, ಪ್ರಮುಖವಾಗಿ ಎಫ್.ಎಸ್.ಎಲ್., ವರದಿಯನ್ನು 'ಬಿ' ವರದಿ ಸಲ್ಲಿಸಿದ 6 ತಿಂಗಳ ನಂತರ ಕೊಡುತ್ತಾರೆ." ಆದರೆ...

**ಶ್ರೀ ವಿ.ಎಸ್. ಉಗ್ರಪ್ಪ(ನಾಮ ನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೆ...

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಎಫ್.ಎಸ್.ಎಲ್., ವರದಿ ಸಿಗುವುದಕ್ಕೆ ಮುಂಚೆಯೇ ಆರೋಪಿತರಿಗೆ ಕ್ಲೀನ್‌ಚಿಟ್ ಕೊಟ್ಟುಬಿಡುತ್ತಾರೆ...

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, I am on a point of order. I am raising a point of order.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ನಾನು ಮಾತನಾಡಿದ ನಂತರ ಮಾತನಾಡಲಿ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, I am raising a point of order under Rule 330.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ನಾನು ಹೇಗೆ ಮಾತನಾಡಲಿ? ಇವರೆಲ್ಲರೂ ವಕೀಲರಾಗಿ point of order ಎಂದರೆ ಹೇಗೆ?

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, ದಯಮಾಡಿ I am raising a point of order under Rule 330.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಈ ಒಂದು ಕೊಲೆ ಪ್ರಕರಣವನ್ನು ಕಾನೂನುಬದ್ಧವಾಗಿ ಮುಚ್ಚುವಂತಹ ಪ್ರಯತ್ನ ಇದಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, please allow me to raise my point of order.

**ಸಭಾಪತಿಯವರು**:- ಅವರು ತಮ್ಮ 8 ನಿಮಿಷದ ಮಾತನ್ನು ಮುಗಿಸಲಿ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, ದಯಮಾಡಿ ರೂಲ್ 50 ಅನ್ನು ನೋಡಿ.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರನ್ನು ತಾವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದರೂ ಅವರು ಕುಳಿತುಕೊಳ್ಳುತ್ತಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, ದಯಮಾಡಿ ರೂಲ್ 61 ಅನ್ನು ನೋಡಿ.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರನ್ನು ತಾವು ಕೂರಿಸಿ, ನಾನು ನನ್ನ ಮಾತನ್ನು ಮುಂದುವರೆಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, it is my right.

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ತಾವು ಅವರನ್ನು ಕುಳಿತುಕೊಳ್ಳಿ ಎಂದು ಹೇಳಿದರೂ ಅವರು ಕುಳಿತುಕೊಳ್ಳುತ್ತಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ**:- ಮಾನ್ಯ ಸಭಾಪತಿಯವರೆ, it is my right to raise a point of order.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಅವರಿಗೆ ಅವಕಾಶ ಕೊಟ್ಟಿದ್ದೀರಾ? ತಾವು ಅವರಿಗೆ ಅವಕಾಶ ಕೊಟ್ಟಿದ್ದರೆ ಸರಿ, ನಾನು ನನ್ನ ಮಾತನ್ನು ಮುಂದುವರೆಸುವುದಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, raising a point of order is my right.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ತಮ್ಮ ಪಾಯಿಂಟ್ ಆಫ್ ಆರ್ಡರ್ ಅನ್ನು ನಾನು ತೆಗೆದುಕೊಳ್ಳುತ್ತೇನೆ. ಅದನ್ನು ನಾನು ಗಮನಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ದಯಮಾಡಿ... ಪ್ಲೀಸ್...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತನ್ನು ಮುಗಿಸುತ್ತಿದ್ದಾರೆ, ಇನ್ನು 4–5 ನಿಮಿಷ ಸಮಯ ಇದೆ. ಈಗಾಗಲೇ 3 ನಿಮಿಷದ ಮಾತನ್ನು ಮುಗಿಸಿದ್ದಾರೆ. ದಯಮಾಡಿ, ಪ್ಲೀಸ್.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಅನ್ನು ಪಾಯಿಂಟ್ ಆಫ್ ಆರ್ಡರ್ ನಲ್ಲಿ ಇಲ್ಲವಾದರೆ ಅದನ್ನು ವಜಾ ಮಾಡಿ.

**ಸಭಾಪತಿಯವರು:–** ನೋಡಿ... ಅವರಿಗೂ ಅವಕಾಶ ಕೊಡಿ. ಅವರು ಮಾತನಾಡಲಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಸಂವಿಧಾನ ರೀತ್ಯಾ ಸದನ ನಡೆಸಬೇಕು.

**ಸಭಾಪತಿಯವರು:–** ಹೌದು.

**ಶ್ರೀ ವಿ.ಎಸ್. ಉಗ್ರಪ್ಪ:–** ನಿಯಮಾವಳಿಗಳ ರೀತ್ಯಾ ನಡೆಸಬೇಕು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಂವಿಧಾನದ ಹೆಸರಿನಲ್ಲಿ ಕಗ್ಗೊಲೆಗಳನ್ನು ಮಾಡಿದ್ದಾರೆ, ಪ್ರಾಮಾಣಿಕ ಅಧಿಕಾರಿಗಳ ಕೊಲೆ ಮಾಡಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಂವಿಧಾನವನ್ನು ಮೇಲೆ ಎತ್ತಬೇಕಾಗಿರುವುದು ತಾವು...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್ ಅನ್ನು raise ಮಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪ್ರಾಮಾಣಿಕ ಅಧಿಕಾರಿಗಳ ಕೊಲೆಯಾಗಿರುವುದನ್ನು ಸಂವಿಧಾನದ ಮುಖಾಂತರ ಇಲ್ಲಿ ಚರ್ಚೆ ಮಾಡದೇ ಬೇರೆ ಎಲ್ಲಿ ಮಾಡಬೇಕು?

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್ ಅನ್ನು raise ಮಾಡುತ್ತಿದ್ದೇನೆ. Please allow me to raise.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ ಎಫ್.ಐ.ಆರ್., ಹಾಕಿದಾಗಲೂ ಕೂಡ ಅವರು ರಾಜೀನಾಮೆ ಕೊಟ್ಟಿಲ್ಲವೆಂದರೆ ಏನು ಅರ್ಥ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, raising a point of order is my right. As a Member, I have a right to raise point of order.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಅದಕೋಸ್ಕರ ಹೇಳುತ್ತಿರುವುದು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಆ ನಂತರ ಸರ್ಕಾರ ತನ್ನ ಉತ್ತರ ಕೊಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, please..

**ಸಭಾಪತಿಯವರು:-** ಆಯಿತು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ದಯಮಾಡಿ, ಪ್ಲೀಸ್...

**ಸಭಾಪತಿಯವರು:-** ಕುಳಿತುಕೊಳ್ಳಿ. ಅವಕಾಶ ಕೊಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮಂಡಿಸಿದ ನಂತರ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವಿರುವುದಿಲ್ಲ. ಅವರ ನಿಲುವಳಿ ಸೂಚನೆ ಮುಗಿದ ನಂತರ ಪಾಯಿಂಟ್ ಆಫ್ ಆರ್ಡರ್ ಇರುವುದಿಲ್ಲ.

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, the point of order is regarding the submission. You have to allow the point of order.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, it is my inherent right.

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೆ, ಇಲ್ಲವಾದಲ್ಲಿ the point of order will lapse.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ರೀತಿ ತಾವು ಎಲ್ಲರಿಗೂ ಪಾಯಿಂಟ್ ಆಫ್ ಆರ್ಡರ್ ಕೊಡುತ್ತಾ ಹೋಗಿ.

**(ಗೊಂದಲ)**

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೆ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಹತ್ತು ಜನ... ಹತ್ತು ಜನ ನಿಂತಿದ್ದೀರಿ!

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈ ರೀತಿ ನಾವು ಕೊಲೆ ಮಾಡುವುದಕ್ಕೇ ಇದ್ದೀವಿ, ನಮ್ಮ ವಿರುದ್ಧ ಯಾರೂ ಬರಬೇಡಿ ಎನ್ನುವ ರೀತಿಯಾಗಿದೆ ಇದು. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಸುಪ್ರೀಂ ಕೋರ್ಟ್ ಏನು ಹೇಳಿದೆ ಅದನ್ನು ಎತ್ತಿಹಿಡಿಯಬೇಕು, ಮಾನ್ಯ ಸಚಿವರು ರಾಜೀನಾಮೆ ಕೊಡಲೇಬೇಕು, ಬೇರೆ ದಾರಿಯಿಲ್ಲ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

ಎಲ್ಲವನ್ನು ಕೇಳೋಣ. ಚರ್ಚೆ ಮಾಡೋಣ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಶ್ರೀ ಎಂ.ಕೆ. ಗಣಪತಿಯವರನ್ನು ಕೊಂದು ಹಾಕಿದ್ದಾರೆ, ಪ್ರಕರಣವನ್ನು ಮುಚ್ಚಿ ಹಾಕಿದ್ದಾರೆ, ಸಾಕ್ಷಿ ನಾಶ ಮಾಡಿದ್ದಾರೆ.

**(ಗೊಂದಲ)**

ಸುಪ್ರೀಂ ಕೋರ್ಟ್ ಸಿ.ಬಿ.ಐ. ತನಿಖೆಯಾಗಲಿ ಎಂದು ಆದೇಶ ನೀಡಿತು, ನಾವು ಕೂಡ ಈ ಬಗ್ಗೆ ಕೇಳಿದ್ದೆವು, ಆದರೆ ಸರ್ಕಾರ ನಮ್ಮ ಮಾತನ್ನು ಕೇಳಲಿಲ್ಲ.

**(ಗೊಂದಲ)**

**ಸಭಾಪತಿಯವರು:–** ಇಷ್ಟು ಜನ ಎದ್ದು ನಿಂತು ಮಾತನಾಡುತ್ತಿದ್ದೀರಿ. ಏನು ಮಾಡುವುದು? ಯಾವುದೂ ದಾಖಲೆಗೆ ಹೋಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಭೆ ನಡೆಸೋಣ.

**(ಗೊಂದಲ)**

**ಶ್ರೀ ವಿ. ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರ ಬಾಯಿ ಕಟ್ಟಿ ಹಾಕುವಂತೆ ಮಾಡುವುದರಲ್ಲಿ ಅರ್ಥ ಏನಿದೆ?

**ಸಭಾಪತಿಯವರು:–** ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ...

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಈ ವಿಚಾರವನ್ನು ಮಾನ್ಯ ರಮೇಶ್‌ಕುಮಾರ್‌ರವರು...

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ(ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಅನ್ನು ಅಲೋ ಮಾಡುವುದು ಅಥವಾ ಬಿಡುವುದು ಬೇರೆ ವಿಚಾರ. ಆದರೆ, ಅವರು ಹೇಳುವುದನ್ನು ಕೇಳಲಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ತಾವು ನಿಲುವಳಿ ಸೂಚನೆ ಮಂಡಿಸಲು ಕಾಲಾವಕಾಶ ಕೊಟ್ಟಿದ್ದೀರಿ...

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್‌ಗೆ ಅನುಮತಿ ನೀಡಬಾರದೆಂದು ಯಾವ ನಿಯಮದಲ್ಲಿದೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ತಾವು 5 ರಿಂದ 8 ನಿಮಿಷಗಳ ಕಾಲ ಒಂದು ನಿಗದಿತ ಸಮಯ ನೀಡಿದ್ದೀರಿ. ಆ ಸಮಯ ಮುಗಿದ ನಂತರ ತಾವು ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಅದನ್ನು ತಾವು ನಿರ್ಧಾರ ಮಾಡಿ.

**ಸಭಾಪತಿಯವರು:-** ತೀರ್ಮಾನ ಮಾಡೋಣ.

**(ಗೊಂದಲ)**

(ಮುಂದುವರೆದಿದೆ...)

(923)13.11.2017/12.40/ವೈಎಲ್-ಎಂಡಿ

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ವೋಚ್ಛ ನ್ಯಾಯಾಲಯದಲ್ಲಿ ಆಗಿರತಕ್ಕಂಥ ಆದೇಶದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ನೋಟೀಸ್‌ನಲ್ಲಿ ಏನಿದೆ ಅದನ್ನು ಹೇಳಲಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಸಚಿವರು ಅದರ ಗಾಂಭೀರ್ಯತೆ ಏನೆಂಬುದನ್ನು ಹೇಳಿದ್ದಾರೆ. ಅದರ ಆಧಾರದ ಮೇಲೆಯೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿ ಮುಗಿಸಲಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ: 14.10.2017ರ ಪ್ರಕರಣವನ್ನು ಸಿಬಿಐ ಮೂಲಕ ತನಿಖೆ ನಡೆಸಲು ಸರ್ವೋಚ್ಛ ನ್ಯಾಯಾಲಯ ತಿಳಿಸಿದೆ ಎಂದು ನೋಟೀಸ್‌ನಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ನೋಟೀಸ್‌ನಲ್ಲಿಯೂ ಸರ್ವೋಚ್ಛ ನ್ಯಾಯಾಲಯವೆಂದು ಇದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, Point of Order ಹೆಸರಿನಲ್ಲಿ ಸದನವನ್ನು ನಡೆಯುವುದಕ್ಕೆ ಆಡಳಿತ ಪಕ್ಷದವರು ಬಿಡುತ್ತಿಲ್ಲ. ಎಲ್ಲರೂ Point of Order ನ್ನು ಪ್ರಸ್ತಾಪ ಮಾಡಿದರೆ ಸದನವು ಹೇಗೆ ನಡೆಯಬೇಕು? ಮತ್ತು ವಿಚಾರವನ್ನು ಹೇಗೆ ಮಂಡಿಸಬೇಕೆಂದು ಮೊದಲು ಅದು ಸ್ಪಷ್ಟವಾಗಲಿ. ಎಲ್ಲರೂ Point of Order ನ್ನು ಪ್ರಸ್ತಾಪ ಮಾಡಿದರೆ ಹೇಗೆ ಚರ್ಚೆಯಾಗುತ್ತದೆ? ಕೇವಲ Point of Order ಬಗ್ಗೆ ಚರ್ಚೆ ಮಾಡುವುದಕೋಸ್ಕರ ಕುಳಿತ್ತಿದ್ದೇವೆಯೇ? ಇಲ್ಲಿ ಆಡಳಿತ ಪಕ್ಷದವರು ಕೇವಲ ಬಾಯಿ ಮುಚ್ಚಿಸುವ ಕೆಲಸವನ್ನು ಮಾಡುತ್ತಿದ್ದಾರೆ.

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಬಹಳ ತಿಳುವಳಿಕೆ ಹೊಂದಿರುವಂತಹ ಸಭಾನಾಯಕರೆ ಈ ರೀತಿ ಮಾಡಿದರೆ ಹೇಗೆ? ಮಾನ್ಯ ರಮೇಶ್ ಕುಮಾರ್‌ರವರು ಸಚಿವರಾಗುವ ಮೊದಲು ಸರ್ಕಾರದ ಬಗ್ಗೆ ಹಿಗ್ಗಾ-ಮುಗ್ಗಾವಾಗಿ ಮಾತನಾಡುತ್ತಿದ್ದರು.

(ಗೊಂದಲ)

ಸಚಿವರಾಗುವ ಮೊದಲು ಸರ್ಕಾರ ಮಾಡಿದ ಕೆಲಸವೆಲ್ಲಾ ತಪ್ಪು. ಆದರೆ, ಸಚಿವರಾದ ಮೇಲೆ ಸರ್ಕಾರ ಮಾಡಿದ ಕೆಲಸವೆಲ್ಲಾ ಸರಿ ಎನ್ನುವುದು ಎಷ್ಟು ಸರಿ? ಇಂತಹ ಭ್ರಷ್ಟ ರಾಜಕಾರಣಿಯಿಂದಲೇ ರಾಜ್ಯಕ್ಕೆ ಅನ್ಯಾಯವಾಗುತ್ತಿರುವುದು.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಕುಮಾರ್‌ರವರು ಮಾಡಿರತಕ್ಕಂಥದು ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ಕುಳಿತುಕೊಳ್ಳಲು ಹೇಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ಏನು ಮಾಡಿದ್ದಾರೆಂಬುದನ್ನು ಮೊದಲು ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ಕುಳಿತುಕೊಳ್ಳಲು ಹೇಳಿ. ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಕರ್ತವ್ಯವನ್ನು ನಾನು ಮಾಡುತ್ತಿದ್ದೇನೆ. ಅನಂತರ ಸರ್ಕಾರ ಉತ್ತರವನ್ನು ನೀಡಲಿ. ಈ ರೀತಿಯಾಗಿ ಮಾಡುವುದು ಮಾನ್ಯ ಸಚಿವರಿಗೆ ಒಳ್ಳೆಯದಲ್ಲ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೋಸ್ಕರ ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನನ್ನಗೋಸ್ಕರ ಮಾನ್ಯ ಸಚಿವರು ಹೇಳುವುದು ಬೇಡ ದಯವಿಟ್ಟು ಸಚಿವರಿಗೆ ಕುಳಿತುಕೊಳ್ಳಲು ಹೇಳಿ.

(ಗೊಂದಲ)

ವಿರೋಧ ಪಕ್ಷದ ಹಕ್ಕನ್ನು ಕಸಿದು ಕೊಳ್ಳುವಂತಹ ವ್ಯವಸ್ಥೆಯಾಗುತ್ತಿದೆ. ದಯವಿಟ್ಟು ಇದೆಲ್ಲಾ ಬೇಡ. ನೀವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಮಾತನಾಡಿ ಮುಗಿಸುತ್ತೇನೆ. ದಯವಿಟ್ಟು ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಿ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, Common Wealth Countries ನಲ್ಲಿ ನಡೆಯತಕ್ಕಂಥ Common Wealth Conference ಗೆ you are a party. As a Presiding Officer you are behind the group of Common Wealth Nation.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಒಬ್ಬ ಪ್ರಾಮಾಣಿಕ ಪತ್ರ ಕರ್ತರನ್ನು ಕೊಲೆ ಮಾಡಿ, clean chit ತೆಗೆದುಕೊಂಡಂತಹ ಉದಾಹರಣೆ ಯಾವುದೇ ದೇಶದಲ್ಲಿಯೂ ಇಲ್ಲ. ಪ್ರಪಂಚದ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಯಾವುದೇ ರಾಷ್ಟ್ರದಲ್ಲಿ ಪ್ರಾಮಾಣಿಕ ಅಧಿಕಾರಿಯನ್ನು ಕೊಲೆ ಮಾಡಿ clean chit ತೆಗೆದುಕೊಂಡಂತಹ ಉದಾಹರಣೆ ಇದೆಯೇ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇವರು ಯಾರು ಅದನ್ನು ಹೇಳುವುದಕ್ಕೆ. ಅದನ್ನು ಕೋರ್ಟ್ ಹೇಳುತ್ತದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮತ್ತು ಯಾರು Adjournment Motion move ಮಾಡಿದ್ದಾರೆಯೋ ಅವರಿಗೆ 5 ರಿಂದ 8 ನಿಮಿಷಗಳ ಕಾಲ ಪೂರ್ವಭಾವಿ ಚರ್ಚೆಯಲ್ಲಿ ಮಾತನಾಡಲು ಅವಕಾಶವನ್ನು ನೀಡಿದ್ದೀರಿ. ಹಾಗೆಯೇ ನಾನು ಸಭಾನಾಯಕನಾಗಿದಂತಹ ಸಂದರ್ಭದಲ್ಲಿ ಮಾನ್ಯ ಬಸವರಾಜ ಎಸ್ ಹೊರಟ್ಟಿಯವರು ಹಾಗೂ ಮಾನ್ಯ ಪುಟ್ಟಣ್ಣನವರು ಹೇಳಿದ ವಿಚಾರವನ್ನು ಒಪ್ಪಿಕೊಂಡು ಸುಮ್ಮನೆ ಕುಳಿತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿಯೂ ಹಾಗೆಯೇ ಕೂರಿಸಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಇರತಕ್ಕಂಥ ಸತ್ಯವಾದ ವಿಚಾರವನ್ನೇ ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಆತ್ಮವಂಚನೆಯನ್ನು ಮಾಡಿಕೊಂಡು ಬಂದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸಹಾ ಮಾನ್ಯ ಎಸ್.ಆರ್.ಪಾಟೀಲ್‌ರನ್ನು ಮೆಚ್ಚುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯ ನಿರ್ಣಯವನ್ನು ಸದನ ಒಪ್ಪಿದಂತಹ ಎಲ್ಲಾ ವಿಚಾರವನ್ನು ಒಪ್ಪಿಕೊಂಡು ಕುಳಿತ್ತಿದ್ದೇನೆ. ಆದರೆ, ಅಲ್ಲಿ ನಿರ್ಣಯವಾಗಿರುವಂತೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ 5 ರಿಂದ 8 ನಿಮಿಷಗಳ ಕಾಲ ಪೂರ್ವಭಾವಿ ಚರ್ಚೆ ಮಾಡಲು ಅವಕಾಶ ಕಲ್ಪಿಸಬೇಕೆಂದು ನಿರ್ಣಯವಾಗಿರತಕ್ಕಂಥದ್ದು you have to discuss only about the tenability of the Adjournment Motion. One should not go deep into the merit of the case. ಈಗ tenability ಬಗ್ಗೆಯೇ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಬೇಕು. ವಿರೋಧ ಪಕ್ಷದ ನಾಯಕರು ಬಹಳ ಹಿರಿಯರಾಗಿದ್ದಾರೆ. ಅವರ ಬಗ್ಗೆ ನಮಗೆ ಗೌರವವಿದೆ. ನೀವು ಅವರಿಗೆ ಮಾತನಾಡಲು ಅವಕಾಶ ನೀಡಿದ್ದೀರಿ. It is binding on us. Rules of Procedure ಬಗ್ಗೆ ಹೇಳುವುದಾದರೆ, you can suspend all rules. You have got an unfettered discretionary power. ಅದರ ಬಗ್ಗೆ ನನ್ನ ಪ್ರಶ್ನೆ ಇಲ್ಲ. ಆದರೆ, ಇಲ್ಲಿ 5 ರಿಂದ 8 ನಿಮಿಷಗಳ ಕಾಲ ಯಾರು Adjournment Motion move ಮಾಡಿದ್ದಾರೆ, ಅವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶ ನೀಡಿದರೆ he has to discuss only about the tenability of the Adjournment Motion. He should not go deep into the merits of the Adjournment Motion. ಆದರೆ, ಇಲ್ಲಿ tenability ಬಗ್ಗೆ ಚರ್ಚೆಯಾಗುತ್ತಿಲ್ಲ. ಮಾನ್ಯ ಈಶ್ವರಪ್ಪನವರು ಹಿಂದೆ ನಡೆದಂತಹ ಘಟನೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ಇಲ್ಲಿ he has to discuss only about the tenability. Other than the tenability he should not discuss anything. It is my submission.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ದಯಮಾಡಿ Point of Order ನ್ನು ಈ ಸದನದ ಪ್ರತಿಯೊಬ್ಬ ಸದಸ್ಯರು ಎತ್ತುವುದಕ್ಕೆ ಅವಕಾಶವಿದೆ.

**ಸಭಾಪತಿಯವರು**:- ಹಾಗಲಿ, ತಾವು ಎತ್ತಿರತಕ್ಕಂಥ ಕ್ರಿಯಾಲೋಪದ ಬಗ್ಗೆ ನೋಡೋಣ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆಯೇ ಪಾರ್ಲಿಮೆಂಟ್‌ನಲ್ಲಿ ಮೂರುವರೆ ದಿವಸಗಳ ಕಾಲ ಚರ್ಚೆಯಾಗಿದೆ. ಹಾಗೆಯೇ ರಾಯಚೂರಿನ ನಾಗಪ್ಪನವರು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಹಿನ್ನೆಲೆಯಲ್ಲಿ ಇದೇ ಸಭೆಯಲ್ಲಿಯೂ ಎರಡೂವರೆ ದಿವಸಗಳ ಕಾಲ ಅತ್ಯುತ್ತಮವಾಗಿ ಚರ್ಚೆಯಾಗಿದೆ. Point of Order ನ್ನು ಪ್ರಸ್ತಾಪ ಮಾಡತಕ್ಕಂಥದ್ದು ಸದಸ್ಯಗಳ ಹಾಗೂ ಸದಸ್ಯರುಗಳ ಕರ್ತವ್ಯವಾಗಿರುತ್ತದೆ. ಆದರೆ, ನಾನು ಪ್ರಸ್ತಾಪ ಮಾಡಿದಂತಹ Point of Order ನ್ನು reject ಮಾಡಿ, ಅನಂತರ ವಿರೋಧ ಪಕ್ಷದ ನಾಯಕರನ್ನು ಅನುಮತಿ ನೀಡಿ. It is my right. ನನ್ನ ಹಕ್ಕನ್ನು ತಾವು......

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಅದು ಕರ್ತವ್ಯವಲ್ಲ. ಅದು ಹಕ್ಕು. It is a right.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, It is my right.

**ಸಭಾಪತಿಯವರು:-** ಆದರೆ, ನೀವು ಕರ್ತವ್ಯವೆಂದು ಹೇಳುತ್ತಿದ್ದೀರಿ. ಕರ್ತವ್ಯಕ್ಕೂ ಹಕ್ಕಿಗೂ ಬಹಳ ವ್ಯತ್ಯಾಸವಿರುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಹಾಗಾಗಿ ನನ್ನ ಹಕ್ಕಾಗಿರುವುದರಿಂದ ನಾನು Point of Order ನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸದನ order ನಲ್ಲಿ ನಡೆಯಬೇಕೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆಯ್ತು, ತಾವು ಹೇಳಿದ್ದೀರಿ. ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ತಾವು ನನಗೆ Point of Order ನ್ನು ಪ್ರಸ್ತಾಪ ಮಾಡುವಂತಹ ಅವಕಾಶವನ್ನು ಕೊಟ್ಟಿಲ್ಲ.

**ಸಭಾಪತಿಯವರು:-** ಅವಕಾಶವನ್ನು ಕೊಡುತ್ತೇನೆ. ತಾವು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ಭಾಷಣ ಮುಗಿದ ಮೇಲೆ ನನ್ನ Point of Order ಪ್ರಶ್ನೆ ಬರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ನೋಡೋಣ. ಕುಳಿತುಕೊಳ್ಳಿ. ಅವರೇನು ಹೇಳುತ್ತಾರೆಂಬುದನ್ನು presume ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಯಾವುದೇ ಒಬ್ಬ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ನಮ್ಮ ಸದನಗಳ ಕಲಾಪ ನಾವೇ ನಿರ್ಮಿಸಿದಂತಹ ನೀತಿ ನಿಯಮಗಳಿಗೆ ಅನುಗುಣವಾಗಿಲ್ಲವೆಂದು ಮತ್ತೊಬ್ಬ ಸದಸ್ಯರಿಗೆ ಅನ್ನಿಸಿದಾಗ ಕ್ರಿಯಾಲೋಪ ಎತ್ತಿಹಿಡಿದ ಸಂದರ್ಭದಲ್ಲಿ ಆ ತಕ್ಷಣಕ್ಕೆ ಪೀಠಾಧಿಕಾರಿಗಳಾದಂತಹ ತಾವು ಇಂತಹ ಕ್ರಿಯಾಲೋಪವನ್ನು ಕೇಳಿದ ಮೇಲೆ ತಳ್ಳಿ ಹಾಕಿದ್ದೇನೆ ಅಥವಾ ಅನುಮತಿ ಕೊಟ್ಟಿದ್ದೇನೆ ಎಂದು ಯಾವುದಾದರೂ ಒಂದನ್ನು ಹೇಳಬೇಕು. ಕ್ರಿಯಾಲೋಪವನ್ನೇ ಕೇಳುವುದಿಲ್ಲವೆಂದು ಹೇಳುವಂತಹ ಅಧಿಕಾರ ತಮಗೆ ಇರುವುದಿಲ್ಲ. ಅತ್ಯಂತ ನಮ್ರತೆಯಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. Raising Point of Order is a inherent right of a Member of the House. Parliament has discussed about this in detail. And also our Upper and Lower House has discussed about it. ಬ್ರಿಟಿಷ್ ವಸಾಹತುವಿನಿಂದ ಬಿಡುಗಡೆಯಾಗಿರುವವರು ಇವತ್ತಿಗೂ Common Wealth Nations League ಇಟ್ಟುಕೊಂಡಿದ್ದೇವೆ. ಪ್ರತಿ ವರ್ಷವೂ ತಾವು ಹಾಗೂ ವಿಧಾನ ಸಭಾ ಅಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರು Common Wealth Conference ಗೆ ಹೋಗಿ ಬರುತ್ತೀರಿ. Point of Order ನ್ನು ಪ್ರಸ್ತಾಪ ಮಾಡಿದಂತಹ ವಿಚಾರದ ಬಗ್ಗೆ, it has been raised in the Parliament and also in the International Conference. Please, I appeal to you with the folded hands, you can hear the Hon'ble Member and then you can say whether you have allowed the point of order or you have disallowed it. But, you cannot take away the right of the Hon'ble Member to present his Point of Order.

**ಸಭಾಪತಿಯವರು:–** ಇಲ್ಲಿ Point of Order ಬಗ್ಗೆ ನನಗೂ ಸಾಕಷ್ಟು ವಿಚಾರಗಳು ಗೊತ್ತಿದೆ. ನಾನು ಸಹ ಸಾಕಷ್ಟು ಅಧಿವೇಶನಗಳಲ್ಲಿ ಚರ್ಚೆ ಮಾಡಿದ್ದೇನೆ. ಸಮ್ಮೇಳನಗಳಲ್ಲಿ ಭಾಗವಹಿಸಿದ್ದೇನೆ. ನನಗೂ ಗೊತ್ತಿದೆ. ಆದರೆ, Point of Order ಹೆಸರಿನಲ್ಲಿ ಭಾಷಣ ಮಾಡುವುದಕ್ಕೆ ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ನೀವು to the point ಮಾತನಾಡಬೇಕಾಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, Point of Order ಏನು ಎನ್ನುವುದರ ಬಗ್ಗೆ ಮಾತನಾಡುವುದಕ್ಕೆ ಅವಕಾಶವೇ ಕೊಟ್ಟಿಲ್ಲವಲ್ಲವೇ?

**ಸಭಾಪತಿಯವರು:-** ಇಲ್ಲ. ಶ್ರೀ ರಮೇಶ್ ಕುಮಾರ್‌ರವರು ತುಂಬಾ ಹಿರಿಯರು. ಅವರು ಸಹ ಪೀಠಾಧಿಪತಿಯಾಗಿ ಕೆಲಸ ಮಾಡಿರುವಂತವರು. Point of Orderಗೆ instantaneous ruling ಕೊಡಬೇಕೆಂದು ಏನಿಲ್ಲ. ತದನಂತರವೂ ruling ಕೊಡುವುದಕ್ಕೆ ಬರುತ್ತದೆ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ, ನಾನು ಸಹ ಪೀಠಾಧಿಪತಿಯಾಗಿ ಬಹಳಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೂ ಸಾಕಷ್ಟು ವಿಷಯಗಳು ಗೊತ್ತಿದೆ. ಮಾನ್ಯ ರಮೇಶ್ ಕುಮಾರ್‌ರವರೆ ಆ ರೀತಿ ಹೇಳಬೇಡಿ. ನಾನು ಈ ಸದನ ನಡೆಸಬೇಕು. ಸದನ ನಡೆಸುವುದಕ್ಕಾಗಿ ಕೆಲವು ನಿಬಂಧನೆಗಳಿವೆ. ಆ ನಿಬಂಧನೆಗಳೊಳಗೆ ಸದನವನ್ನು ನಡೆಸಬೇಕಾಗುತ್ತದೆ. ಸದನ ಒಪ್ಪಿರುವಾಗೆಯೇ ವಿರೋಧ ಪಕ್ಷದ ನಾಯಕರು 5 ರಿಂದ 8 ನಿಮಿಷ ಮಾತನಾಡಿದ ಮೇಲೆ ಆಡಳಿತ ಪಕ್ಷದವರು ಬೇಕಾದರೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವುದು ಸರಿಯಿಲ್ಲ. Point of Order ಮೂಲಕ ತೆಗೆಯಿರಿ ಎಂದು ಹೇಳಿದ ಮೇಲೆ ಅದನ್ನು ನಾನು ಗಮನಿಸುತ್ತೇನೆ. ಅದರ ಮೇಲೆ ಅವಕಾಶವಿರುತ್ತದೆಯೇ ಹೊರತು, ಆಡಳಿತ ಪಕ್ಷದವರು, ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಬಿಡುವುದಿಲ್ಲ. ಅವರು ಮಾತನಾಡಿದರೆ Point of Order ಎಂದರೆ ಆಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಸದಸ್ಯರ ಹಕ್ಕನ್ನೇ ಏತಕ್ಕೆ ತಡೆಯುತ್ತಿದ್ದೀರಿ. It is my right. It is the right of the Member to raise a Point of Order.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮಗೆ ಮಾತನಾಡಲು ಅವಕಾಶ ಮಾಡಿಕೊಡಿ. ಆಡಳಿತ ಪಕ್ಷದವರು ಬೇಕಂತನ್ನೇ ಸಮಯವನ್ನು ಹಾಳು ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಹೌದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು...

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ನೀವು ಹೇಳಿದ ತಕ್ಷಣ ಮಾತನಾಡಲು ಅವಕಾಶ ನೀಡುವುದಕ್ಕೆ ಬರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ನಿಯಮ ಏಕೆ ಇರಬೇಕು?

**ಸಭಾಪತಿಯವರು:–** ನಾನು ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ. You have to obey the order of the Chair.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು Parliament, Common Wealth Conferences, Assembly and Council ನಲ್ಲಿ ನಡೆದಂಥದ್ದನ್ನು ಹೇಳಿದ್ದೇನೆ. ಹಾಗಾಗಿ ಕಾನೂನು ವಿರುದ್ಧವಾಗಿ, ನಿಯಮಾವಳಿ ವಿರುದ್ಧವಾಗಿ ಇಲ್ಲಿ submissions ನಡೆಯುತ್ತಿದೆ ಎಂಬುದಾದರೆ......

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು submissions ಮುಗಿಸಲ್ಲೇ ಇಲ್ಲ. ಅವರು ಏನೋ ವಿಷಯವನ್ನು ಹೇಳುತ್ತಿದ್ದರು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನನಂಥವರು ಯಾರು ನಿಯಮಾವಳಿಯನ್ನು ಓದಿದ್ದಾರೆ. ಸಂವಿಧಾನವನ್ನು ಓದಿದ್ದಾರೆ. ಅವರು ಯಾಕೆ ಇರಬೇಕು. Please allow me to talk.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ನೀವು ಬಹಳ Point of Order ಬಗ್ಗೆ ಮಾತನಾಡುವವರು Chairman ಗೆ, Chair ಗೆ, Chair ruling ಗೆ, ಗೌರವ ಕೊಡುವುದನ್ನು ಕಲಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು..

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಕುಳಿತುಕೊಳ್ಳಿ ಎಂದ ಮೇಲೆ ಕುಳಿತುಕೊಳ್ಳಬೇಕು. You better sit down. You have to sit down.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಸರಿಯಿಲ್ಲ. **ಸಭಾಪತಿಯವರು:-** ಆಯಿತು

You have to sit down.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೋಡಿ ಮಾನ್ಯ ಸಭಾನಾಯಕರೆ, ಸಭಾಪತಿಯವರು ಕುಳಿತುಕೊಳ್ಳಿ ಎಂದರೂ ಮಾನ್ಯ ಉಗ್ರಪ್ಪನವರು ಕುಳಿತುಕೊಳ್ಳುತ್ತಿಲ್ಲ.

(ಗೊಂದಲ)

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸಭಾಪತಿಯವರಿಗೆ ಗೌರವ ಕೊಡುವುದಿಲ್ಲ. ಆಡಳಿತ ಪಕ್ಷದವರು ಹೇಳಿದೇ ಸರಿಯೇ? ಅವರಿಗೆಲ್ಲಾ ನಾಚಿಕೆಯಾಗಬೇಕು.

(ಗೊಂದಲ)

**ಸಭಾಪತಿಯವರು:-** ಮಾತನಾಡುವುದಕ್ಕೆ ಬಿಡುವುದಿಲ್ಲವೆಂದು ನಾನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಉಗ್ರಪ್ಪನವರೇ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಹೇಳುವುದನ್ನು ನಾವು ಕೇಳಬೇಕೇ? ನಿಯಮಾವಳಿಗಳಲ್ಲಿ ಎಲ್ಲವೂ ಇದೆ.

(ಗೊಂದಲ)

ಮುಂದು . . .

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(924)/13.11.2017/12.50/ಎಸ್‌ಕೆ-ಎಂಡಿ

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶಿತರು):-** ನಿಯಮಾವಳಿಯಲ್ಲಿ ಏನಿದೆ ಎಂಬುದನ್ನು ನೋಡಿ.

**(ಗೊಂದಲ)**

**ಶ್ರೀ ವಿ. ಸೋಮಣ್ಣ (ವಿಧಾನ ಸಭಾ ಕ್ಷೇತ್ರ):-** ನಿಯಮಾವಳಿಯಲ್ಲಿ "interval" ಎಂದು ಇದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ನಿಮಗೆ ಬಾಯಿಗೆ ಬಂದಂತೆ ಮಾತನಾಡುವ ಅಭ್ಯಾಸವಿದೆ, ನಿಮಗೆ ಏನುಬೇಕಾದರೂ ಮಾತನಾಡುವ ಅಭ್ಯಾಸವಿದೆ. ದಯಮಾಡಿ ಕುಳಿತುಕೊಳ್ಳಿ. ನೀವು ಮಾತನಾಡಿದ ತಕ್ಷಣ ನಾವು ಒಪ್ಪುವುದಕ್ಕೆ ಆಗುವುದಿಲ್ಲ, ಕುಳಿತುಕೊಳ್ಳಿ. You cannot dictate terms. Please sit down.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಉಗ್ರಪ್ಪನವರೆ, ನೀವು ಮಾನ್ಯ ಸಭಾಪತಿಯವರಿಗೆ ಅವಮಾನ ಮಾಡುತ್ತಿದ್ದೀರಿ. ಮಾನ್ಯ ಸಭಾಪತಿಯವರೆ, ಇದು ಇವರು ತಮ್ಮ ಪೀಠಕ್ಕೆ ಮಾಡುತ್ತಿರುವಂತಹ ಅವಮಾನ. ಯಾವುದೇ ಕಾರಣಕ್ಕೂ ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ,. ....

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. I know what you are. ದಯಮಾಡಿ ಕುಳಿತುಕೊಳ್ಳಿ ಎಂದರೂ ನೀವು ಕುಳಿತುಕೊಳ್ಳುವುದಿಲ್ಲ. I have to run the House. Please, sit down. ನೀವು ಕುಳಿತುಕೊಳ್ಳುವುದಿಲ್ಲವೇ? You are challenging the Chair. Do you want to challenge the Chair?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ. ಸೋಮಣ್ಣ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದಯಮಾಡಿ ತಾವು ಒಂದು ಸ್ಪಷ್ಟತೆಯನ್ನು ಕೊಡಿ. ಮಾನ್ಯ ಉಗ್ರಪ್ಪನವರು ಈ ಸದನಕ್ಕೆ, ಮಾನ್ಯ ಸಭಾಪತಿಯವರಿಗಿಂತ ದೊಡ್ಡವರೇ? ಇಲ್ಲ ಮಾನ್ಯ ಸಭಾಪತಿಯವರ ಮಾತುಗಳನ್ನು ಕೇಳುವುದಕ್ಕೆ ಅವಕಾಶವಿದೆಯಾ? **(ಗೊಂದಲ)** ನೀವೇ ಹೇಳಿ ಅಷ್ಟೆಲ್ಲಾ ಹೇಳಿದ್ದು ಅವರು ಹೇಳಿದ್ದೇ ಕೇಳಬೇಕಾ. ಬೇರೆ ಯಾರು ಮಾತನಾಡುವುದಕ್ಕೆ ಅವಕಾಶ ಇಲ್ಲವೇ? ನೀವು ಮಾತನಾಡಿರುವುದನ್ನೆ ಹೇಳುತ್ತಿರುವುದು. ರೂಲಿಂಗ್ ಕೊಟ್ಟಿದ್ದಾರೆ, ಅರ್ಥ ಮಾಡಿಕೊಳ್ಳಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು, ಕುಳಿತುಕೊಳ್ಳಿ.

**(ಗೊಂದಲ)**

**Sri D.S.VEERAIAH:-** Sir, No member can tight the House.

**ಶ್ರೀ ವಿ. ಸೋಮಣ್ಣ (ವಿಧಾನ ಸಭಾ ಕ್ಷೇತ್ರ):-** ಅವರು ಪ್ರಸ್ತಾಪ ಮಾಡುತ್ತಿದ್ದಾರೆಂದು ಕೇಳಬಾರದೇನು ಹೇಳಿ?

**ಸಭಾಪತಿಯವರು:-** ದಯವಿಟ್ಟು, ಕುಳಿತುಕೊಳ್ಳಿ.

**(ಗೊಂದಲ)**

**Sri RAMACHANDRA GOWDA:-** This is beyond all Point of Orders. The permission given there by the Hon'ble Chairman is beyond all the rules.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರ ಪೀಠಕ್ಕೆ ಗೌರವವನ್ನು ಕೊಡುವುದನ್ನು ಸರ್ಕಾರದವರು ತಮ್ಮ ಶಾಸಕರಿಗೆ ಕಲಿಸಿಕೊಡಿ. ಮಾನ್ಯ ಸಭಾಪತಿಯವರಿಗೆ ಗೌರವ ಕೊಡುವುದು ಹೇಗೆ ಎಂಬುದನ್ನು ನಿಮ್ಮ ಶಾಸಕರುಗಳಿಗೆ ಹೇಳಿಕೊಡಿ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ (ಸಾರಿಗೆ ಸಚಿವರು):-** ಅವರು ಹೇಳುತ್ತಾರೆ. ನಿಮ್ಮಿಂದ ನಾವು ಕಲಿಯಬೇಕಾದದ್ದು ಏನು ಇಲ್ಲ. ಮಾನ್ಯ ಸಭಾಪತಿಯವರು ಕುಳಿತುಕೊಳ್ಳಿ ಎಂದು ಎಲ್ಲರಿಗೂ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಇದನ್ನು ನಾನು ನಿಮಗೆ ಹೇಳುತ್ತಿಲ್ಲ. ಮಾನ್ಯ ಸಭಾಪತಿಯವರಿಗೆ ಗೌರವ ಕೊಡುವುದನ್ನು ಶಾಸಕರುಗಳಿಗೆ ಕಲಿಸಿಕೊಡಿ ಎಂದು ಮಾನ್ಯ ಸಭಾನಾಯಕರಿಗೆ ಪ್ರಾರ್ಥನೆ ಮಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-**ನಿಯಮಗಳಲ್ಲಿ ಏನು ಹೇಳಿದೆ ಎಂದು ನೀವು ಮೊದಲು ಕಲಿತುಕೊಳ್ಳಿ. ನಿಮ್ಮ ಕಡೆಯಿಂದ ಕಲಿತುಕೊಳ್ಳಬೇಕಾದ ಅಗತ್ಯ ನಮಗಿಲ್ಲ.

**ಶ್ರೀ ಅರುಣ ಶಹಾಪೂರ(ಶಿಕ್ಷಕರ ಕ್ಷೇತ್ರ):-** ನಿಯಮ ೩೦೩ ರ ಪ್ರಕಾರ ಸದನದಲ್ಲಿ ಉಪಸ್ಥಿತರಿರುವ ಸದಸ್ಯರು ಪಾಲಿಸಬೇಕಾದ ನಿಯಮಾವಳಿಗಳನ್ನು ನೆನಪು ಮಾಡಿಕೊಳ್ಳುವ ಅಗತ್ಯ ಇವತ್ತು ಈ ಸದನದಲ್ಲಿ ಬಂದು ಬಿಟ್ಟಿದೆಯೇ?

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನನಗೆ ಒಂದು ವಿಚಾರವನ್ನು ಸ್ಪಷ್ಟವಾಗಿ ತಿಳಿಸಿ. Rules above ಆಗುತ್ತದೆಯೋ, ಸದನ above ಆಗುತ್ತದೆಯೋ ಅಥವಾ Chairman above ಆಗುತ್ತಾರೆಯೋ ಎಂಬುದನ್ನು ಹೇಳಿ.

**ಸಭಾಪತಿಯವರು:-** ನೀವು ಬಹಳ ದೊಡ್ಡವರು, ಕುಳಿತುಕೊಳ್ಳಿ ಎಂದು ಹೇಳಿದೆ.

**(ಗೊಂದಲ)**

**ಸಭಾಪತಿಯವರು:-** ತಾವು ಬಹಳ ದೊಡ್ಡವರು ಎಂದು ಹೇಳಿದೆ. ದಯವಿಟ್ಟು, ತಾವು ಕುಳಿತುಕೊಳ್ಳುವುದಿಲ್ಲವೇ? ನಾನು ಸರ್ಕಾರವನ್ನು ಕೇಳಬೇಕಾಗುತ್ತದೆ. ನಾನು ಕುಳಿತುಕೊಳ್ಳಿ ಎಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದಾಗ ಗೌರವಯುತವಾಗಿ ಕುಳಿತುಕೊಳ್ಳುವುದಿಲ್ಲವೆಂದರೆ ನಾನು ಏನು ಮಾಡಬೇಕು ಎಂಬುದನ್ನು ನಾನು ಮಾಡುತ್ತೇನೆ. I know that what to do? ಆದರೆ ದಯವಿಟ್ಟು, ಇದನ್ನು ನನ್ನಿಂದ ಮಾಡಿಸಬೇಡಿ. ಕುಳಿತುಕೊಳ್ಳಿ ಎಂದು ಹೇಳಿದಾಗ ಕುಳಿತುಕೊಳ್ಳಬೇಕಾಗುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು ಮಾತನಾಡುತ್ತಾರೆ. ಅವರೇನು ಹೇಳುತ್ತಾರೆ ಎಂಬುದನ್ನು ಕೇಳೋಣ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ತಮ್ಮ ಶಾಸಕರುಗಳನ್ನು ನಿಯಂತ್ರಣ ಮಾಡಬೇಕು. ಅದನ್ನು ಅವರು ಮಾಡದೆ ಬೇರೆ ಯಾರು ಮಾಡಲು ಸಾಧ್ಯ?

**ಸಭಾಪತಿಯವರು:-** ನಿಮಗೂ ಮಾತನಾಡಲು ನಾನು ಅವಕಾಶ ಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 329(2) ರ ಪ್ರಕಾರ *"A point of order may be raised in relation to the business before the council at the moment:*

*Provided that the Chairman may permit a member to raise a point of order during the interval between the termination of the one item of business and the commencement of another,…."*

**ಸಭಾಪತಿಯವರು:-** ಹೌದು. ನಾನು ಅದನ್ನೇ ಹೇಳುತ್ತಿರುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನೀವು ಇದಕ್ಕೆ ಅವಕಾಶವನ್ನು ಕೊಡಲಿಲ್ಲ ಎಂದರೆ ಇದನ್ನು ಹೇಗೆ ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆ. ಅದು ಸರಿಯೋ ಅಥವಾ ತಪ್ಪೋ ಗೊತ್ತಿಲ್ಲ. But, it depends upon the ruling of the Chair.

**ಸಭಾಪತಿಯವರು:-** ಹೌದು. ಸರಿಯಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದು ಸರಿಯೋ ಅಥವಾ ತಪ್ಪೋ ಗೊತ್ತಿಲ್ಲ. ಒಂದು ವೇಳೆ ನಿಯಮ 329 ರ ಪ್ರಕಾರ...

**ಸಭಾಪತಿಯವರು:-** ಅದಕ್ಕೆ ನಾನು raise ಮಾಡುವುದಕ್ಕೆ ಅವರಿಗೆ ಅವಕಾಶ ಕೊಡಲಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಯಮ 329 (2) ರ ಪ್ರಕಾರ ಸಭಾಪತಿಯವರು Point of Order ಗೆ ಅನುಮತಿ ಕೊಟ್ಟರೆ raise ಮಾಡಬೇಕು. ಅವರು ಅನುಮತಿ ಕೊಡಲಿಲ್ಲ ಎಂದರೆ ಅದನ್ನು raise ಮಾಡುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:-** ಅದನ್ನು raise ಮಾಡುವುದಕ್ಕೆ ಬರುವುದಿಲ್ಲ. Raise ಮಾಡಬೇಡಿ ಎಂದು ಹೇಳಿ ನನ್ನ inherent powerನ್ನು ಉಪಯೋಗ ಮಾಡಿ ಕೇಳಿದ್ದೇನೆ. ಈಗ ಸದ್ಯಕ್ಕೆ raise ಮಾಡುವುದಕ್ಕೆ ಕೊಡುವುದಿಲ್ಲ. ಅದನ್ನು ಆಮೇಲೆ ಕೊಡುತ್ತೇನೆ ಎಂದು ಈಗಾಗಲೇ ತಿಳಿಸಿದ್ದೇನೆ. ದಯಮಾಡಿ, ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಮಾತನಾಡುವ ರೀತಿ... ಸಭಾಪತಿಯವರಿಗೆ ಅಗೌರವ ತರುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಅದನ್ನು ಕಲಿಸಿರಿ. ಸದನದಲ್ಲಿ ಇದು ಸರಿಯಾದ ನಡವಳಿಕೆಯಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-**ಮೊದಲು ನೀವು ಅದನ್ನು ಕಲಿತುಕೊಳ್ಳಿ.

**ಸಭಾಪತಿಯವರು:-** ಹೊಸ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

**ಶ್ರೀ. ಪಿ.ಆರ್. ರಮೇಶ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈಗ ಏನು motion move ಮಾಡಿದ್ದಾರೆ, ಮೊದಲನೆಯದಾಗಿ it should be in a public interest. ಎರಡನೆಯದಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇವತ್ತು ಬಹಳ ಸ್ಪಷ್ಟವಾಗಿ ಒಂದು ಆದೇಶವನ್ನು ನೀಡಿದೆ. On that ground ಇವತ್ತು ರಾಜ್ಯ ಸರ್ಕಾರ ಇಲ್ಲಿ ತೆಗೆದುಕೊಂಡಿರುವಂತಹ ಪ್ರಸ್ತಾವನೆ ಎಂದು ನನಗೆ ಅರ್ಥವಾಗುತ್ತದೆ. ದಯವಿಟ್ಟು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಏನಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದನ್ನು ಹೇಳಿ. ಅದರಲ್ಲಿ *"... It will open to the CBI to conduct investigation afresh or in continuation of the investigation already conducted..."* ಎಂದು ಇದೆ.

**(ಗೊಂದಲ)**

**Sri V.S.UGRAPPA:-** That is my Point of Order. That is why I am raising Point of Order.

**ಶ್ರೀ. ಪಿ.ಆರ್. ರಮೇಶ (ನಾಮ ನಿರ್ದೇಶಿತರು):-** ದಯವಿಟ್ಟು, ಇದನ್ನು ನಾನು ಪೂರ್ತಿ ಓದಿ ಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ಹೊಸ ಸದಸ್ಯರು ಮಾತನಾಡುವುದಕ್ಕೆ ನಿಂತಿದ್ದಾರೆ. ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. Allow him to complete.

**(ಗೊಂದಲ)**

**ಸಭಾಪತಿಯವರು:-** ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ. ಎಸ್. ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರಿಗೆ tenability ಬಗ್ಗೆ ತಾವು ತಿಳಿಸಿ ಹೇಳಿ.

**ಸಭಾಪತಿಯವರು:-** ನಾನು ಅದನ್ನು ಹೇಳುತ್ತೇನೆ. I will come to that point.

**(ಗೊಂದಲ)**

**ಶ್ರೀ. ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹೊಸದಾಗಿ ಬಂದಿರುವ ಸದಸ್ಯರು ಮಾತನಾಡುವುದರ ಬಗ್ಗೆ ನಮ್ಮದೇನು ಆಕ್ಷೇಪಣೆ ಇಲ್ಲ. ಆದರೆ merit ಬಗ್ಗೆ ಮಾತನಾಡಬಾರದು. He should talk only about the tenability. ಯಾರೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಲಿ, whether it is tenable or not ಎಂದು ಹೇಳಬೇಕು. Then only he should be allowed to talk. ನೀವು ಮಾತನಾಡಲು ಅವಕಾಶ ಕೊಟ್ಟ ಮೇಲೆ ಅದು ಹೊಸ ಸದಸ್ಯರು ಇರಲಿ ಅಥವಾ ವಿಷಯವನ್ನು ಮಂಡನೆ ಮಾಡಿದವರು ಇರಲಿ ಅದರ merit ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:-** ಆಯಿತು, ಅದನ್ನು ನಾನು ಅವರಿಗೆ ಹೇಳುತ್ತೇನೆ. ಈಗ ಮಾನ್ಯ ರಮೇಶ್‌ರವರು ಮಾತನಾಡುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವು ಯಾವ ವಿಷಯವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಂದಿದ್ದೇವೆಯೋ, ಆ ವಿಷಯವನ್ನೆ ಕೊಲೆ ಮಾಡುವಂತಹ ಪ್ರಯತ್ನ ನಡೆಯುತ್ತಿದೆ. ನಾವು ಇದನ್ನು ಒಪ್ಪುವುದಿಲ್ಲ. ದಯವಿಟ್ಟು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋಡಿ ತಂದಿರುವ ಪ್ರಸ್ತಾವಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ರಮೇಶರವರು ಹೊಸ ಸದಸ್ಯರಾಗಿ ಮೊದಲ ಬಾರಿಗೆ ಮಾತನಾಡುತ್ತಿದ್ದಾರೆ. ಅದಕ್ಕಾಗಿ ಒಂದೆರಡು ನಿಮಿಷ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

**ಶ್ರೀ. ಪಿ.ಆರ್. ರಮೇಶ:-** ನಾವು ಏನು ಹೇಳುತ್ತಿದ್ದೇವೆ ಎಂದರೆ, ಮಾನ್ಯ ಎಸ್.ಆರ್. ಪಾಟೀಲ್‌ರವರು ಯಾರಾದರೂ ಮಾತನಾಡಲಿ, tenability of the motion ಬಗ್ಗೆ ಮಾತ್ರ ಮಾತನಾಡಬೇಕೆಂದು ಹೇಳಿದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮೊದಲು ಮಾತನಾಡುವವರು Point of Order ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್ ಅವರು Point of Order ಎತ್ತಿಲ್ಲ. ಇಲ್ಲ, ನಾನು Point of Order ಬಗ್ಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೇನೆ. ಅವರು ವಿಷಯದ ಬಗ್ಗೆ ಏನೋ ಮಾತನಾಡುತ್ತಾರೆ. No, I have not allowed for it.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು**:- ಮಾನ್ಯ ರಮೇಶ್‌ರವರೆ, ದಯವಿಟ್ಟು, ಒಂದು ನಿಮಿಷ ಕುಳಿತುಕೊಳ್ಳಿ ಆಮೇಲೆ ನಿಮಗೆ ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಈಗ ಮಾನ್ಯ ಪುಟ್ಟಣ್ಣರವರು ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಸದನದ ಸಮಯ ಉಳಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಐದು ಅಥವಾ ಆರು ನಿಮಿಷಕ್ಕೆ ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಅನುಮತಿ ಕೋರುವ ಪ್ರಸ್ತಾವನೆಯನ್ನು ಮುಗಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದು, ಆದರೆ ಇಲ್ಲಿ ಗಮನಿಸಬೇಕಾಗಿರುವ ಅಂಶಗಳಲ್ಲಿ ಮೊದಲನೆಯದಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ವಿಚಾರಣಾ ವರದಿಯನ್ನೇನೂ ಸಲ್ಲಿಸುತ್ತಿಲ್ಲ. ಎರಡನೆಯದಾಗಿ, ಇವರು ಹಿತವಾದ ರೀತಿಯಲ್ಲಿಯೇ ಮಾತನಾಡಬೇಕು ಎಂಬುದು ನಿಯಮದಲ್ಲಿ ಇಲ್ಲ. ಅವರಿಗೆ ಎಲ್ಲರಿಗೂ ಗೊತ್ತಿರುವಂತಹದ್ದು ಹಾಗೂ ಅವರು ಏನು ಹೇಳಿದರೂ ಕೂಡ ಪತ್ರಿಕೆಗಳಲ್ಲಿ ಬಂದಿರುವಂತಹದ್ದನ್ನು ಅಥವಾ ಅವರು ಏನು ಹೇಳಬೇಕೆಂದುಕೊಂಡಿದ್ದಾರೋ ಅದನ್ನು ಅವರಿಗೆ ಗೊತ್ತಿರುವ ಮೂಲಗಳಿಂದ ಈಗಾಗಲೇ ನೋಟಿಸ್ ಕೊಟ್ಟಿರುವ ಬಗ್ಗೆ ಮೂರರಿಂದ ಎಂಟು ನಿಮಿಷಗಳಷ್ಟು ಕಾಲವಕಾಶದಲ್ಲಿ ಹೇಳಿ ಮುಗಿಸುವುದಾಗಿ ತಿಳಿಸಿದ್ದಾರೆ. ದಯವಿಟ್ಟು, ಈ ಸದನದಲ್ಲಿ ನಾವು ಅಭಿಪ್ರಾಯ ವ್ಯಕ್ತಪಡಿಸಿದ್ದೇನು. ಐದರಿಂದ ಎಂಟು ನಿಮಿಷಗಳ ಕಾಲದಲ್ಲಿ ಮುಗಿಸಿ. ಆಮೇಲೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ ಎಂದು ನಾವು ಹೇಳಿದ್ದೆವು. ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆದರೆ ಈ ವೇಳೆಗಾಗಲೇ ಅದು ಮುಗಿದು ಹೋಗುತ್ತಿತ್ತು. ದಯವಿಟ್ಟು, ಚರ್ಚೆಗೆ ಇತಿಶ್ರೀ ಹಾಡಿ, ಅವರಿಗೆ ಮಾತನಾಡುವುದಕ್ಕೆ ಎಂಟು ನಿಮಿಷ ಅವಕಾಶ ಕೊಟ್ಟು ಬಿಡಿ. ಅವರು ಏನು ಹೇಳುತ್ತಾರೋ ನೋಡೋಣ. ಅವರು ಏನು ಹೇಳಿದರೂ ಈಗಾಗಲೇ ಹಿಂದೆ ಪತ್ರಿಕೆಗಳಲ್ಲಿ ಏನು ಹೇಳಿದ್ದಾರೆ ಅದನ್ನು ಬಿಟ್ಟು ಇನ್ನೇನನ್ನು ಹೇಳುವುದಕ್ಕೆ ಬರುವುದಿಲ್ಲ. ಅವರು ಅದನ್ನೇ ಹೇಳುತ್ತರೆ. ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಟ್ಟು ಬಿಡಿ. ಅವರು ಮಾತನಾಡಿ ಮುಗಿಸಲಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ. ಎಸ್. ಆರ್. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಪುಟ್ಟಣ್ಣನವರು ಹೇಳಿದ ಹಾಗೆ ಬೇಕಾದ್ದು ಹೇಳುವುದಕ್ಕೆ ತಾವು ಅವಕಾಶ ಕೊಟ್ಟಿಲ್ಲ. Whether it is tenable or not ಎಂಬುದರ ಬಗ್ಗೆ ಅಷ್ಟೇ ಹೇಳಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾವು ಆಡಳಿತ ಪಕ್ಷದವರಾಗಿ ಬೇಕಾದ್ದನ್ನು ಹೇಳುವುದಕ್ಕೆ ಬಂದಿಲ್ಲ. ಈ ಸರ್ಕಾರ ಮಾಡಿರುವಂತಹ ಅನ್ಯಾಯದ ಬಗ್ಗೆ ನಾವು ಹೇಳುವುದಕ್ಕೆ ಬಂದಿರುವುದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರೇನಾದರೂ ತನಿಖಾ ವರದಿಯನ್ನು ಸಲ್ಲಿಸುತ್ತಿದ್ದಾರೆಯೇ?

**(ಗೊಂದಲ)**

**ಶ್ರೀ. ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಯಾವ ವಿಷಯದ ಬಗ್ಗೆ ಮಾತನಾಡಬೇಕು ಎಂಬುದರ ಬಗ್ಗೆ ನಿರ್ದೇಶನ ಕೊಡಿ.

**(ಗೊಂದಲ)**

**ಸಭಾಪತಿಯವರು:–** ತಾವು ಹೇಳಿರುವುದು ಸರಿಯಿದೆ. ಅವರು ವಿಷಯದ ಬಗ್ಗೆ ಪ್ರಸ್ತಾವನೆ ಮಾಡಿ, ಈ ಕಾರಣಕ್ಕಾಗಿ ಈಗಲೇ ತೆಗೆದುಕೊಳ್ಳಬೇಕು ಎಂದು ತಿಳಿಸಿ ಅವರು ತಮ್ಮ ಮಾತುಗಳನ್ನು ಮುಕ್ತಾಯ ಮಾಡುತ್ತಾರೆ ಎಂದು ಕಾಯುತ್ತಿದ್ದೇನೆ. ಅವರಿಗೆ ಈಗ ಇನ್ನು ಐದು ನಿಮಿಷಗಳಷ್ಟು ಕಾಲಾವಕಾಶವಿದೆ. ಅವರು ಮಾತನಾಡಲಿ.

**(ಗೊಂದಲ)**

**ಶ್ರೀ. ಎಸ್. ಆರ್. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಚರ್ಚೆಯಾಗಬೇಕು ಎಂದು ನೀವು ಒಪ್ಪಿದರೆ, ನೀವು accept ಮಾಡಿದರೆ ಆಮೇಲೆ merit ಮೇಲೆ ಚರ್ಚೆಯಾಗುತ್ತದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು)**:-ಮಾನ್ಯ ಸಭಾಪತಿಯವರೆ, . . .

**ಶ್ರೀ. ಎಸ್. ಆರ್. ಪಾಟೀಲ್**:- ಮಾನ್ಯ ಸಭಾಪತಿಯವರೆ, ಅವರೂ ಹಿರಿಯರಿದ್ದಾರೆ. ನಾನು ಹೇಳಿದ್ದರ ಬಗ್ಗೆ ಏನಾದರೂ ತಪ್ಪಿದೆಯೇ?

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ, ಈಗ ವಿರೋಧ ಪಕ್ಷದ ನಾಯಕರು ಮಾತನಾಡಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಎಂಟು ನಿಮಿಷ ಆಯಿತು ಎಂದು ತಾವು ಘಂಟೆ ಹೊಡೆಯಿರಿ. ನಾವು ಕುಳಿತುಕೊಳ್ಳುತ್ತೇವೆ. ಈಗ ತಮ್ಮ ಮಾತುಗಳನ್ನು ಮುಂದುವರೆಸಲಿ.

**ಸಭಾಪತಿಯವರು**:-ಆಯಿತು. ಅವರು ಮಾತನಾಡುವುದಕ್ಕೆ ಇನ್ನೂ ಐದು ನಿಮಿಷವಿದೆ, ಅಷ್ಟರಲ್ಲಿ ಅವರು ಮಾತನಾಡಿ ಮುಗಿಸಲಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ನಾನು ಇನ್ನು ಮಾತನಾಡುವುದಕ್ಕೆ ಪ್ರಾರಂಭ ಮಾಡಿಲ್ಲ. ಕೇವಲ ಆಡಳಿತ ಪಕ್ಷದವರೇ ಮಾತನಾಡುವುದಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು)** :- ಮಾನ್ಯ ಸಭಾಪತಿಯವರೆ, ನನ್ನ Point of Order ಬಗ್ಗೆ ಹೇಳಿ.

**ಸಭಾಪತಿಯವರು**:- ನಿಮಗೆ ಅವಕಾಶ ಕೊಡುವುದಿಲ್ಲ ಎಂದು ನಾನು ಈಗಾಗಲೇ ಹೇಳಿದ್ದೇನೆ. ದಯವಿಟ್ಟು, ಕುಳಿತುಕೊಳ್ಳಿ. I will not allow to raise the Point of Order now. You can talk about it afterwards.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಹೊರಟ್ಟಿಯವರು ನಿಯಮದ ಬಗ್ಗೆ ಉಲ್ಲೇಖ ಮಾಡಿ ಹೇಳಿದ್ದಾರೆ, ಇದರ ಬಗ್ಗೆ ತಮ್ಮ ಅನುಮತಿ ಬೇಕು. ತಮ್ಮ ಅನುಮತಿ ಇಲ್ಲದೆ ಮಾತನಾಡಬಾರದು ಎಂದು ಅವರು ಈಗಾಗಲೇ ಹೇಳಿದ್ದಾರೆ. ಆದರೆ ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಗ್ರಪ್ಪನವರು ಪುನಃ ಅದರ ಬಗ್ಗೆಯೇ ಮಾತನಾಡಿದರೆ ಹೇಗೆ? ಹಾಗಾದರೆ ರೂಲ್ಸ್ ಬಗ್ಗೆ ಇವರಿಗೆ ಮರ್ಯಾದೆ ಇಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಅವರಿಗೆ ಯಾವುದೇ rule ಇಲ್ಲ. ಆಯಿತು, ನೀವು ಹೇಳಿದ್ದನ್ನು ನಾನು ಈಗಾಗಲೇ ಅವರಿಗೆ ಕೇಳಿದ್ದೇನೆ. ಇನ್ನು ಉಳಿದ ಸಮಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಉಪಯೋಗಿಸಿಕೊಂಡು ಮುಗಿಸಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಮುಂದು...)

(925)-13.11.2017/1.00/ಟಿಸಿಹೆಚ್-ಎಕೆ

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಆಕಸ್ಮಾತ್ ಆಗಿ ದಿವಂಗತ ಎಂ.ಕೆ.ಗಣಪತಿಯವರ ತಂದೆ ಶ್ರೀ ಎಂ.ಕೆ.ಕುಶಾಲಪ್ಪನವರು ಮಾನ್ಯ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸದೇ ಇದ್ದರೆ, ಈಗಾಗಲೇ ಸಿ.ಐ.ಡಿ ಮುಖಾಂತರ ಇದಕ್ಕೆ clean chit ಕೊಟ್ಟು, ಆ ಕೊಲೆ ಪ್ರಕರಣವನ್ನು ಮುಚ್ಚಿ ಹಾಕಲಾಗುತ್ತಿತ್ತು. ಶ್ರೀ ಎಂ.ಕೆ.ಕುಶಾಲಪ್ಪನವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಕ್ಕೋಸ್ಕರ ಸುಪ್ರೀಂ ಕೋರ್ಟ್ ಈ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಲು ದಿನಾಂಕ:14.10.2017ರಲ್ಲಿ ಆದೇಶ ಮಾಡಿದೆ. ಈ ಆದೇಶದಲ್ಲಿ ಸಿ.ಐ.ಡಿ ತನಿಖೆಯ ಬಗ್ಗೆ ಗಂಭೀರವಾದಂತಹ ಲೋಪದೋಷಗಳನ್ನು ಗಮನಿಸಿದ್ದು, ಪ್ರಮುಖವಾಗಿ ಸಿ.ಐ.ಡಿಯವರು ಈ 'ಬಿ' ವರದಿ ಸಲ್ಲಿಸಿದ ನಂತರ 6 ತಿಂಗಳ ತರುವಾಯ F.S.L (Forensic Science Laboratory) ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಅಂದರೆ, ಏಪ್ರಿಲ್ 2017ರಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುವುದನ್ನು ವಿಶೇಷವಾಗಿ ಉಲ್ಲೇಖ ಮಾಡಿದ್ದಾರೆ. ಇದು ಇನ್ನೂ ವರದಿ ಬರುವುದಕ್ಕೆ ಮುಂಚೆಯೇ ಇವರು clean chit ಕೊಟ್ಟಿದ್ದಾರೆ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದು ದಯವಿಟ್ಟು ಗಮನಿಸಿ. ಇದರಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ಗಮನಿಸಬೇಕಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಇವರು ಸುಳ್ಳ ಹೇಳುವುದಕ್ಕೆ ಹೊರಟಿದ್ದಾರೆ. ಸುಪ್ರೀಂ ಕೋರ್ಟ್‌ನ ತೀರ್ಪನ್ನು ವಿಶೇಷವಾಗಿ ಗಮನಿಸಿ ನೋಡಿ, ಇದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾದರೂ averments ಇದ್ದರೆ, ನಾನು ಈ ಸದನದ ಸದಸ್ಯನಾಗಿರುವುದಿಲ್ಲ. ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟು ಹೋಗುತ್ತೇನೆ. ಅವರು ಏತಕ್ಕೆ ಸದನಕ್ಕೆ ಸುಳ್ಳನ್ನು ಹೇಳುತ್ತಿದ್ದಾರೆ. ಇವರೊಬ್ಬರು ವಿರೋಧಪಕ್ಷದ ನಾಯಕನಾಗಿ ಈ ರೀತಿ ಸುಳ್ಳು submissions ಮಾಡುವುದಕ್ಕೆ ನಾಚಿಕೆ ಆಗುವುದಿಲ್ಲವೇ? ಇದರ ಅರ್ಥ ಏನು? ಏನು ತಾವು ಬಾಯಿಗೆ ಬಂದಂತೆ ಮಾತನಾಡುತ್ತಿದ್ದೀರಿ.

(ಗೊಂದಲ)

**Sri K.R. RAMESH KUMAR:** The Supreme Court has never said about it. What is this?

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಇವರು ಏನು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ನಾನು ಅವರಿಗೆ ಹೇಳುತ್ತೇನೆ, ಮಾನ್ಯ ಐವನ್ ಡಿ’ಸೋಜರವರೆ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಈಗ ಅವರು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದಾರೆ. ಗೌರವಾನ್ವಿತ ಯಾವುದೇ ಸದಸ್ಯರು ಮಾತನಾಡುವಾಗ ಯಾವುದಾದರೂ ತಪ್ಪು ಮಾಹಿತಿ ಕೊಟ್ಟರೆ ಅಥವಾ ಆ ಮಾಹಿತಿಯನ್ನು ಎತ್ತಿ ತೋರಿಸಿದರೆ ಅದನ್ನು ಕಡತದಿಂದ ತೆಗೆದು ಹಾಕುವಂಥ ಅಧಿಕಾರ ನನಗಿದೆ. ಆದರೆ ಮಾತನಾಡುವಾಗಲೇ ಮಧ್ಯೆ ಬಾಯಿ ಹಾಕಿದರೆ ಏನೆಂದು ಅರ್ಥವಾಗುವುದಿಲ್ಲ. I cannot take a spontaneous decision. ಅದಕ್ಕೆ ಅವರು ಏನೇನು ತಪ್ಪು ಮಾತನಾಡಿದ್ದಾರೆಂದು ಆ ಕುರಿತು ಒಂದು ನೋಟಿಸ್‌ನ್ನು ಕೊಡಿ. (ಗೊಂದಲ) ಮಾತನಾಡಬಾರದ್ದನ್ನು ಮಾತನಾಡಿದ್ದರೆ ತಾವು ಕೊಡಿ, ಅದನ್ನು ನಾನು ನೋಡುತ್ತೇನೆ. I will consider it.

**ಶ್ರೀ ಕೆ.ಎಸ್.ಈಶ್ವರಪ್ಪ:-** ದಿನಾಂಕ:24.08.2017ರಂದು ವಿಜಯವಾಣಿ ಪತ್ರಿಕೆಯಲ್ಲಿ "ಮೊಬೈಲ್, ಕಂಪ್ಯೂಟರ್ ಸಾಕ್ಷಿಗಳ ನಾಶ" ಎಂದು ವಿವರವಾದ ವರದಿ ಕೊಟ್ಟಿದ್ದಾರೆ. ಈ ವರದಿ ಉಲ್ಲೇಖದಂತೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಹಿತಿ ಸಾಕ್ಷ್ಯ ನಾಶವಾಗಿದೆ ಮತ್ತು ಪೆನ್ ಡ್ರೈವ್ ಸಹ ನಾಪತ್ತೆಯಾಗಿದೆ. ಈ ಪೆನ್ ಡ್ರೈವ್ ಬಗ್ಗೆ ವಿಡಿಯೋದಲ್ಲಿ ದಿವಂಗತ ಎಂ.ಕೆ. ಗಣಪತಿಯವರು ಸಹ ಹೇಳಿದ್ದಾರೆ. ಇವರು ಏನು ಮಾಡಿದ್ದಾರೆಂದರೆ, ಅದನ್ನು ದಿನಾಂಕ:03.08.2016ರಲ್ಲಿ ಸಿ.ಐ.ಡಿಗೆ ಕೊಟ್ಟು, ಈ ಪ್ರಕರಣ ತ್ವರಿತವಾಗಿ ತನಿಖೆ ಆಗಬೇಕೆಂದು ಹೇಳುತ್ತಾರೆ. ದಿನಾಂಕ:17.09.2016ರಲ್ಲಿ 6 ವಾರದಲ್ಲಿ 'ಬಿ' ವರದಿ ತೆಗೆದುಕೊಂಡು ಅದಕ್ಕೆ clean chit ಕೊಡುತ್ತಾರೆ. ಪ್ರಪಂಚದ ಇತಿಹಾಸದಲ್ಲಿ ಈ ರೀತಿ ಆಗಿದೆಯೇ? ಇವರು ಸಿ.ಐ.ಡಿಗೆ ಕೊಟ್ಟಿದ್ದ ದಿನವೇ ಮಾನ್ಯ ಜಾರ್ಜ್‌ರವರು ರಾಜೀನಾಮೆಯನ್ನು ಕೊಡುತ್ತಾರೆ ಸಂತೋಷ. ನಂತರ ಈ ಪ್ರಕಣದ ತನಿಖೆ ಮಾಡಿಸಿ Clean chit ತರಿಸಿಕೊಳ್ಳುತ್ತಾರೆ. ಅವರನ್ನು ಒಂದೂವರೆ ತಿಂಗಳಿನಲ್ಲಿಯೇ ಪುನಃ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುತ್ತಾರೆ. ಆದರೆ ಸಿ.ಬಿ.ಐ.ನವರು ಇವರ ಮೇಲೆ ಎಫ್.ಐ.ಆರ್ ಹಾಕುತ್ತಾರಲ್ಲಾ ಆಗ ಇವರು ರಾಜೀನಾಮೆಯನ್ನು ಕೊಡುವುದಿಲ್ಲ. ಸಿ.ಐ.ಡಿ ತನಿಖೆಗೆ ಕೊಟ್ಟಾಗ ರಾಜೀನಾಮೆ ಕೊಟ್ಟಿದ್ದರು. ಆದರೆ ಸಿ.ಬಿ.ಐ ತನಿಖೆಗೆ ಕೊಟ್ಟರೆ ರಾಜೀನಾಮೆ ಕೊಡುವುದಿಲ್ಲ. ಇದು ಯಾವ ನ್ಯಾಯ? (ಗೊಂದಲ) ನಾನು ಇರುವ ವಿಚಾರವನ್ನು ಸದನದ ಮುಂದೆ ಹೇಳುತ್ತಿದ್ದೇನೆ.

(ಗೊಂದಲ)

**ಸಭಾಪತಿಯವರು:-** ಏನು ಮಾಡಬೇಕು ಹೇಳಿ?

**ಶ್ರೀ ಎಸ್.ಆರ್.ಪಾಟೀಲ್:-** ಇವರು ವ್ಯತಿರಿಕ್ತವಾಗಿ ಹೇಳುತ್ತಿದ್ದಾರೆ. It should not go on record. You should not allow it.

**ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, tenability of the motion ಬಗ್ಗೆ ಅಷ್ಟು ಮಾತ್ರ ಮಾತನಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, “...without expressing any opinion on merits...” ಇದನ್ನು ಮಾನ್ಯ ಸುಪ್ರೀಂಕೋರ್ಟ್ ಹೇಳಿದೆ. ಮತ್ತೆ ಅದಕ್ಕೆ ವ್ಯತಿರಿಕ್ತವಾಗಿ ಇವರು ಹೇಳುತ್ತಿರುವುದನ್ನು ನೀವು allow ಮಾಡಿದರೆ ಹೇಗೆ?

(ಗೊಂದಲ)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ನಾನು ಅದನ್ನು ಹೇಳಿಲ್ಲ (ಗೊಂದಲ) ವಿಜಯವಾಣಿ ಪತ್ರಿಕೆಯಲ್ಲಿ ಸತ್ಯ ಬರೆದಿರುವುದನ್ನು ಓದಿದರೆ ತಮಗೆ ಏತಕ್ಕೆ ಸಿಟ್ಟು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶವನ್ನು ಇವರು ವ್ಯತಿರಿಕ್ತವಾಗಿ ಹೇಳುತ್ತಿದ್ದಾರೆ. It is going on record. You should not allow it.

(ಗೊಂದಲ)

**ಸಭಾಪತಿಯವರು:-** ಈಗ ನಿಮಗೆ ಏನಾಗಬೇಕಿದೆ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರು ಸಾಕ್ಷ್ಯವನ್ನು ನಾಶಪಡಿಸಿದ್ದಾರೆಂದು ವಿಶೇಷ ವರದಿಯನ್ನು ಕೊಟ್ಟಿದ್ದಾರೆ, ಅದನ್ನು ಓದಿದರೆ ಇವರಿಗೇಕೆ ಸಿಟ್ಟು. ಇದು ನನಗಂತೂ ಅರ್ಥವಾಗುತ್ತಿಲ್ಲ. ಗೋಪಾಲನ್ ಕಮಿಟಿಯಿಂದ ಸಾಕ್ಷ್ಯಗಳ ನಾಶವೆಂದು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ದಿನಾಂಕ:24.08.2017 ವರದಿಯಲ್ಲಿ ಮಾಹಿತಿ ಸಾಕ್ಷ್ಯ ನಾಶವಾಗಿದೆ. ಪೆನ್ ಡ್ರೈವ್ ನಾಶವಾಗಿದೆ ಎಂದು ಹೇಳಿದೆ. ಸತ್ಯ ಹೇಳಿದರೆ ತಮಗೇಕೆ ಸಿಟ್ಟು.

(ಗೊಂದಲ)

**ಸಭಾಪತಿಯವರು:-** ಅದಕ್ಕೆ ಏನು ಮಾಡಬೇಕು. (ಗೊಂದಲ) ಆಯಿತು, ಇನ್ನು ಎರಡು ನಿಮಿಷ ಸಮಯ ಬಾಕಿ ಇದೆ, ಅವರನ್ನು ಮಾತನಾಡಲು ಬಿಡಿ.

**ಶ್ರೀ ಎಂ.ಆರ್.ಸೀತಾರಾಂ:-** ಇವರು tenability of the motion details ಬಗ್ಗೆ ಮಾತನಾಡಲಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ವಿಜಯವಾಣಿ ಪತ್ರಿಕೆಯವರು ತಪ್ಪಾಗಿ ಬರೆದಿದ್ದರೆ ಅವರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸಬಹುದಲ್ಲವೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:–** ಅದಕ್ಕೆ ಏನು ಆಗಬೇಕು.

(ಗೊಂದಲ)

**ಶ್ರೀ ಎಚ್.ಎಂ.ರೇವಣ್ಣ (ಸಾರಿಗೆ ಸಚಿವರು):–** ಆಗ report ಮಾಡಿದ್ದು ಬೇರೆ ಆಯಿತು.

(ಗೊಂದಲ)

**ಸಭಾಪತಿಯವರು:–** ಅವರು ಮಾತನಾಡಲು ಇನ್ನೂ ಎರಡು ನಿಮಿಷಗಳ ಬಾಕಿ ಇದೆ, ಅವರು ಮಾತನಾಡಲಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಿಮ್ಮಂತಹವರೇ ಹೀಗಾದರೆ ಹೇಗೆ? ತಾವು ಹಾಳಾಗಿ ಹೋಗುವುದು ಬೇಡ. ನೀವಂತೂ ಆ ಮಟ್ಟಕ್ಕೆ ಹೋಗಬೇಡಿ. ನಾನು ನಿಮಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ ದಯವಿಟ್ಟು ಕುಳಿತುಕೊಳ್ಳಿ. ತಾವು ಬಹಳ ಹಿರಿಯವರು ಇದ್ದೀರಿ ನಾನು ನಿಮಗೆ ಗೌರವ ಕೊಡುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೆ, ಇವರು tenability of the motion ಬಗ್ಗೆ ಮಾತನಾಡಲು ನಮಗೇನು ಅಭ್ಯಂತರವಿಲ್ಲ, ಅಷ್ಟಕ್ಕೆ ಮಾತ್ರ ಮಾತನಾಡಲಿ.

**ಸಭಾಪತಿಯವರು:–** ಅವರಿಗೆ ಈಗ ಏನು ಮಾಡಬೇಕು ಹೇಳಿ.

**ಶ್ರೀ ಎಂ.ಆರ್.ಸೀತಾರಾಂ:–** ಸುಮ್ಮನೆ details ಎಲ್ಲಾ ಮಾತನಾಡುವ ಅವಶ್ಯಕತೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಏನು ಮಾಡುವುದು ಬೇಡ. ಈಗ ಇವರು ಅವರು ಕೊಲೆ ಮಾಡಿಕೊಂಡು ಇರಲಿ. ದೇವರು ಅವರಿಗೆ ಚೆನ್ನಾಗಿ ಇಟ್ಟಿರಲಿ ಎಂದು ಹೇಳಿಕೊಂಡು ಹೋಗಬೇಕಾಗುತ್ತದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಇವರು ಬರಿ ಅದರ ಬಗ್ಗೆ ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಏನು ಆಗಬೇಕೆಂದು ಸದನದಲ್ಲಿ ಹೇಳಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ದಯಮಾಡಿ ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ.

**ಸಭಾಪತಿಯವರು:-** ನಾನು ಅದನ್ನು ನೋಡಿ ಪರಿಶೀಲಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಆದರೆ ಒಂದೇ ಒಂದು ವಾಕ್ಯವನ್ನು ತಮ್ಮ ಗಮನಕ್ಕೆ ಹೇಳುತ್ತೇನೆ. Para 8 of page 4 of the Supreme Court Order ರಲ್ಲಿ ಏನು ಹೇಳುತ್ತದೆ ಎಂದರೆ,....

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆಂದು ಹೇಳಿದೆನಲ್ಲಾ. I will remove that if it is wrong.

**Sri V.S. UGRAPPA:** I will read only one sentence, please.

**ಸಭಾಪತಿಯವರು:-** ಅದನ್ನು ನೋಡುತ್ತೇನೆ ಕೊಡಿ. I cannot remember. I cannot note it down. I have to look into it.

**Sri V.S. UGRAPPA:** Para 8 of page 4 of the Supreme Court order reads as follows:-

> "Having considered the entirety of the material before this Court but without expressing any opinion on merits, we direct that investigation be handed over to the CBI."

ಹಾಗಾಗಿ, ಮಾನ್ಯ ಸುಪ್ರೀಂ ಕೋರ್ಟ್ ಯಾವುದೇ ಹಂತದಲ್ಲಿ ಮೆರಿಟ್ಸ್ ಮೇಲೆ ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ಆ ರೀತಿ ಇರಬೇಕಾದರೆ, ಛೀಮಾರಿ ಹಾಕಿದ್ದಾರೆಂದು ಕಡತಕ್ಕೆ ಹೋಗುವುದು ಸರಿಯೇ? ಅವರು ಅದನ್ನು ಓದಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಛೀಮಾರಿ ಹಾಕಿದ್ದಾರೆಂದು ಹೇಳಲಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):-** ಅವರು ಛೀಮಾರಿ ಹಾಕಿದ್ದಾರೆಂದು ಹೇಗೆ ಹೇಳುತ್ತಿದ್ದಾರೆ.

(ಗೊಂದಲ)

ಸಭಾಪತಿಯವರು:- ಮಾನ್ಯ ಸದಸ್ಯರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ.

**Capt. GANESH KARNIK:** Now I will quote from para 2 of the Supreme Court judgment which is as follows:-

> "...Accordingly, FIR No.89/2016 dated 19th July, 2016 was registered and after investigation 'B' Final Report was filed before the Court on 17th September, 2016. However, the FSL report was filed in Court only in April, 2017."

ಇದನ್ನು ಮಾನ್ಯ ಸುಪ್ರೀಂಕೋರ್ಟ್ ಹೇಳುತ್ತಿರುವಂಥದ್ದು.

**Sri IVAN D'SOUZA:** You read para 8. What does it say?

(ಗೊಂದಲ)

**Sri V.S. UGRAPPA:** The operative portion of the order is binding on each and everyone.

(Interruptions)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಒಂದು ನಿಮಿಷ, ಮಾನ್ಯ ಐವನ್ ಡಿ'ಸೋಜರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**Sri IVAN D'SOUZA:** You read para 8. What does para 8 say? Para 8 of the Supreme Court order says,

> "Having considered the entirety of the material before this Court but without expressing any opinion on merits, we direct that investigation be handed over to the CBI."

ಅವರು ಏತಕ್ಕೆ ಕೊಲೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. How can they say like that?

**ಸಭಾಪತಿಯವರು:-** ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜರವರೆ, ನಾನು ಹೇಳುವ ಒಂದು ಮಾತನ್ನು ಕೇಳಿ.

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೆ, ಆಯಿತು.

**ಸಭಾಪತಿಯವರು:-** ಗೊತ್ತಿಲ್ಲದಂತೆ you are falling into the trap. ನಾನೇನು ಹೇಳಿದೆ ಎಂದರೆ, ಚರ್ಚೆ ಬೇಡ. ಏತಕ್ಕೆ ಬೇಕು ಎನ್ನುವುದನ್ನು ಅವರು ಹೇಳಲಿ. ನೀವು ಸಭಾನಾಯಕರಾಗಿ ಪದೇ ಪದೇ ಹೇಳಿದಿರಿ tenability of the motion ಬಗ್ಗೆ ಅವರು ಪ್ರಸ್ತಾಪ ಮಾಡಲಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ ಅಥವಾ ಬೇಡ ಎನ್ನುವುದಾದರೆ, ಆಮೇಲೆ ಚರ್ಚೆ ಮಾಡೋಣ. You are falling into the trap and discussing each and every word. ಅವರು ಏನು ಹೇಳಿದ್ದಾರೆಂದು ಬರೆದುಕೊಳ್ಳಿ. ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಸುಳ್ಳು ಹೇಳಿದ್ದಾರೆ ಮತ್ತು ತಪ್ಪು ಹೇಳಿದ್ದಾರೆಂದು ಹೇಳುವಂಥ ಅಧಿಕಾರ ನಿಮಗೆ ಇದ್ದೇ ಇದೆ. Don't fall into the trap.

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ತಾವು ಅವರಿಗೆ tenability of the motion ಬಗ್ಗೆ ಮಾತ್ರ direction ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಅವರು ಮಾತನಾಡಿ ಮುಗಿಸುತ್ತಾರೆ. ಆ ಕುರಿತು ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾ ನಾಯಕರ ಮುಖಾಂತರ ನಾನು ಒಂದು ಪ್ರಾರ್ಥನೆ ಮಾಡುತ್ತೇನೆ. ಈ ಪ್ರಕರಣವು ಇಡೀ ರಾಜ್ಯದಲ್ಲಿ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ, ದಿವಂತ ಎಂ.ಕೆ. ಗಣಪತಿರವರ ಪ್ರಕರಣವನ್ನು ವೈದ್ಯರುಗಳೆಲ್ಲಾ ಮುಚ್ಚಿ ಹಾಕಿದ್ದಾರೆ. ಅವರು ಯಾವತ್ತು ಸತ್ತರೋ ಅದಕ್ಕೆ ಮುಂಚೆಯೇ ಇದೆಲ್ಲಾ ಸಮಸ್ಯೆಗಳು ಬಂದ ನಂತರ, ಮಾನ್ಯ ಮುಖ್ಯ ಮಂತ್ರಿಗಳು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ನಾವು ಅದನ್ನು ಆಗಲೇ ಸಿ.ಬಿ.ಐಗೆ ಕೊಡಿ ಎಂದು ಬಹಳ ಒತ್ತಾಯ ಮಾಡಿದೆವು. ಆದರೆ ಅವರು ಸಿ.ಬಿ.ಐ.ಗೆ ಕೊಡಲಿಲ್ಲ. ಅದರ ಬದಲಿಗೆ ಸಿ.ಐ.ಡಿ ತನಿಖೆಗೆ ಕೊಟ್ಟರು. ಅವರು ಸಿ.ಐ.ಡಿ.ಗೆ ಕೊಟ್ಟಿದ್ದಕ್ಕೆ ನಾನು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಜಾರ್ಜ್‌ರವರಿಂದ ರಾಜೀನಾಮೆಯನ್ನು ತೆಗೆದುಕೊಂಡಿರಿ.

**ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಯವರೆ, ಅವರು ನನ್ನ ಹೆಸರನ್ನು ಉಲ್ಲೇಖ ಮಾಡಿದ್ದಾರೆ. ಈ ಪ್ರಕರಣದ ತನಿಖೆಯನ್ನು ಸಿ.ಐ.ಡಿಗೆ ರಾಜ್ಯ ಸರ್ಕಾರದಿಂದ ಕೊಟ್ಟಾಗ, ನನ್ನ ರಾಜೀನಾಮೆಯನ್ನು ಯಾರೂ ಕೇಳಲಿಲ್ಲ. ನಾನು ರಾಜಿನಾಮೆ ಕೊಡಲೂ ಇಲ್ಲ. ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ Private Complaint ಕೊಟ್ಟಾಗ, ಮ್ಯಾಜಿಸ್ಟ್ರೇಟ್ ಕೋರ್ಟ್‌ನವರು ಎಫ್.ಐ.ಆರ್ ಮಾಡಿಕೊಟ್ಟಾಗ, ನಾನು voluntary ಆಗಿ ಇದೇ ಸದನ ಮತ್ತು ವಿಧಾನ ಸಭೆಗೆ ಮತ್ತು ಪತ್ರಿಕೆಗೆ ಹೇಳಿ ರಾಜೀನಾಮೆ ಕೊಟ್ಟಿದ್ದೇನೆಯೇ ಹೊರತು, ಯಾರೂ ನನಗೆ ರಾಜೀನಾಮೆ ಕೊಡಿ ಎಂದು ಕೇಳಿರುವುದಿಲ್ಲ.

**Sri K.S. ESHWARAPPA:** Very good, fine. ತುಂಬಾ ಸಂತೋಷ. ನಾನು ಮೆಚ್ಚುತ್ತೇನೆ. ಬಹಳ ಪ್ರಾಮಾಣಿಕವಾಗಿ ಅಲ್ಲಿ ಎಫ್‌ಐಆರ್ ಹಾಕಿದ ತಕ್ಷಣ ಇವರೇ ಸ್ವತಃ ಹೋಗಿ ರಾಜೀನಾಮೆಯನ್ನು ಕೊಟ್ಟಿದ್ದಕ್ಕೆ ನಾನು ಇವರನ್ನು appreciate ಮಾಡುತ್ತೇನೆ. ಈಗ ಸಿ.ಬಿ.ಐ.ನವರು ಎಫ್.ಐ.ಆರ್ ಹಾಕಿದಾಗ ಆ ಪ್ರಾಮಾಣಿಕತೆ ಎಲ್ಲಿ ಹೋಯಿತು. ಈಗ ಏತಕ್ಕೆ ರಾಜೀನಾಮೆ ಕೊಡುವುದಿಲ್ಲ. (ಗೊಂದಲ) ನೀವೇ ಹೇಳಿದಂತೆ, ಮ್ಯಾಜಿಸ್ಟ್ರೇಟ್ ಕೋರ್ಟ್‌ನವರು ಹಾಕಿದ ಎಫ್‌ಐಆರ್‌ಗೆ ರಾಜೀನಾಮೆ ಕೊಡುತ್ತೀರಿ. ಈಗ ಸಿ.ಬಿ.ಐನವರು ಹೇಳಿದ್ದಕ್ಕೆ ಉತ್ತರ ಕೊಡಬೇಕು ಅಲ್ಲವೇ? ಇವರು ಆ ಎಫ್.ಐ.ಆರ್‌ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜೀನಾಮೆ ಕೊಟ್ಟವರು, ಇವರು ಪ್ರಾಮಾಣಿಕರಾಗಿದ್ದರೆ, ಸತ್ಯಹರಿಶ್ಚಂದ್ರರಾಗಿದ್ದರೆ ಇಲ್ಲಿಯವರೆಗೂ ರಾಜೀನಾಮೆಯನ್ನು ಏಕೆ ಕೊಡಲಿಲ್ಲ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದು ಖಂಡಿತವಾಗಿಯೂ ಒಳ್ಳೆಯದಲ್ಲ. ನೀವು ಕೊಲೆಗಾರರನ್ನು ರಕ್ಷಣೆ ಮಾಡಲು ಹೋಗಬೇಡಿ.

(ಗೊಂದಲ)

**Sri K.R. RAMESH KUMAR:** Don't speak such words.

**(ಮುಂದು...)**

<u>(926)13.11.2017/1.10/**MM/AK**</u>

**ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):-** ಮಾನ್ಯ ಸಭಾಪತಿಯವರೆ, ಯಾರು [xxx] ?

**(ಗೊಂದಲ)**

**ಸಭಾನಾಯಕರು:-** ಮಾನ್ಯ ಸಭಾಪತಿಯವರೆ, ಇವರಿಗೆ ನಿರ್ದೇಶನ ಕೊಡಿ. ವಿರೋಧ ಪಕ್ಷದವರು ವಿಷಯವನ್ನು ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ರೀತಿ [xxx] ರಕ್ಷಣೆ ಕೊಡುತ್ತಿರುವ ಸರ್ಕಾರದ ವಿರುದ್ಧ ಪ್ರತಿಭಟಿಸಲು ಧರಣಿ ಕುಳಿತುಕೊಳ್ಳುತ್ತೇವೆ.

(ಗೊಂದಲ)

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ಕುಳಿತರು)**

(ಮಾನ್ಯ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರನ್ನು ಸಂಪುಟದಿಂದ ವಜಾಗೊಳಿಸಬೇಕು ಎನ್ನುವ ಕರಪತ್ರಗಳನ್ನು ಹಿಡಿದು ಆಡಳಿತ ಪಕ್ಷಕ್ಕೆ ನಾಚಿಕೆಯಾಗಬೇಕೆಂದು ಘೋಷಣೆ ಕೂಗಿದರು)

**(ಗೊಂದಲ)**

(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು shame, shame ಎಂದು ಘೋಷಣೆ ಕೂಗಿದರು)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ದಯಮಾಡಿ ಬಿ.ಜೆ.ಪಿ.ಯ ಗೌರವಾನ್ವಿತ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನವನ್ನು ನಡೆಸಲು ಅನುವು ಮಾಡಿಕೊಡಿ. ಚರ್ಚೆ ಮಾಡೋಣ, ವಿಷಯ ಮಂಡನೆ ಮಾಡಿ, ವಾದ ವಿವಾದಗಳಾಗಲಿ, ಚರ್ಚೆಗಳಾಗಲಿ, ಪ್ರಶ್ನೆಗಳಿಗೆ ಉತ್ತರಗಳು ಸಿಗಲಿ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡುವುದಕ್ಕಾಗಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಕುಳಿತುಕೊಂಡು ಸಹಕರಿಸಿ. ಧರಣಿನಿರತರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನವನ್ನು ನಡೆಸಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ,

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ(ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ಕ್ಷಮೆ ಕೇಳಬೇಕು.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಬಾಂಬೆ ಕರ್ನಾಟಕದಲ್ಲಿ ಈ ಭಾಗದ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ನಡೆಸುವ 10 ದಿನಗಳ ಅಧಿವೇಶನವಾಗಿದೆ.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೆ, ತಾವು ಐದು ನಿಮಿಷಗಳ ಕಾಲ ಮಾತನಾಡುತ್ತಾರೆಂದು ಹೇಳಿದಿರಿ.

**ಸಭಾಪತಿಯವರು:-** ಅವರು ಬಿಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ:-** ಆದರೆ ಇವರು ಅಡ್ವಾನ್ಸ್ ಆಗಿ ಕರಪತ್ರಗಳನ್ನು ಪ್ರಿಂಟ್ ಮಾಡಿಕೊಂಡು ಸದನ ನಡೆಯಲೇಬಾರದೆಂಬ ಮನಸ್ಥಿತಿಯಲ್ಲಿ ಬಂದರೆ, ಇದು ಏಕೆ ಬೇಕು? ಇಷ್ಟು ಹಣವನ್ನು ಏಕೆ ಪೋಲು ಮಾಡಬೇಕು? ಸಮಯವನ್ನೇಕೆ ಹಾಳು ಮಾಡಬೇಕು? ಈ ಸದನಕ್ಕೆ ಒಂದು ವೈಶಿಷ್ಟ್ಯ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಈ ಭಾಷಣವನ್ನು ಕೇಳುವುದಕ್ಕೆ ಬಂದಿಲ್ಲ.

(ಗೊಂದಲ)

**ಶ್ರೀ ಸಿ.ಎಂ. ಇಬ್ರಾಹಿಂ:-** ನಾನು ಈ ಸದನದಲ್ಲಿಯೇ ಅತ್ಯಂತ ಹಿರಿಯ ಸದಸ್ಯನಾಗಿದ್ದೇನೆ. ಈ ಸದನಕ್ಕೆ 1979ನೇ ಇಸವಿಯಿಂದ ಬರುತ್ತಿದ್ದೇನೆ. ದಯವಿಟ್ಟು ಇವತ್ತು ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ಹಲವಾರು ಸಮಸ್ಯೆಗಳಿವೆ. ಆದ್ದರಿಂದ ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ, ಇದನ್ನು ಬೆಂಗಳೂರಿನಲ್ಲಿ ಬೇಕಾದರೆ ಚರ್ಚೆ ಮಾಡಿ. ದಯವಿಟ್ಟು ಎದ್ದು ಹೋಗಿ. ಈ ಭಾಗದ ಜನರಿಗೆ ಅನ್ಯಾಯ ಮಾಡಬೇಡಿ, ಮೋಸ ಮಾಡಬೇಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ಭಾಗದ ಜನರ ಸಮಸ್ಯೆಗಳನ್ನು ಚರ್ಚೆ ಮಾಡುತ್ತೇವೆ. ಆದರೆ ಈ ಸರ್ಕಾರ [xxx] ಸರ್ಕಾರವಾಗಿರುವುದರಿಂದ . . .

(ಗೊಂದಲ)

**ಶ್ರೀ ಸಿ.ಎಂ. ಇಬ್ರಾಹಿಂ:-** ಇವತ್ತು ಇಲ್ಲಿ 10 ದಿವಸಗಳ ಕಾಲ ಚರ್ಚೆಯಾಗಬೇಕಾಗಿದೆ. ಇದು ಕಿತ್ತೂರು ರಾಣಿ ಚನ್ನಮ್ಮನ ನಾಡು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ನಿಮ್ಮ ಬುದ್ಧಿವಾದ ನಮಗೆ ಬೇಕಾಗಿಲ್ಲ . . . ಉತ್ತರ ಕರ್ನಾಟಕದ ಜನರ ಸಮಸ್ಯೆಗಳನ್ನು ಚರ್ಚೆ ಮಾಡಿಯೇ ಮಾಡುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೆ, ಈ ನಾಡಿನ ಜನತೆಗೆ ತಾವು ಅವಮಾನ ಮಾಡುತ್ತಿದ್ದೀರಿ. ನಿಮಗೆ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ದಯವಿಟ್ಟು ಇದು ಪ್ರಮುಖವಾದ ವಿಷಯವಲ್ಲ. ನಿಮಗೆ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ವಿರೋಧಪಕ್ಷದವರಿಗೆ ಹೇಳಿ ಪ್ರಿಂಟ್ ಮಾಡಿರುವುದನ್ನು ಕೈಯಲ್ಲಿ ಹಿಡಿದುಕೊಂಡು ದೂರದರ್ಶನಕ್ಕೆ ತೋರಿಸಿದರೆ ಇದರಿಂದ ರಾಜಕೀಯ ಲಾಭವಾಗುವುದಿಲ್ಲ. ಇದರಿಂದ ಉತ್ತರ ಕರ್ನಾಟಕದ ಜನರು ಶಾಪ ಹಾಕುತ್ತಾರೆ.

(ಗೊಂದಲ)

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಈ ವಿಷಯ ಬೆಳಗಾವಿಯಲ್ಲಿ ಬೇಡ. ಕೂಡಲೇ ವಿರೋಧಪಕ್ಷದವರು ಅವರವರ ಸ್ಥಾನಗಳಿಗೆ ತೆರಳಲು ಆದೇಶ ಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರು ಹೇಳುವುದು ಭಗವದ್ಗೀತೆ, ತಿನ್ನುವುದು ಬದನೆಕಾಯಿಯ ರೀತಿ ಇದೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೆ, ಇಲ್ಲಿ ಅಧಿವೇಶನ ನಡೆಸಲು ಸುಮಾರು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧಪಕ್ಷದ ಬಿ.ಜೆ.ಪಿ ಯ ಸದಸ್ಯರುಗಳು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ದಿನ ಸೋಮವಾರ ಬೆಳಗ್ಗೆ 11 ಗಂಟೆಗೆ ಸದನವನ್ನು ಪ್ರಾರಂಭ ಮಾಡಲಾಗಿದೆ. ಸದನವು ಒಳ್ಳೆಯ ಘಳಿಗೆಯಲ್ಲಿ ಪ್ರಾರಂಭವಾಗಿರುವಂತೆ ಕಾಣುತ್ತಿಲ್ಲ. ಎಲ್ಲಾ ಸದಸ್ಯರೂ ಸಮಾಧಾನವಾಗಲಿ ಮತ್ತು ವಾತಾವರಣವು ಸ್ವಲ್ಪ ತಿಳಿಯಾಗಲೆಂಬ ಕಾರಣಕ್ಕಾಗಿ ಭೋಜನಕ್ಕಾಗಿ ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 3.00 ಗಂಟೆಗೆ ಸೇರಲು ತೀರ್ಮಾನಿಸಿತು)**

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(927)13.11.2017/3.20/**CS/VK**

**(ಭೋಜನ ವಿರಾಮಕ್ಕಾಗಿ ಸದನವನ್ನು 1 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮಧ್ಯಾಹ್ನ 3 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಿತು.)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**(ಸದನವು ಪ್ರಾರಂಭವಾದಾಗ ಭಾರತೀಯ ಜನತಾ ಪಕ್ಷದ ಎಲ್ಲಾ ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿದ್ದರು.)**

**ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಮುಂದುವರೆದ ಚರ್ಚೆ**

**ವಿಷಯ: ಶ್ರೀ ಎಂ.ಕೆ.ಗಣಪತಿ, ಡಿವೈಎಸ್‌ಪಿ ರವರ ಪ್ರಕರಣವನ್ನು ಸಿ.ಬಿ.ಐ.ನವರು ಕೈಗೆತ್ತಿಕೊಂಡು ಎಫ್‌ಐಆರ್ ದಾಖಲಿಸಿರುವುದರಿಂದ ಶ್ರೀ ಕೆ.ಜೆ.ಜಾರ್ಜ್‌ರವರನ್ನು ಸಚಿವಸ್ಥಾನದಿಂದ ವಜಾಗೊಳಿಸಬೇಕೆನ್ನುವ ಬಗ್ಗೆ.**

~~~~~~

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸದನ ಭೋಜನಕ್ಕಾಗಿ ಮುಂದೂಡುವ ಪೂರ್ವದಲ್ಲಿ ಯಾವುದೇ ಕೋರ್ಟಿನ ತೀರ್ಮಾನ ಬರದಿದ್ದರೂ ಕೂಡ ಮಾನ್ಯ ಸಚಿವರಾದ ಜಾರ್ಜ್‌ರವರ ಬಗ್ಗೆ [xxx] ಎಂದು ಹೇಳಿದ್ದಾರೆ. ಆ ಪದವನ್ನು ದಯಮಾಡಿ ತಾವು expunge ಮಾಡಬೇಕು. ಹಾಗೆಯೇ ಈ ಪದದ ಬಳಕೆಯನ್ನು ಮಾಡಿರುವ ವಿರೋಧ ಪಕ್ಷದ ನಾಯಕರು ಈ ಸದನದ ಕ್ಷಮೆಯನ್ನು ಕೇಳಬೇಕು. ಏಕೆಂದರೆ ನಾವು ಈ ಸದನದ ಘನತೆ ಗೌರವವನ್ನು ಎತ್ತಿ ಹಿಡಿಯಬೇಕಾಗುತ್ತದೆ. ಸುಪ್ರೀಮ್ ಕೋರ್ಟಿನ ಜಜ್ಜ್‌ಮೆಂಟಿನಲ್ಲಾಗಲೀ ಅಥವಾ ಹೈಕೋರ್ಟಿನ ಜಜ್ಜ್‌ಮೆಂಟಿನಲ್ಲಾಗಲೀ ಅವರನ್ನು [xxx] ಎಂದು ಎಲ್ಲಿಯೂ ಬಿಂಬಿಸಿಲ್ಲ. ಇದರ ಬಗ್ಗೆ ತನಿಖೆ ನಡೆಸಿ, trial ಆಗಿ ಒಂದು ವೇಳೆ conviction ಆದರೆ ಮಾತ್ರ ಅವರನ್ನು [xxx] ಎಂದು ಕರೆಯುವುದಕ್ಕೆ ಸಾಧ್ಯತೆ ಇದೆ. ಆದುದರಿಂದ [xxx] ಎನ್ನುವ ಪದವನ್ನು ದಯಮಾಡಿ ಕಡತದಿಂದ ತೆಗೆಯಬೇಕು. ಹಾಗೆಯೇ ಯಾರು ಈ ಪದವನ್ನು ಬಳಕೆ ಮಾಡಿದ್ದಾರೆ, ಅವರು ಈ ಸದನದ ಕ್ಷಮೆಯನ್ನು ಕೇಳಬೇಕು. ಏಕೆಂದರೆ ಯಾವುದೇ

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~

ಅಪರಾಧವನ್ನು ಮಾಡಿಲ್ಲದವರ ಬಗ್ಗೆ ಈ ರೀತಿಯ ಪದವನ್ನು ಬಳಕೆ ಮಾಡಿರುವುದು ಈ ನೆಲದ ಕಾನೂನಿಗೆ ವಿರೋಧವಾಗಿರುವಂಥದ್ದು, ಆದ್ದರಿಂದ ದಯಮಾಡಿ ಅವರು ಈ ಸದನದ ಕ್ಷಮೆಯನ್ನು ಯಾಚಿಸಬೇಕೆಂದು ನಾನು ತಮ್ಮ ಮೂಲಕ ಅವರಿಗೆ ಆಗ್ರಹಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ 3 ಬಾರಿ, [xxx] ಎನ್ನುವ ಪದವನ್ನು ಬಳಕೆ ಮಾಡಲಾಗಿದೆ. ಸುಪ್ರೀಮ್ ಕೋರ್ಟಿನಲ್ಲಿ ಎಲ್ಲಿಯೂ ಸಹ ಶ್ರೀಮಾನ್ ಜಾರ್ಜ್‌ರವರ ಹೆಸರು ಉಲ್ಲೇಖವಾಗಿಲ್ಲ. Merit of the case ಕೋರ್ಟಿನ ತೀರ್ಮಾನಕ್ಕೆ ಬಿಟ್ಟಿದ್ದು, ಸುಪ್ರೀಮ್ ಕೋರ್ಟಿನ ಆದೇಶದಲ್ಲಿ ಬರಿ ಸಿಬಿಐ ತನಿಖೆಯನ್ನು ನಡೆಸಿ, 3 ತಿಂಗಳಿನಲ್ಲಿ ವರದಿಯನ್ನು ನೀಡಬೇಕೆಂದು ಹೇಳಿದ್ದಾರೆಯೇ ಹೊರತು ಬೇರೆ ಏನನ್ನು ಹೇಳಿರುವುದಿಲ್ಲ. ಆದರೆ ಪದೇ ಪದೇ ಮಾನ್ಯ ವಿರೋಧ ಪಕ್ಷದ ನಾಯಕರು [xxx] ಎನ್ನುವ ಪದದ ಬಳಕೆ ಮಾಡಿರುವುದು ಕಡತಕ್ಕೆ ಹೋಗಿದೆ. ಅದನ್ನು ಕಡತದಿಂದ ತೆಗೆಸುವುದಕ್ಕೆ ತಾವು ಸೂಚನೆಯನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮೊದಲು ಈಗ ಸದನದ ಬಾವಿಯಲ್ಲಿ ಧರಣಿ ನಿರತರಾಗಿರುವ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು. ಸದನದ ಕಾರ್ಯಕಲಾಪಗಳನ್ನು ಚೆನ್ನಾಗಿ ನಡೆಸೋಣ. ಈಗ ಸದನದಲ್ಲಿ ಕೋರಂ ಇದೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಸಚಿವರುಗಳು ಸಹ ಸದನದಲ್ಲಿ ಹಾಜರಿದ್ದಾರೆ. ಬಂದಿದ್ದಾರೆ. ಆದ್ದರಿಂದ ಸದನದ ಬಾವಿಯಲ್ಲಿರುವ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕು.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ 12 ಗಂಟೆ 15 ನಿಮಿಷದ ಸಮಯದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ನಡೆಸುವುದಕ್ಕೆ ತಾವು ಅನುಮತಿಯನ್ನು ನೀಡಿದಿರಿ. ಮಧ್ಯಾಹ್ನ 12 ಗಂಟೆ 15 ನಿಮಿಷದಿಂದ 1 ಗಂಟೆ 15 ನಿಮಿಷಗಳವರೆಗೆ ಭಾರತೀಯ ಜನತಾ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದವರು ಇದೇ ವಿಚಾರದ ಬಗ್ಗೆ ಚರ್ಚೆ ನಡೆಸಿದ್ದಾರೆ. ಮಾನ್ಯ ಶ್ರೀ ಸಿ.ಎಂ. ಇಬ್ರಾಹಿಂರವರು ಹೇಳಿದ ಹಾಗೆ ಇಲ್ಲಿ ಪ್ರಮುಖವಾಗಿ ಹೈದರಬಾದ್–ಕರ್ನಾಟಕದ ಮತ್ತು ಉತ್ತರ

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕದ ವಿಚಾರಗಳ ಬಗ್ಗೆ ಬಹಳ ಪ್ರಮುಖವಾಗಿ ಚರ್ಚೆ ಆಗಬೇಕಾಗಿದೆ. ಆದ್ದರಿಂದ ನಾನು ಭಾರತೀಯ ಜನತಾ ಪಕ್ಷದ ಸದಸ್ಯರಿಗೂ ಹಾಗೂ ಆಡಳಿತ ಪಕ್ಷದ ಸದಸ್ಯರಲ್ಲಿಯೂ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಮಧ್ಯೆದಲ್ಲಿ ಬೇರೆ ಸದಸ್ಯರು ಮಾತನಾಡುವುದು ಬೇಡ, ಹೊಸದಾಗಿ ಆಯ್ಕೆಯಾಗಿರುವ ಸಭಾನಾಯಕರು ಸದನಕ್ಕೆ ಉತ್ತರ ಕೊಡಲಿ ಅಥವಾ ಅವರ ಪರವಾಗಿ ಒಬ್ಬ ಸಚಿವರು ಉತ್ತರವನ್ನು ಸದನಕ್ಕೆ ಕೊಡಲಿ, ಯಾರೋ ಪ್ರಶ್ನೆ ಮಾಡಿದಾಗ ಇನ್ನೊಬ್ಬ ಸದಸ್ಯರು ಉತ್ತರವನ್ನು ನೀಡಿದರೆ, ಇಲ್ಲಿ deviation ಆಗಿ ವಿಷಯಾಂತರವಾಗುತ್ತದೆ. ದಯಮಾಡಿ ತಾವು ಅವರಿಗೂ ಸಹ ಸೂಚನೆಯನ್ನು ನೀಡಿ, ಈ ಸದನ ಚೆನ್ನಾಗಿ ನಡೆಯುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಸಚಿವರುಗಳ ಪರವಾಗಿ ನಾವು ಯಾರು ಸದನಕ್ಕೆ ಉತ್ತರವನ್ನು ನೀಡಿರುವುದಿಲ್ಲ. ಆದರೆ ಇಲ್ಲಿ ನಮ್ಮ ಹಕ್ಕಿನ ಚ್ಯುತಿಯಾಗುತ್ತಿದೆ. ಆದ್ದರಿಂದ ಈ ವಿಚಾರದ ಬಗ್ಗೆ 'Point of Order' ಅನ್ನು raise ಮಾಡಿದ್ದಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನ ಸಭಾ ಕ್ಷೇತ್ರ):- ಮಾನ್ಯ** ಸಭಾಪತಿಯವರೇ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡಬೇಕೆನ್ನುವುದರ ಬಗ್ಗೆ ನಮಗೂ ಸಹ ಕಾಳಜಿ ಇದೆ. ಅದರ ಬಗ್ಗೆ ನಮಗೆ ಬೇರೆಯವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ. ಆದರೆ ನಮ್ಮ ನಾಯಕರು ಮಾತನಾಡತಕ್ಕ ಕಾಲದಲ್ಲಿ ಅವರಿಗೆ obstructions ಮಾಡಿ, ಅವರ ಮಾತನ್ನು ನಿಲ್ಲಿಸಿದ ಕಾರಣ ಅದನ್ನು ವಿರೋಧಿಸಿ, ನಾವಿಲ್ಲಿ ಧರಣಿಯನ್ನು ಮಾಡುತ್ತಿದ್ದೇವೆ. ಈ ಸದನದಲ್ಲಿ ವಿರೋಧ ಪಕ್ಷದ ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಇದೆಯೋ ಇಲ್ಲವೋ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ಸಂದರ್ಭದಲ್ಲಿ ಇವರು ಪದೇ ಪದೇ ಮಧ್ಯಪ್ರವೇಶ ಮಾಡಿ, ಅವರಿಗೆ ಅಡಚಣೆ ಉಂಟು ಮಾಡಿ, ತಾವು ನೀಡಿದ ಸಮಯವನ್ನು ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗದ ಸಂದರ್ಭದಲ್ಲಿ ನಾವಿದ್ದೇವೆ. ಸುಪ್ರೀಮ್ ಕೋರ್ಟಿನಲ್ಲಿ ದಿನಾಂಖ ಉಲ್ಲೇಖಿಸಿ ಹೇಳಿರುವ ವಿಚಾರವನ್ನೇ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಪ್ರಸ್ತಾಪಿಸಿದ್ದು, ಅದರ ಬಗ್ಗೆ ಇಲ್ಲಿ ಅನಾವಶ್ಯಕವಾಗಿ ಏನೂ ಇಲ್ಲವೇ ಇಲ್ಲ ಎನ್ನುವ ರೀತಿ ಮಾತನಾಡಿದರೆ. . . .

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಜೆ.ಜಾರ್ಜ್(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ನನ್ನ ಹೆಸರನ್ನು ಉಲ್ಲೇಖಿಸಿ ಸಾಕಷ್ಟು ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ನನಗೆ ಉತ್ತರ ನೀಡಲು ಸ್ವಲ್ಪ ಸಮಯಾವಕಾಶವನ್ನು ನೀಡಿದರೆ, ಸುಪ್ರೀಮ್‌ಕೋರ್ಟ್‌ನಿಂದ ಏನು ಆದೇಶ ಬಂದಿದೆ ಮತ್ತು ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ ಆ ವಿಚಾರ ಏನಾಗಿದೆ ಎನ್ನುವುದನ್ನು ನಾನು ಸದನಕ್ಕೆ ತಿಳಿಸಬೇಕಾಗಿದೆ.

**ಸಭಾಪತಿಯವರು:–** ತಾವು ಹಿರಿಯ ಸಚಿವರು, ದಯಮಾಡಿ ಕುಳಿತುಕೊಳ್ಳಿ. ಖಂಡಿತ ತಮಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ನಾನು ಅವಕಾಶವನ್ನು ಮಾಡಿಕೊಡುತ್ತೇನೆ. ಈ ವಿಷಯವನ್ನು ನಿಲುವಳಿ ಸೂಚನೆಯಾಗಿ ಏಕೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿವರಿಸಲು ವಿರೋಧ ಪಕ್ಷದವರಿಗೆ 8 ನಿಮಿಷಗಳ ಕಾಲವಾಶವನ್ನು ನೀಡಿದ್ದೆನು. ಇದು ನಾವೇ ಮಾಡಿಕೊಂಡಿರುವ ಒಂದು ಪದ್ಧತಿ. ಅವರು ಮಾತನಾಡಿ ಇನ್ನು ಒಂದೆರಡು ನಿಮಿಷಗಳು ಮಾತ್ರ ಉಳಿದಿತ್ತು. ಅದಾದ ಮೇಲೆ ಸರ್ಕಾರ ಅದಕ್ಕೆ ಉತ್ತರವನ್ನು ನೀಡಬಹುದು. ಅಥವಾ ಸರ್ಕಾರ ಈಗ ಬೇಡ, ಪ್ರಶ್ನೋತ್ತರದ ನಂತರ ಅದಕ್ಕೆ ಉತ್ತರವನ್ನು ನೀಡುತ್ತೇವೆ ಎಂದು ಕೂಡ ಹೇಳಬಹುದು. ಇವೆರಡನ್ನು ನಾನು ಹೇಳಿದ್ದೆನು. I told that. ಈಗ ಅವಕಾಶ ಕೇಳಿದರೆ ಈಗಲೇ ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ಮುಗಿದ ಮೇಲೆ ಅವರಿಗೆ ಉತ್ತರ ಕೊಡುತ್ತೇವೆ. ಒಪ್ಪುವುದು ಬಿಡುವುದು ಸಭಾಪತಿಗಳಿಗೆ ಸೇರಿದ್ದು ಎಂದು ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದರು. ತಾವು ಕೂಡ ಅದಕ್ಕೆ ಧ್ವನಿಗೂಡಿಸಿದಿರಿ. ಆದರೆ ಅವರಿಗೆ ಮಾತನ್ನು ಮುಗಿಸಲು ಕಷ್ಟ ಆಯಿತು. ಇದರ ಮಧ್ಯೆದಲ್ಲಿ tempers ಎಲ್ಲಾ cool down ಆಗಲಿ ಎಂದು ನಾನು ಸದನವನ್ನು ಮುಂದೂಡಿದ್ದೆನು.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ವಿವರಕ್ಕೆ ಹೋಗುವುದಕ್ಕಿಂತ, tenability of admission of the Motion. ಅಷ್ಟಕ್ಕೆ ಮಾತ್ರ ತಾವು ಅನುಮತಿಯನ್ನು ನೀಡಬೇಕು.

**ಸಭಾಪತಿಯವರು:–** ತಾವು ಗಮನಿಸಿದರೋ ಇಲ್ಲವೋ, ಹಾಗಾದರೆ ಏನು ಮಾಡಬೇಕೆಂದು ಅದನ್ನು ಕಡೆಯಲ್ಲಿ ನಾನು ಹೇಳಿದ್ದೆನು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, this is only for admission ಎಂದು ತಾವು ಸೂಚನೆ ನೀಡಿದ್ದಲ್ಲಿ. . .

**ಸಭಾಪತಿಯವರು:-** ಈಗ ಬಾವಿಯಲ್ಲಿರುವ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ, ಉಳಿದಿರುವ 2 ನಿಮಿಷಗಳ ಕಾಲ ಅವರು ಮಾತನಾಡಲಿ. ಈ ವಿಷಯವನ್ನು ಮುಗಿಸಿಬಿಡೋಣ. ಇದನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಆದರೆ ಈಗ ಗೌರವಾನ್ವಿತ ಸಚಿವರ ಹೆಸರು ಪ್ರಸ್ತಾಪವಾಗಿರುವ ಹಿನ್ನೆಲೆಯಲ್ಲಿ ಸಚಿವರು ಮಾತನಾಡಲು ಅವಕಾಶ ನೀಡಬೇಕೆಂದು ಕೇಳುತ್ತಿದ್ದಾರೆ. It is a reasonable demand. ಇದು ಎಲ್ಲರೂ ಒಪ್ಪಿಕೊಳ್ಳಬೇಕಾದ ವಿಚಾರ. ಆದರೆ ಸಚಿವರು ಸರ್ಕಾರದ ಪರವಾಗಿ ಹೇಳುತ್ತಾರೋ ಅಥವಾ ಅವರ ಸ್ವಂತದ್ದು ಹೇಳುತ್ತಾರೋ ಅದು ಅವರಿಗೆ ಬಿಟ್ಟ ವಿಚಾರ. ಸರ್ಕಾರದ ಪರವಾಗಿ ಉತ್ತರ ಕೊಡಲು ಮಂತ್ರಿಗಳಿಗೆ ಅಧಿಕಾರವಿದೆ. ಆದರೆ ಸದನದಲ್ಲಿ ಮುಖ್ಯಮಂತ್ರಿಗಳು ಹಾಗೂ ಸಭಾನಾಯಕರು ಸದನದಲ್ಲಿದ್ದಾಗ ಯಾರು ಉತ್ತರ ನೀಡಬೇಕೆನ್ನುವ ತೀರ್ಮಾನವನ್ನು ಅವರೇ ಮಾಡುತ್ತಾರೆ. ಆದರೆ ಮಾನ್ಯ ಜಾರ್ಜ್‌ರವರ ಹೆಸರು ಪ್ರಸ್ತಾಪ ಆಗಿರುವ ಹಿನ್ನೆಲೆಯಲ್ಲಿ ಅದರ ಬಗ್ಗೆ ವಿವರ ನೀಡಲು ಸಚಿವರು ಅವಕಾಶ ಕೇಳುತ್ತಿದ್ದಾರೆ. ಅದಕ್ಕೆ ನಾನು ಖಂಡಿತ ಅವಕಾಶವನ್ನು ನೀಡುತ್ತೇನೆ. ದಯವಿಟ್ಟು ಈಗ ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆ ನಿಲುವಳಿ ಸೂಚನೆಯ ಪೂರ್ವಭಾವಿ ಚರ್ಚೆಗೆ ಅವಕಾಶ ಕೋರಿದಾಗ ತಾವು ಸ್ಪಷ್ಟವಾದ ನಿರ್ದೇಶನ ನೀಡಿದಿರಿ. ಹಾಗೆಯೇ ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಮಾನ್ಯ ಉಗ್ರಪ್ಪನವರು ಕೇಳಿದಂತಹ ಮಾಹಿತಿಗಳನ್ನು ಸಹ ನೀಡಿದಿರಿ. ಕೊನೆಗೆ ಮಾನ್ಯ ಬಸವರಾಜ ಹೊರಟ್ಟಿಯವರು ಅವರಿಗೆ 8 ನಿಮಿಷಗಳ ಕಾಲ ಮಾತನಾಡಲು ಅವಕಾಶ ಇದೆ ಎನ್ನುವ ಮಾತನ್ನು ಹೇಳಿದರು. ಆಗ ಮಾನ್ಯ ವಿರೋದ ಪಕ್ಷದ ನಾಯಕರು 8 ನಿಮಿಷದಲ್ಲಿ 3-4 ನಿಮಿಷ ಮಾತನಾಡಿದ್ದರು. ಆದರೆ ಯಾರೇ ಮಾನ್ಯ ಸದಸ್ಯರು ಮಧ್ಯೆದಲ್ಲಿ ಏನು ಮಾತನಾಡಬಾರದು ಎನ್ನುವ ಒಂದು ನಿಬಂಧನೆಗೆ ಒಳಪಟ್ಟರೆ, ಚರ್ಚೆ ಮುಗಿದೇ ಹೋಗುತ್ತದೆ. ಯಾವುದೋ ಒಂದು ಗಹನವಾದ ವಿಚಾರವನ್ನು ಚರ್ಚೆಗೆ ಕೈಗೆತ್ತಿಕೊಂಡಾಗ ಅದರ ಆಗುಹೋಗುಗಳ ಬಗ್ಗೆ ಮಾತನಾಡುವುದೇ ಬೇಡ ಎನ್ನುವುದು ಸರಿಯಲ್ಲ. ಸೀಮಿತವಾಗಿ ಮಾತನಾಡಬೇಕೆಂದರೆ ಹೇಗೆ? ಹಿಂದೆ

ಆ ರೀತಿ ನಡೆದಿದೆಯೇ ಎನ್ನುವ ರೆಕಾರ್ಡ್ಸ್ ತೆಗೆಸಿ ನೋಡಿ. ಹಿಂದೆ ಆ ರೀತಿ ನಡೆದಿದ್ದಲ್ಲಿ ತಾವು ಹಾಕುವಂತಹ ಕಟ್ಟುಪಾಡಿಗೆ ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಎದ್ದು ನಿಂತು obstructions ಮಾಡುವುದು ಎಷ್ಟರಮಟ್ಟಿಗೆ ಸರಿ?

(ಮುಂದು)

(928)13-11-2017(03-30)ಎಲ್‌ಎಂ(ಬಿಎಸ್‌ಡಿ)ವಿಕೆ

ಶ್ರೀ ವಿ. ಸೋಮಣ್ಣ (ಮುಂದು)...

ಆ ರೀತಿ ನಡೆದಿರುವ ಉದಾಹರಣೆ ಇದ್ದರೆ ತಾವು ಹೇಳುವ ಕಟ್ಟುಪಾಡಿಗೆ ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಬಿಟ್ಟು ಮಾನ್ಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಪದೇ ಪದೇ ಎದ್ದು ನಿಂತು ಆಕ್ಷೇಪಣೆ ವ್ಯಕ್ತಪಡಿಸುವುದು ಎಷ್ಟರಮಟ್ಟಿಗೆ ಸಮಂಜಸ? ಸುಪ್ರೀಂ ಕೋರ್ಟ್‌ನ ಸೂಚನೆ ಮೇರೆಗೆ ನಾವು ಈ ವಿಚಾರವನ್ನು ತೆಗೆದುಕೊಂಡಿದ್ದು, 3 ತಿಂಗಳಲ್ಲಿ ವಿಚಾರಣೆ ಮಾಡಿ ವರದಿ ಕೊಡಿ ಎಂದು ಸುಪ್ರೀಂ ಕೋಟ್‌ನವರೇ ಹೇಳಿದ್ದಾರೆ. ಅದರ ಆಧಾರದ ಮೇಲೆ ನಾವು ಹೇಳುತ್ತಿದ್ದೇವೆ. ಎಲ್ಲವನ್ನು ಅವರ ಮುಖದ ನೇರಕ್ಕೆ ಹೇಳಬೇಕಾದ ಪರಿಸ್ಥಿತಿ ನನಗೆ ಇಲ್ಲ. ನಾನೊಬ್ಬ ಸದಸ್ಯನಾಗಿ ನನ್ನದೇ ಆದ ಸ್ವಾತಂತ್ರ್ಯವನ್ನು ಹೊಂದಿ ಸದನದಲ್ಲಿ ಮಾತನಾಡುವ ಹಕ್ಕನ್ನು ಪಡೆದಿದ್ದೇನೆ. ಇನ್ನು ಮುಂದೆ ಒಂದು ನಿಬಂಧನೆ ಹಾಕಿ ಬರುವ ವಿಚಾರಗಳನ್ನು ಹೊರತುಪಡಿಸಿ ಬೇರೆ ಯಾವುದನ್ನೂ ಮಾತನಾಡುವುದು ಬೇಡ ಎಂದು ಮಾಡಿ. ಮಾತನಾಡುವಾಗ ಎಲ್ಲಿಂದ ಎಲ್ಲಿಗೆ ಬೇಕಾದರೂ ಮಾತನಾಡಬಹುದು. ಆದರೆ ಬೇರೆ ಬೇರೆ ವಿಚಾರಗಳು ಬಂದಾಗ ಈ ಗುರುತರ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರದ ಕಾರ್ಯವೈಖರಿ ಏನು ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಈಶ್ವರಪ್ಪನವರು ನೆನಪು ಮಾಡಿದ್ದಾರೆ. ಅದಕ್ಕೆ 8 ನಿಮಿಷಗಳ ಅವಕಾಶವನ್ನು ಕೊಟ್ಟಿದ್ದಿರಿ. ಈಗ ಸುಮಾರು 3ರಿಂದ 4 ಗಂಟೆಗಳು ಕಳೆಯಿತು. ಈ 4 ಗಂಟೆಗಳ ಕಾಲ ವ್ಯಯವಾಗಲು ಕಾರಣ ಯಾರು? ಇದರ ಉದ್ದೇಶ ಏನು? ಈ ಉದ್ದೇಶ ಏನು ಎಂಬುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಅವರೂ ಸಹ ವಿರೋಧ ಪಕ್ಷದಲ್ಲಿದ್ದರು. ಅವರು ವಿರೋಧ ಪಕ್ಷದಲ್ಲಿದ್ದಾಗ ಏನೇನು ಆಗಿದೆ ಎಂಬುದರ ಬಗ್ಗೆ ಕಡತವನ್ನು ತೆಗೆಸಿ. ಅವರು ಯಾವ ರೀತಿ ಮಾತನಾಡಿದ್ದಾರೆ ಎಂಬುದನ್ನು ನೋಡೋಣ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಎಚ್.ಎಂ. ರೇವಣ್ಣಃ- ನಾವು ಸರಿಯಾಗಿ ಮಾತನಾಡಿದ್ದೇವೆ. ಆದರೆ ನಾವು ಮಾತನಾಡಲೇಬಾರದು ಎಂದು ಹೇಳುವುದಕ್ಕೆ ಆಗುತ್ತದೆಯೇ? ಸುಮ್ಮನೆ ಸಮಯ ವ್ಯರ್ಥ ಮಾಡಬಾರದು. ನಿಯಮಾವಳಿ ಬಿಟ್ಟು ಮಾತನಾಡಿದಾಗ ಹೇಳಬೇಕಾಗುತ್ತದೆ. ಅದನ್ನು ಹೇಳಲೇಬಾರದು ಎಂದು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಪ್ರಿಯಾಂಕ ಖರ್ಗೆಃ- ಎಲ್ಲವೂ ಪ್ಲಾನ್ ಮಾಡಿ ಮಾತನಾಡುತ್ತಾರೆ.

ಶ್ರೀ ವಿ. ಸೋಮಣ್ಣಃ- ಹೌದು, ಎಲ್ಲವೂ ಪ್ಲಾನ್ ಮಾಡುತ್ತೇವೆ. ಎಲ್ಲರೂ ಅದೇ ಪ್ಲಾನ್ ಆಗಿರುತ್ತದೆ. ಅವರು ಇದ್ದಾಗಲೂ ಅದೇ ಮಾಡುತ್ತಾರೆ, ನಾವು ಇದ್ದಾಗಲೂ ಅದೇ ಮಾಡುತ್ತೇವೆ. ಇದರಲ್ಲಿ ಹರಿಶ್ಚಂದ್ರರು ಯಾರೂ ಇಲ್ಲ.

ಶ್ರೀ ಹೆಚ್.ಎಂ. ರೇವಣ್ಣಃ- ನಾವು ಇದೇ ಮಾಡುತ್ತೇವೆ ಮತ್ತು ಅವರು ಅದನ್ನೇ ಮಾಡುವುದಾದರೆ ಕಾನೂನು ಏಕೆ ಬೇಕು?

ಶ್ರೀ ವಿ. ಸೋಮಣ್ಣಃ- ಮಾನ್ಯ ರೇವಣ್ಣನವರಿಗೆ ಗೊತ್ತಿರುವ ವಿಚಾರವೇ ಆಗಿದೆ. ಸುಮ್ಮನೆ ಅವರು ಏಕೆ ಮಾತನಾಡುತ್ತಾರೆ?

ಶ್ರೀ ಹೆಚ್.ಎಂ. ರೇವಣ್ಣಃ- ಹಾಗಾದರೆ ಸದನ ಏಕೆ ಬೇಕು? ನಿಯಮಾವಳಿಗಳು ಏಕೆ ಬೇಕು?

ಶ್ರೀ ವಿ. ಸೋಮಣ್ಣಃ- ನಾನೂ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಸುಮಾರು ೩೦ ವರ್ಷಗಳನ್ನು ಕಳೆದಿದ್ದು, ನನಗೂ ಅಲ್ಪಸ್ವಲ್ಪ ಕಾನೂನು ಚೌಕಟ್ಟು, ಮತ್ತೊಂದು ಮಗದೊಂದರ ಮಾಹಿತಿ ಇದೆ. ಅವರ ಬಳಿ ಮಾತ್ರ ಸರಕಿಲ್ಲ, ನಮ್ಮ ಬಳಿಯೂ ಸರಕು ಇದೆ. ಅವರಿಗೆ ಬೇಕಾದಂತೆ ಮಾತನಾಡಿದರೆ ನಾವು ಒಳ್ಳೆಯವರು, ಇರುವ ವಾಸ್ತವಾಂಶವನ್ನು ಹೇಳಿದರೆ ಅವರಿಗೆ ಸಿಟ್ಟು!. ಈ ರೀತಿಯಾದರೆ ಅದು ಯಾವ ನ್ಯಾಯ? ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ತರುವುದೇನೆಂದರೆ, ಸಿಬಿಐ ನವರು ಯಾವ ಉದ್ದೇಶದ ಮೇಲೆ ಎಫ್‌ಐಆರ್ ನೋಂದಣಿ ಮಾಡಿದರು?

ಶ್ರೀ ಐವನ್ ಡಿ'ಸೋಜಾಃ- ಮಾನ್ಯ ಸಭಾಪತಿಯವರೇ, ಸದನವು ಸರಿಯಾದ ವ್ಯವಸ್ಥೆಯಲ್ಲಿ ಇಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ವಿ. ಸೋಮಣ್ಣಃ- ಸೆಷನ್ ಕೋರ್ಟ್‌ಗೆ ಹೋಗಿ, ನಂತರ ಎಫ್‌ಐಆರ್ ನೋಂದಣಿಯಾದಾಗ ಅಂದಿನ ಸಚಿವರಾಗಿದ್ದ ಮಾನ್ಯ ಜಾರ್ಜ್‌ರವರು ರಾಜೀನಾಮೆಯನ್ನು ಕೊಟ್ಟರು. ಅದಾದ ನಂತರ ಸಿಓಡಿ ಯಿಂದ ವಿಚಾರಣೆ ನಡೆಯಿತು. ಸಿಓಡಿ ನಲ್ಲಿ ಸಾವಿರಾರು ವಿಚಾರಣೆ ನಡೆಸುವ ಕೇಸ್‌ಗಳಿದ್ದು, ಈ ಯಾವ ಕೇಸ್‌ಗಳನ್ನು ಮುಟ್ಟಿಲ್ಲ. ಈ ಕೇಸ್‌ಗಳು ಸುಮಾರು ವರ್ಷಗಳಿಂದ ಕೊಳೆಯುತ್ತಿವೆ. ಆ ಕೇಸ್‌ಗಳಿಗೆ ಆದ್ಯತೆ ಸಿಕ್ಕಿಲ್ಲ. ಆದರೆ ಮಾನ್ಯ ಜಾರ್ಜ್‌ರವರ ಕೇಸ್‌ಗೆ ಮಾತ್ರ ಯಾವರೀತಿ ಆದ್ಯತೆ ಸಿಕ್ಕಿತು? ಆಯಿತು, ಕೋರ್ಟ್ ಆದೇಶದ ಮೇಲೆ ಕೊಟ್ಟರು, ಅದು ನಿಜವೇ ಆಗಿದೆ. ಅದಾದ ನಂತರ ಮಾನ್ಯ ಗಣಪತಿಯವರ ತಂದೆಯವರು ಸುಪ್ರೀಂ ಕೋರ್ಟ್‌ಗೆ ಹೋದರು. ನಂತರ ಸುಪ್ರೀಂ ಕೋರ್ಟ್‌ನವರು ಸಿಓಡಿ ಕೊಟ್ಟಿರುವ ವರದಿಯಲ್ಲಿ ಏನೇನು ನ್ಯೂನತೆಗಳಿವೆ, ಯಾವರೀತಿ ಕೇಸ್‌ನಲ್ಲಿ ಅನ್ಯಾಯ ಮಾಡಿದ್ದಾರೆ ಎನ್ನುವುದನ್ನು ಒಂದು ರೀತಿ ಕೊಟ್ಟರು.

(ಗೊಂದಲ)

ಶ್ರೀ ಐವನ್ ಡಿ'ಸೋಜಾಃ- ಅದು ಕೊಟ್ಟದ್ದಲ್ಲ, that is not on the merits. It is only on the request. ಮೆರಿಟ್ ಮೇಲೆ ಕೊಟ್ಟಿಲ್ಲ. ಯಾವುದೇ ವರದಿಗಳ ಮೇಲೆ ಮಾಡಿಲ್ಲ. *"…Having considered the entirety of the material before this Court but without expressing any opinion on merits, we direct that investigation be handed over to the CBI…"* So, this is not on merits. ಸುಮ್ಮನೆ [illegible] ಮಾಡುತ್ತಿದ್ದಾರೆ.

ಶ್ರೀ ವಿ. ಸೋಮಣ್ಣಃ- ಹಾಗಾದರೆ ಎಫ್‌ಐಆರ್ ಏಕೆ ಆಯಿತು? ನನಗೆ ಮಾತನಾಡುವುದಕ್ಕೆ ಬಿಡಬೇಕು, ಅವರು ಹೇಳಿದಂತೆ ನಾನು ಮಾತನಾಡುವುದಕ್ಕೆ ಆಗುವುದಿಲ್ಲ.

ಸಭಾಪತಿಯವರುಃ- ನಿಲುವಳಿ ಸೂಚನೆಯಲ್ಲಿ ತರಬಯಸುವ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ, ಬೇಡವೋ ಎಂಬ ಬಗ್ಗೆ ಮಾತ್ರ ಚರ್ಚೆ. ಅದರೆ merits of the case ಬಗ್ಗೆ ಸುಪ್ರೀಂಕೋರ್ಟ್ ಏನು ಹೇಳಿದೆ, ಸರ್ಕಾರ ಏನು ಮಾಡಿತು, ಸರಿ ಅಥವ ತಪ್ಪು ಮಾಡಿದ್ದಾರೆ ಎಂಬ ಬಗ್ಗೆ ನಿಲುವಳಿ ಸೂಚನೆಯ ಚರ್ಚೆಯಲ್ಲಿ ಮಾತನಾಡಬೇಕು. ನಿಲುವಳಿ ಸೂಚನೆ ಏಕೆ ತೆಗೆದುಕೊಳ್ಳಬೇಕು ಅಥವಾ ತೆಗೆದುಕೊಳ್ಳಬಾರದೇಕೆ ಎಂಬ ಬಗ್ಗೆ ಮಾತನಾಡಲು ಆರೆಂಟು ನಿಮಿಷಗಳ ಕಾಲ ಅವಕಾಶ

ಕೊಟ್ಟಿದ್ದೇನೆ. ಆದರೆ ಪ್ರಾಸಂಗಿಕವಾಗಿ ಬಹಳ ಕಟ್ಟುಪಾಡಿನಲ್ಲಿ ಆಗುವುದಿಲ್ಲ. ಸ್ವಲ್ಪ ಆ ಕಡೆ ಈ ಕಡೆ ಹೋಗುವುದು ನಡೆಯುತ್ತದೆ. ನಾನೂ ಅವಕಾಶ ಕೊಟ್ಟಿದ್ದೇನೆ. ಆದರೆ ಯಾವುದೋ ಕಾರಣಕ್ಕೆ ಒಳ್ಳೆಯ ವಾತಾವರಣ ನಿರ್ಮಾಣವಾಗದ್ದರಿಂದ ನಾನು ಊಟಕ್ಕಾಗಿ ಸದನವನ್ನು ಮುಂದೂಡಿದೆನು. ಈಗ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ತಮ್ಮ ಹತ್ತಿರ ಯಾವುದಾದರೂ ವಿಷಯಗಳು ಇದ್ದರೆ ತಿಳಿಸಿ, ಈಗಲೂ ಮಾತನಾಡುವವರಿಗೆ 2-3 ನಿಮಿಷ ಸಮಯಾವಕಾಶ ಕೊಡಲು ತಯಾರಿದ್ದೇನೆ. ಆದರೆ ನಿಲುವಳಿ ಸೂಚನೆ ಒಪ್ಪಿಕೊಂಡುಬಿಟ್ಟಿದ್ದಾರೆ ಎನ್ನುವ ರೀತಿಯಲ್ಲಿ ವಾದ ಮಂಡಿಸಿದರೆ ಸರಿಯಾಗುವುದಿಲ್ಲ. I have not accepted, I have not allowed for discussion on the subject of the Adjournment Motion. No, that ruling is still pending. ನಾನು ರೂಲಿಂಗ್ ಕೊಟ್ಟಿಲ್ಲ. ಆದರೆ ಮಾನ್ಯ ಸದಸ್ಯರ ಹಕ್ಕಿಗೆ ಅಡ್ಡ ಬರಬಾರದು ಎನ್ನುವುದಕ್ಕಾಗಿ ಅವಕಾಶವನ್ನು ಕೊಟ್ಟಿದ್ದೇನೆ. ನಾವೆಲ್ಲರೂ ತೀರ್ಮಾನ ಮಾಡಿಕೊಂಡು ನಡೆದುಕೊಂಡು ಬಂದಿರುವ ರೀತಿ ಸದಸ್ಯರ ಹಕ್ಕುಗಳನ್ನು ಕಾಪಾಡುವುದಕ್ಕಾಗಿ ಅವಕಾಶ ಕೊಟ್ಟಿದ್ದೇನೆ. ನಿಲುವಳಿ ಸೂಚನೆಯನ್ನು ಏಕೆ ಒಪ್ಪಿಕೊಳ್ಳಬೇಕು ಎಂಬ ಬಗ್ಗೆ ಅವರದ್ದೇ ಆದ ರೀತಿಯಲ್ಲಿ ಬಲವಾಗಿ ವಾದ ಮಾಡಿದರೆ ತಪ್ಪಿಲ್ಲ. ತದನಂತರ ಆಡಳಿತ ಪಕ್ಷದ ಪರವಾಗಿ ಸರ್ಕಾರ ಹೇಳುತ್ತದೆ ಮತ್ತು ಸರ್ಕಾರದ ಪರವಾಗಿ ಯಾರು ಮಾತನಾಡಬೇಕು ಎಂದು ಸರ್ಕಾರ ತೀರ್ಮಾನ ಮಾಡುತ್ತದೆ. ಅವರಿಗೂ ಆರೆಂಟು ನಿಮಿಷ ಅವಕಾಶ ಕೊಟ್ಟು, ನಂತರ ನನ್ನ ತೀರ್ಮಾನ ಹೇಳುತ್ತೇನೆ. ಸದ್ಯಕ್ಕೆ ನನ್ನ ತೀರ್ಮಾನ ಬೇಡ, ಈಗ ಸದನ ನಡೆಸಿ, ತೀರ್ಮಾನದ ಬಗ್ಗೆ ಮುಂದೆ ನೋಡೋಣ ಎಂಬ ಅಭಿಪ್ರಾಯ ಇದ್ದರೂ ತಿಳಿಸಿ. ಇದು ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರುಗಳಿಗೆ ಸಂಬಂಧಪಟ್ಟಿದೆ. ದಯಮಾಡಿ ಬೇಗ ಮುಗಿಸಿ.

ಶ್ರೀ ಐವನ್ ಡಿ'ಸೋಜಾಃ- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳುವಂತೆ ತಿಳಿಸಿ.

ಸಭಾಪತಿಯವರುಃ- ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಐವನ್ ಡಿ'ಸೋಜಾಃ- ಆದರೆ ಬಾವಿಯಲ್ಲಿ ಧರಣಿ ಕುಳಿತು ಮಾತನಾಡಿದರೆ ಹೇಗೆ? ಅವರ ಸ್ಥಾನಗಳಿಗೆ ಹೋಗಲಿ.

ಸಭಾಪತಿಯವರುಃ- ಅವರು ಸ್ಥಾನಗಳಿಗೆ ತೆರಳಿ ಸದನ ನಡೆಸಲು ಅನುವು ಮಾಡಿಕೊಡಬೇಕು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀ ವಿ. ಸೋಮಣ್ಣಃ- ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಇದು Cognizable offence ಅಲ್ಲವೋ? Cognizable offence ಅಲ್ಲದಿದ್ದರೆ ಎಫ್‌ಐಆರ್ ಏಕೆ ಆಗುತ್ತದೆ? ಇದರ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಫ್‌ಐಆರ್ ಆದ ಮೇಲೆ ನೈತಿಕತೆ ಏನು? ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ನಮಗೊಂದು ಕಾನೂನು, ಅವರಿಗೊಂದು ಕಾನೂನು ಇಲ್ಲ. ಈ ನೆಲಕ್ಕೆ ಒಂದೇ ಕಾನೂನಿದೆ. ಆ ಕಾನೂನಿನಡಿ ವ್ಯವಸ್ಥೆ ಮತ್ತು ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ. Cognizable offence ಎಂದರೆ ಏನು? Cognizable offence ಆಗಿ ಎಫ್‌ಐಆರ್ ಏಕೆ ಆಯಿತು? ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಸಿಬಿಐನವರು ಎಫ್‌ಐಆರ್ ಮಾಡಿದ್ದಾರೆಯೇ? ಅಥವಾ ಸಿಬಿಐ ನವರೇ ಸ್ವತಃ ಉದ್ದೇಶಪೂರ್ವಕವಾಗಿ ಎಫ್‌ಐಆರ್ ಮಾಡಿದ್ದಾರೆಯೇ?

ಶ್ರೀ ಐವನ್ ಡಿ'ಸೋಜಾಃ- ಮಾನ್ಯ ಸಭಾಪತಿಯವರೇ, ಅವರು ವಿಷಯವನ್ನು ಪ್ರಸ್ತಾಪ ಮಾಡಲಿ, ಆದರೆ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು. ಇಲ್ಲದ್ದುಕೊಂಡು ಹೇಗೆ ವಿಷಯವನ್ನು ಮಂಡಿಸುತ್ತಾರೆ? ಅವರ ಸ್ಥಾನಗಳಿಗೆ ತೆರಳಲಿ. House is not in order.

(ಗೊಂದಲ)

ಶ್ರೀ ವಿ. ಸೋಮಣ್ಣಃ- ಗುರುತರವಾದ ಆಪಾದನೆ ಬಗ್ಗೆ ಸುಪ್ರೀಂ ಕೋರ್ಟ್‌ನವರು ನಿರ್ದೇಶನ ನೀಡಿರುವುದರಿಂದ, ಇದು Cognizable offence ಆಗಿದ್ದು, ಸಿಬಿಐ ನವರು ಎಫ್‌ಐಆರ್ ಮಾಡಿ, ಮೇಲುನೋಟಕ್ಕೆ ತಪ್ಪಿದೆ ಮತ್ತು ತಪ್ಪನ್ನು ಸರಿಪಡಿಸಲು 3 ತಿಂಗಳಲ್ಲಿ ವಿಚಾರಣೆ ಮಾಡಿ ವರದಿ ಕೊಡಲು ಸಿಬಿಐ ನವರಿಗೆ ನಿರ್ದೇಶನ ಇದೆ. ಸಿಬಿಐ ನವರು ಸುಮ್ಮನೆ ವಿಚಾರಣೆ ಮಾಡಬಹುದಾಗಿತ್ತು, ಅವರು ಎಫ್‌ಐಆರ್ ದಾಖಲು ಮಾಡುವ ಅವಶ್ಯಕತೆ ಇರಲಿಲ್ಲ. ಈ ಕೇಸ್‌ನಲ್ಲಿ ತುಂಬಾ ವಿಚಾರಗಳು ಅಡಕವಾಗಿವೆ, ಪಾಪದ ಕೆಲಸ ಆಗಿದೆ. ಆದ್ದರಿಂದ ಎಫ್‌ಐಆರ್ ಮಾಡಿದ್ದಾರೆ. ದಯಮಾಡಿ ಇದರ ಚರ್ಚೆಗೆ ಅವಕಾಶ ಕೊಡಬೇಕು. ಇದರಲ್ಲಿರುವ ಸತ್ಯಾಸತ್ಯತೆ ಹೊರಗೆ ಬರಬೇಕು.

ಶ್ರೀ ಐವನ್ ಡಿ'ಸೋಜಾಃ- ಮಾನ್ಯ ಸಭಾಪತಿಯವರೇ, ಅವರು ಧರಣಿ ಮಾಡುತ್ತಿದ್ದಾರೋ ಅಥವಾ ವಿಷಯ ಮಂಡಿಸುತ್ತಿದ್ದಾರೋ, ಗೊತ್ತಿಲ್ಲ.

(ಗೊಂದಲ)

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(929)13-11-2017(03-40)ಬಿಎಸ್‌ಡಿ/ಬಿಎನ್‌ಎಸ್

**ಶ್ರೀ ವಿ. ಸೋಮಣ್ಣಃ-** ಮಾನ್ಯ ಸಭಾಪತಿಯವರೇ, ಇದರಲ್ಲಿ ನೈತಿಕತೆ ಎಷ್ಟರಮಟ್ಟಿಗೆ ಇದೆ ಮತ್ತು ಇದರ ಬಗ್ಗೆ ಸಂದೇಶವನ್ನು ಕೊಡುವಾಗ ಹಾಗೂ ಮುಂದೆ ಇಂತಹ ಪ್ರಕರಣಗಳು ಆದಾಗ ಈ ವಿಷಯದಲ್ಲಿ ಹೀಗೆ ಬೆಳಕನ್ನು ಚೆಲ್ಲಿದ್ದಾರೆ. ರಾಷ್ಟ್ರದ ಸರ್ವೋಚ್ಛವಾದ ಸುಪ್ರೀಂಕೋರ್ಟ್ ತೀರ್ಮಾನ ಕೊಟ್ಟ ಸಂದರ್ಭದಲ್ಲಿ ಆ ಕುಟುಂಬಕ್ಕೆ ನ್ಯಾಯ ಕೊಡಬೇಕಾಗುತ್ತದೆ. ಆ ಕುಟುಂಬಕ್ಕೆ ನ್ಯಾಯವನ್ನು ಒದಗಿಸಿಕೊಡುವಾಗ ಸದನದಲ್ಲಿ ಮಾತನಾಡಲು ದಯಮಾಡಿ ಅವಕಾಶ ಕೊಡಬೇಕು. ಇದರ ಬಗ್ಗೆ ಚರ್ಚೆಯಾಗಲಿ, ತಾವು ತೀರ್ಮಾನ ಕೊಡುವುದಕ್ಕೂ ಮುನ್ನ ಆಡಳಿತ ಪಕ್ಷದವರು ಏನು ಹೇಳುತ್ತಾರೆಂದು ಕೇಳೋಣ. ಇಂತಹ ಗುರುತರ ಪ್ರಕರಣದಲ್ಲಿ ಸರ್ಕಾರ ಬಹಳ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ತಾವು ಚರ್ಚೆಗೆ ಅನುಮತಿ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ)ಃ-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಹಾಜರಿದ್ದಾರೆ. ಈ ಸದನದಲ್ಲಿ ನಿಲುವಳಿ ಸೂಚನೆಯ ಪೂರ್ವಭಾವಿ ಪ್ರಸ್ತಾಪಕ್ಕೆ ಸ್ವಲ್ಪ ಸಮಯವನ್ನು ಕೊಡಬೇಕು.

(ಗೊಂದಲ)

**ಸಭಾಪತಿಯವರುಃ-** ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿದರೆ ಬೇರೆಯವರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ಃ-** ಮಾನ್ಯ ಸಭಾಪತಿಯವರೆ, ಅವರು ಉದ್ದೇಶಪೂರ್ವಕವಾಗಿ ಧರಣಿ ಮಾಡುತ್ತಿದ್ದು, ಅವರ ಸ್ಥಾನಗಳಿಗೆ ತೆರಳುವುದಿಲ್ಲ.

(ಗೊಂದಲ)

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆ ಬಗ್ಗೆ ಮಾತನಾಡುವುದಿಲ್ಲ, ಮಾನ್ಯ ಸದಸ್ಯರೆಲ್ಲರೂ ಬಾವಿಯಲ್ಲಿ ಇದ್ದಾರೆ. ಬಾವಿಯಲ್ಲಿದ್ದುಕೊಂಡು preliminary submission ಬಗ್ಗೆ ಹೇಗೆ ಮಾತನಾಡುತ್ತಾರೆ? ತಾವು ಇನ್ನೂ ಅವಕಾಶ ಕೊಟ್ಟಿಲ್ಲ. ಬಾವಿಯಿಂದ ಹೊರಗೆ ಬಂದು ಇನ್ನೇನು ಮಾತನಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ. ಶಾಣಪ್ಪಃ–** (ಬಾವಿಯಲ್ಲಿದ್ದುಕೊಂಡು) ನಾವು ಇನ್ನೂ ಮಾತನಾಡಿಲ್ಲ.

**ಶ್ರೀ ಸಿದ್ದರಾಮಯ್ಯಃ–** ಈಗ ಮಾನ್ಯ ಸೋಮಣ್ಣನವರು ಮಾತನಾಡಲಿಲ್ಲವೇ? ಮಾನ್ಯ ಸೋಮಣ್ಣನವರು ಎಲ್ಲಿ ನಿಂತುಕೊಂಡಾದರೂ ಮಾತನಾಡಿರಲಿ. On behalf of the Opposition Party he is speaking.

**ಶ್ರೀ ಹೆಚ್.ಎಂ. ರೇವಣ್ಣಃ–** House order ನಲ್ಲಿ ಇದೆಯೇ?

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ಶಾಣಪ್ಪನವರು ಹಿರಿಯ ಸದಸ್ಯರಾಗಿ ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ವಿ. ಸೋಮಣ್ಣಃ–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿದ್ದಾಗ ಮಾತನಾಡಿಲ್ಲವೇ?

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ಸಭಾಪತಿಯವರೇ, ಈ ರೀತಿ ನಾನು ಯಾವತ್ತೂ ಮಾತನಾಡಿಲ್ಲ. ಈ ರೀತಿ ಮಾತನಾಡಿ ನನಗೆ ಗೊತ್ತೇ ಇಲ್ಲ. ಮಾನ್ಯ ಸಭಾಪತಿಯವರೇ, ಅವರು preliminary submission ಮಾಡಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:–** (ಬಾವಿಯಲ್ಲಿದ್ದುಕೊಂಡು) ಇನ್ನೂ ಮಾಡಿಲ್ಲ.

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸೋಮಣ್ಣನವರು ಮಾತನಾಡಿದರು. ಹಾಗಾದರೆ ಇನ್ನೊಬ್ಬರು ಮಾತನಾಡಿದಾಗ ಅವರ ಪರವಾಗಿ ಮಾಡಿದ್ದಲ್ಲವೇ? ಮಾನ್ಯ ಸೋಮಣ್ಣನವರ ವೈಯಕ್ತಿಕವೇ? Is it his own individual submission?

**ಶ್ರೀ ಕೆ.ಬಿ. ಶಾಣಪ್ಪಃ–** (ಬಾವಿಯಲ್ಲಿದ್ದುಕೊಂಡು) ನಾವು ಬಾವಿಗೆ ಬರುವ ಪರಿಸ್ಥಿತಿ ಆಡಳಿತ ಪಕ್ಷದ ಸದಸ್ಯರಿಂದ ನಿರ್ಮಾಣವಾಯಿತು.

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ಸಭಾಪತಿಯವರೇ, ಸುಮ್ಮನೆ ಅವರು ಏನು ಹೇಳಿದರೂ ಕೇಳಬಿಡಬೇಕೆ? ಮಾನ್ಯ ಜಾರ್ಜ್ ಒಬ್ಬರು [xxx] ಎಂದು ಹೇಳಿದರೂ ಕೇಳಿಕೊಂಡು ಕುಳಿತುಕೊಳ್ಳಬೇಕೆ? Who has to decide it? Whether the Court has come to the

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

conclusion that his guilt is proved and is there any finding to that effect by either the Supreme Court or any other Court? [xxx] ಎಂದು ಹೇಳಿದಾಗ ಸಹಿಸಿಕೊಂಡು ಇರಬೇಕೆ? ಕೋರ್ಟ್‌ನಲ್ಲಿ ಅಥವಾ ಸುಪ್ರೀಂಕೋರ್ಟ್‌ನಲ್ಲಿ [xxx] ಎಂದು ಹೇಳಿದ್ದಾರೆಯೇ?

**ಶ್ರೀ ಕೆ.ಬಿ. ಶಾಣಪ್ಪ:-** (ಬಾವಿಯಲ್ಲಿದ್ದುಕೊಂಡು) ಹಾಗಾದರೆ ಕಾನೂನು......Is there any direction by any Court as to we should not talk on it….

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಶಾಣಪ್ಪನವರಿಗೆ 'Murderer' ಎಂದು ಹೇಳಬಹುದೇ? What is he talking? ಯಾರಿಗಾದರೂ ಏನಾದರೂ ಹೇಳಿಬಿಡಬಹುದೇ? ಅವರಿಗೆ privilege ಇದೆ ಎಂದು ಏನಾದರೂ ಮಾತನಾಡುವುದಕ್ಕೆ ಆಗುವುದಿಲ್ಲ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೆ, ವಿಷಯವನ್ನು ಎಲ್ಲಿಗೋ ತೆಗೆದುಕೊಂಡು ಹೋಗುವುದು ಬೇಡ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾವು ಸದನವನ್ನು ನಡೆಸಲು ಕೆಲವು ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದೇವೆ. ಆ ನಿಯಮಾವಳಿಗಳ ವ್ಯಾಪ್ತಿಯಲ್ಲಿಯೇ ನಾವೆಲ್ಲರೂ ಕೆಲಸ ಮಾಡಬೇಕು. ಇದು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಈಗಾಗಲೇ ಹೇಳಿದ್ದಾರೆ.

**ಸಭಾಪತಿಯವರು:-** ಇನ್ನೂ ಹೇಳಿಲ್ಲ. ಇನ್ನೂ ಅವಕಾಶ ಕೊಡಬೇಕು.

**ಶ್ರೀ ಸಿದ್ದರಾಮಯ್ಯ:-** ಆಯಿತು, ಹೇಳುತ್ತಾರೆ. ಅವರು submission ಮಾಡಿದ್ದರೆ ನಮ್ಮವರು ಮಾತನಾಡುತ್ತಾರೆ. ಸುಮ್ಮನೆ ಏನೋ ಮಾತನಾಡುವುದು ಬೇಡ. He (Sri K.B.Shanappa) is a Senior Member of this House.

**Sri K.B.SHANAPPA** (In the well):- I do accept it. But, the thing is that the discussion is not yet completed…

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri SIDDARAMAIAH**:- No, it is not a discussion. He has been allowed to make only preliminary submission. It has not been taken up for discussion. No discussion at all.

**ಶ್ರೀ ಹೆಚ್.ಎಂ. ರೇವಣ್ಣಃ-** ಮಾನ್ಯ ಸಭಾಪತಿಯವರೇ, ಒಬ್ಬ ಹಿರಿಯ ಸದಸ್ಯರು ಬಾವಿಯಲ್ಲಿದ್ದುಕೊಂಡು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

**Mr.CHAIRMAN**:- No discussion. It is only a submission.

**Sri SIDDARAMAIAH**:- No discussion. ಮಾನ್ಯ ಸಭಾಪತಿಯವರು only preliminary submission ಮಾಡಲು ಅವಕಾಶ ಕೊಟ್ಟಿದ್ದಾರೆ. ನಮ್ಮ ಕಡೆಯವರು ವಿರೋಧ ಮಾಡಿದ್ದಾರೆ. ಅವರು preliminary submission ಮಾಡಲಿ. ನಿಲುವಳ ಸೂಚನೆಗೆ ಮೆರಿಟ್ ಮೇಲೆ ಹೋಗುವುದಕ್ಕೆ ಆಗುವುದಿಲ್ಲ. Why it should be taken up for discussion ಎಂಬ ಬಗ್ಗೆ convince ಮಾಡಬೇಕು. ಅದು preliminary submission ಆಗುತ್ತದೆ. ಆದರೆ ಅದನ್ನು ಮಾಡದೇ ಬೇರೆ ಎಲ್ಲವನ್ನೂ ಹೇಳುತ್ತಾ ಹೋದರೆ...... ಜಾರ್ಜ್ [xxx] ಎಂದು ಹೇಳದರೆ..., should we keep quiet? ಬಹಳ ವರ್ಷದ ಅನುಭವ ಇರುವವರು ಮಾತನಾಡಲಿ.

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

**ಶ್ರೀ ಕೆ.ಬಿ. ಶಾಣಪ್ಪಃ-** (ಬಾವಿಯಲ್ಲಿದ್ದುಕೊಂಡು) ಮಾನ್ಯ ಸಭಾಪತಿಯವರೇ, submission ಮಾಡಲು ಒಂದು norms ಇರುತ್ತದೆ, ಶಾಂತಿಯಿಂದ ಕೇಳಬೇಕು.

(ಗೊಂದಲ)

**ಶ್ರೀ ರಾಮಚಂದ್ರಗೌಡಃ-** ಮಾನ್ಯ ಸಭಾಪತಿಯವರೇ, preliminary submission ಮಾಡಲು ನಮಗೆಲ್ಲಾ ತೊಂದರೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri K.B.SHANAPPA**:- We have not been allowed by them to speak. Submission ಮಾಡಲು allow ಮಾಡದಿದ್ದರೆ ಹೇಗೆ? That is why we have entered into the well.

**ಶ್ರೀ ಎಮ್.ಆರ್. ಸೀತಾರಾಂ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಹೇಳುವುದೇನೆಂದರೆ, Whether the motion is tenable for admission or not? ಎಂದಷ್ಟಕ್ಕೆ ಸೀಮಿತವಾಗಿ ಇರಬೇಕು.

**ಸಭಾಪತಿಯವರುಃ–** ಬೆಳಗ್ಗೆಯಿಂದ ಅದೇ ಚರ್ಚೆ ನಡೆಯುತ್ತಿದೆ. ವಾಪಸ್ಸು ಅವರ ಜಾಗಕ್ಕೆ ಹೋದರು. ಆಡಳಿತ ಪಕ್ಷಕ್ಕೆ ಸರ್ಕಾರದ ಪರವಾಗಿ ಯಾರು ಮಾತನಾಡುತ್ತಾರೆ ಎಂದು ಕೇಳುತ್ತೇನೆ, ಅದನ್ನೂ ಕೇಳಿಲ್ಲ. ಈ ಮಧ್ಯೆ ಹಿರಿಯ ಸಚಿವರಾದ ಮಾನ್ಯ ಜಾರ್ಜ್‌ರವರು ಅವರ ಹೆಸರು ಈ ರೀತಿ ಪ್ರಸ್ತಾಪವಾಗಿರುವುದರಿಂದ ಒಂದು ಅವಕಾಶವನ್ನು ಕೇಳಿದ್ದಾರೆ. ಎರಡೂ ಪಾಯಿಂಟ್‌ಗಳನ್ನು ನಾನು ಪರಿಗಣಿಸಿ ಒಪ್ಪಿಕೊಂಡಿದ್ದೇನೆ. ನಾನು ಒಪ್ಪಿಕೊಂಡ ನಂತರ ಸದನ ಆರ್ಡರ್‌ನಲ್ಲಿ ಇರಬೇಕು, ಆದ್ದರಿಂದ ಮಾನ್ಯ ಸದಸ್ಯರು ದಯಮಾಡಿ ಅವರ ಸ್ಥಾನಗಳಿಗೆ ತೆರಳಬೇಕು. ನಾನು ಅವರಿಗೆ ಅವಕಾಶ ಕೊಡುತ್ತೇನೆ. ಅದಾದ ನಂತರ ಸರ್ಕಾರ ಉತ್ತರ ಕೊಡುತ್ತದೆ. ದಯವಿಟ್ಟು ಅವರವರ ಸ್ಥಾನಗಳಿಗೆ ತೆರಳಬೇಕು.

**ಶ್ರೀ ರಾಮಚಂದ್ರಗೌಡಃ–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರುವುದೇನೆಂದರೆ, preliminary submission ಮಾಡುವುದಕ್ಕೆ ಬಿಡಲಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸೋಮಣ್ಣನವರು ಮಾತನಾಡಿದ್ದು ಏನು?

(ಗೊಂದಲ)

**ಶ್ರೀ ಎಮ್.ಆರ್. ಸೀತಾರಾಂಃ–** ಮಾನ್ಯ ಸಭಾಪತಿಯವರೇ, ಅವರು ಮುಕ್ತಾಯ ಮಾಡಿದ್ದರೆ ನಮಗೆ ಅನುಮತಿ ಕೊಡಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರುಃ–** ದಯಮಾಡಿ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು, preliminary submission ಅನ್ನು ಮುಕ್ತಾಯ ಮಾಡಬೇಕು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ,.

**ಶ್ರೀ ಎಸ್.ಆರ್. ಸೀತಾರಾಂಃ–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಪರವಾಗಿ ಮಾನ್ಯ ಸೋಮಣ್ಣನವರು ಮಾತನಾಡಿ ಮುಗಿಸಿದ್ದಾರೆ.

(ಗೊಂದಲ)

**ಸಭಾಪತಿಯವರುಃ–** ಮಾನ್ಯ ಸಭಾನಾಯಕರು ನಿಂತಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸೋಮಣ್ಣನವರು ಈಗಾಗಲೇ ಮಾತನಾಡಿದ್ದಾರೆ. No more discussion. ನಾವು submission ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯ ಮಂತ್ರಿಗಳ ಬಳಿ ಪ್ರಾರ್ಥನೆ ಮಾಡುವುದೇನೆಂದರೆ,

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಾವು allow ಮಾಡುವುದಕ್ಕೆ ಮೊದಲು [xxx] ಎಂಬ ಬಗ್ಗೆ.....

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪಃ–** ಆ ಪದದ ಬಗ್ಗೆ ಅವರು ಕ್ಷಮೆ ಕೇಳಬೇಕು, ಆ ಪದ expunge ಆಗಬೇಕು. ಜವಾಬ್ದಾರಿಯ ನಾಯಕರಾಗಿ [xxx] ಎಂದು ಹೇಳುವುದು ಸರಿಯಲ್ಲ. ನಾಲಿಗೆ ಹರಿಬಿಡುವುದು ಸರಿಯಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರುಃ–** ಅವರನ್ನು ಮೊದಲು ವಾಪಸ್ಸು ಕಳುಹಿಸುತ್ತೇನೆ.

**ಶ್ರೀ ಎಮ್.ಆರ್. ಸೀತಾರಾಂಃ–** ಮೊದಲು ಕಳುಹಿಸಿ. Let the House be in order.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪಃ–** ಮಾನ್ಯ ಸಭಾಪತಿಯವರೇ, Sessions Court, Magistrate Court, High Court or Supreme Court, ಯಾವುದಾದರೂ ಕೋರ್ಟ್‌ಗಳಲ್ಲಿ ಮಾನ್ಯ ಜಾರ್ಜ್‌ರವರಿಗೆ conviction ಆಗಿ [xxx] ಎಂದು ಘೋಷಣೆ ಮಾಡಿದ್ದಾರೆಯೇ? ಮಾಡಿದ್ದರೆ ಹೇಳಲಿ. ಆ ರೀತಿ ಘೋಷಣೆ ಮಾಡದಿದ್ದ ಸಂದರ್ಭದಲ್ಲಿ [xxx] ಎಂದು ಕರೆದಿರುವುದು ಮಾನ್ಯ ಸದಸ್ಯರಿಗೆ ಮಾತ್ರವಲ್ಲದೇ ಸದನಕ್ಕೆ ಮಾಡಿದ ಅಪಮಾನವಾಗಿದೆ. ದಯಮಾಡಿ ಆ ಪದವನ್ನು expunge ಮಾಡಬೇಕು ಮತ್ತು ಅವರು ಕ್ಷಮೆ ಕೇಳಬೇಕು.

(ಗೊಂದಲ)

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

**ಶ್ರೀ ವಿ.ಎಸ್. ಉಗ್ರಪ್ಪಃ–** ಮಾನ್ಯ ಸಭಾಪತಿಯವರೇ, ಯಾರು ಭ್ರಷ್ಟ ಹಣವನ್ನು ಲೆಕ್ಕಹಾಕಲು ಮಿಷನ್ ಇಟ್ಟುಕೊಂಡು ...... ರಾಜೀನಾಮೆ ಕೊಟ್ಟಿಲ್ಲ. ಇವತ್ತು ನೈತಿಕತೆ ಬಗ್ಗೆ ಹೇಳುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಮಾನ್ಯ ಸಭಾಪತಿಯವರೇ, ಪ್ರತಿಬಾರಿ ನಾವು ಮಾಡುವ ವಾದಕ್ಕೆ ಅಡ್ಡಬರುವ ವ್ಯವಸ್ಥೆ ನಡೆಯುತ್ತಿದೆ. ಇದು ಯಾವ ನ್ಯಾಯ? ಪ್ರಜಾಪ್ರಭುತ್ವದಲ್ಲಿ ನಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶವಿಲ್ಲವೆಂದರೆ.... ಬಾಯಿಬಡುಕರ......

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(930)13.11.2017/3.50/**ಹೆಚ್‌ವಿಃಬಿಎನ್‌ಎಸ್**

**ಸಭಾಪತಿಯವರುಃ–** ಮಾನ್ಯ ಉಗ್ರಪ್ಪನವರೇ, ನನ್ನ ಮಾತುಗಳನ್ನು ಒಂದು ನಿಮಿಷ ಕೇಳಿ. ಅವರು ಬಳಕೆ ಮಾಡಿರುವ ಪದ ಪ್ರಯೋಗ ಸರಿಯಲ್ಲ, ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು ಎನ್ನುವ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ‘ಆ ಪದ ಪ್ರಯೋಗವಾಗಿದೆಯೇ ಎನ್ನುವುದನ್ನು ನಾನು ನೋಡುತ್ತೇನೆ. ಒಂದು ವೇಳೆ ಪ್ರಯೋಗವಾಗಿದ್ದರೆ ಕಡತದಿಂದ ತೆಗೆದು ಹಾಕುತ್ತೇನೆ, ಕಡತವನ್ನು ನೋಡುವುದಕ್ಕೆ ಅವಕಾಶ ಕೊಡಿ’ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಆದರೆ, ತಾವುಗಳು ಕಡತವನ್ನು ನೋಡುವುದಕ್ಕೆ ನನಗೆ ಅವಕಾಶವನ್ನು ನೀಡದೆ suo moto ruling ಕೊಡಿ ಎಂದರೆ, suo moto ruling ಕೊಡುವುದಕ್ಕೆ ಬರುವುದಿಲ್ಲ. I have to go in to it.

**(ಗೊಂದಲ)**

**ಶ್ರೀ ಬಿ.ಎಸ್.ಸುರೇಶ್‌ಃ–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ, ನಾವು [xxx] ಎಂದು ಹೇಳಬಹುದೇ? ಏನೋ ಬಾಯಿಗೆ ಬಂದದ್ದನ್ನು ಮಾತನಾಡಬಹುದೇ? ದಯವಿಟ್ಟು ಅವರು ಕ್ಷಮೆ ಕೇಳಬೇಕು.

**(ಗೊಂದಲ)**

---

[xxx] **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

**ಶ್ರೀ ಪ್ರಿಯಾಂಕ ಖರ್ಗೆ(ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಬಾವಿಯೊಳಗಿರುವ ಸದಸ್ಯರುಗಳನ್ನು ತಮ್ಮ ತಮ್ಮ ಸ್ಥಾನಗಳಿಗೆ ಕಳುಹಿಸಿ. Let the House come to order.

**ಸಭಾಪತಿಯವರುಃ–** ಸದನದ ಬಾವಿಯೊಳಗಿರುವ ಎಲ್ಲ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರೆ ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ವಭಾವಿ ಪ್ರಸ್ತಾವವನ್ನು ಮುಕ್ತಾಯಗೊಳಿಸುತ್ತಾರೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ತಾವು ಅನುಮತಿಯನ್ನು ಕೊಟ್ಟರೆ, ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

**ಸಭಾಪತಿಯವರುಃ–** ಬೇಗ ಬೇಗ ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಮೊದಲು ಅವರು ಕ್ಷಮೆ ಕೇಳಲಿ ಆಮೇಲೆ ಮಾತನಾಡಲಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ(ಸಾರಿಗೆ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ ಮೊದಲು ಅವರು ಕ್ಷಮೆ ಕೇಳಲಿ.

**(ಗೊಂದಲ)**

**ಶ್ರೀ ಬಿ.ಎಸ್.ಸುರೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಮೊದಲು ಕ್ಷಮೆ ಕೇಳಲಿ. ನಂತರ ಮಾತಾಡಲಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ, ಅವರುಗಳು ನನಗೆ ಮಾತನಾಡಲು ಬಿಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪಃ–** ಮೊದಲು ಅವರು ಕ್ಷಮೆ ಕೇಳಲಿ, ಅವರು ಹೇಳಿರುವ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಆದರೆ ಇದನ್ನು ವಿಧಾನ ಪರಿಷತ್ತು ಎಂದು ಕರೆಯುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮೊದಲು House order ಗೆ ಬರಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮೊದಲು ಅವರು ಕ್ಷಮೆ ಕೇಳಲಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಅವರು ಮೊದಲು ಕ್ಷಮೆ ಕೇಳಿ ಅನಂತರ ಏನಾದರೂ ಮಾತನಾಡಲಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರಿಗೆ ಆ ಪದ ಬಳಸಿದರೆ ಅವರು ಸುಮ್ಮನೆ ಇರುತ್ತಾರೆಯೇ?

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ(ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, the House is not in order. ಮಾನ್ಯ ಸದಸ್ಯರುಗಳು ಸದನದ ಬಾವಿಯೊಳಗೆ ಧರಣಿ ನಡೆಸುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ಪೂರ್ವಭಾವಿ ಪ್ರಸ್ತಾವದ ಬಗ್ಗೆ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಪೂರ್ವಭಾವಿ ಪ್ರಸ್ತಾವ ಮಾಡುವುದಕ್ಕೆ ತಾವು ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಿ, Let him make and complete his submission. But, at the same time, ಯಾರ ಮೇಲೂ ಆರೋಪಗಳನ್ನು ಮಾಡಿ, ಮಾತನಾಡುವುದಕ್ಕೆ ಬರುವುದಿಲ್ಲ. In the meanwhile, ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯೊಳಗೆ ಧರಣಿ ನಡೆಸುತ್ತಾ, ನಮಗೆ ಮಾತನಾಡಲು ಅವಕಾಶವನ್ನು ಕೊಡಿ ಎಂದು ಕೇಳುವುದು ಎಷ್ಟು ಸಮಂಜಸವಾಗಿದೆ? ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಪೂರ್ವಭಾವಿ ಪ್ರಸ್ತಾವವನ್ನು ಮುಂದುವರೆಸಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಡುತ್ತೇವೆ. ಧರಣಿ ನಿರತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳುತ್ತಾರೆ. ಅವರ ಪಕ್ಷದ ಸದಸ್ಯರು ಅವರ ಮಾತನ್ನು ಕೇಳದಿದ್ದರೂ ನಾವು ಅವರ ಮಾತನ್ನು ಕೇಳುತ್ತೇವೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿನಿರತ ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.)**

**(ಗೊಂದಲ)**

**ಶ್ರೀ ಸಿದ್ದರಾಮಯ್ಯಃ–** ಸನ್ಮಾನ್ಯ ಸಭಾಪತಿಯವರೇ, ಇವರು ಬೆಂಕಿ ಹಚ್ಚುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದು ಬೇಡ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು ಯಾವ ರೀತಿ ಗಲಾಟೆ ಮಾಡುತ್ತಿದ್ದಾರೆ ಎನ್ನುವುದನ್ನು ತಾವು ನೋಡಿ. ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಅವರ ಪಕ್ಷದ ಯಾವ ಸದಸ್ಯರು ಕೇಳುತ್ತಿಲ್ಲ. ನಾವು ಕೇಳುತ್ತಿದ್ದೇವೆ.

**(ಗೊಂದಲ)**

**Sri SIDDARAMAIAH**:- It should be confined to only preliminary submission and should not go on merit.

**ಸಭಾಪತಿಯವರುಃ–** ಯಾವ ಕಾರಣದ ಹಿನ್ನೆಲೆಯಲ್ಲಿ ಈ ನಿರ್ಣಯದ ಮೇಲೆ ಚರ್ಚೆಗೆ ಅವಕಾಶವನ್ನು ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ವಭಾವಿ ಪ್ರಸ್ತಾವ ಮಾಡಿ ಮುಗಿಸುತ್ತಾರೆ. ನಾನು ಸಮಯವನ್ನು ನೋಟ್ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಕೇವಲ 4 ನಿಮಿಷಗಳು ಮಾತ್ರ ಉಳಿದಿದೆ. ಅವರು 4 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸುತ್ತಾರೆ. ಅನಂತರ ಸರ್ಕಾರಕ್ಕೆ ಅವಕಾಶವನ್ನು ನೀಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉಪಸ್ಥಿತರಿರಲಿಲ್ಲ. ಹಿಂದಿನ ಗೃಹ ಮಂತ್ರಿಗಳಾಗಿದ್ದ ಮಾನ್ಯ ಕೆ.ಜೆ.ಜಾರ್ಜ್‌ರವರು ಉಪಸ್ಥಿತರಿದ್ದರು. ‘ಹಿಂದೆ ಜೆ.ಎಂ.ಎಫ್.ಸಿ. ಕೋರ್ಟ್‌ನಲ್ಲಿ ತಮ್ಮ ಮೇಲೆ ಎಫ್.ಐ.ಆರ್. ಹಾಕಿದಂತಹ ಸಂದರ್ಭದಲ್ಲಿ ತಾವು ರಾಜಿನಾಮೆಯನ್ನು ಕೊಟ್ಟಿದ್ದಿರಿ,’ ಎಂದು ಕೇಳಿದ್ದೆ. ಆಗ ಅವರು ರಾಜಿನಾಮೆ ಕೊಟ್ಟ ನಂತರ ಸರ್ಕಾರ ಸದರಿ ಪ್ರಕರಣವನ್ನು ಸಿ.ಐ.ಡಿ.ಯವರಿಗೆ ವಹಿಸಿ, ತನಿಖೆ ಮಾಡಿಸಿ, ವರದಿಯನ್ನು ಪಡೆದುಕೊಂಡು, ಕೇವಲ 6 ವಾರಗಳೊಳಗೆ ಕ್ಲೀನ್ ಚಿಟ್ ನೀಡಲಾಗಿತ್ತು. ಅದು ಇರಲಿ. ಈಗ ಸುಪ್ರೀಂ ಕೋರ್ಟ್‌ನಲ್ಲಿ ಸಿ.ಬಿ.ಐ. ಮುಖಾಂತರ ಎಫ್.ಐ.ಆರ್. ದಾಖಲು ಮಾಡಲಾಗಿದೆ. ಆಗ ಜೆ.ಎಂ.ಎಫ್.ಸಿ. ಕೋರ್ಟ್‌ನಲ್ಲಿ ಎಫ್.ಐ.ಆರ್. ದಾಖಲಾದ ಸಂದರ್ಭದಲ್ಲಿ ಮಾನ್ಯ ಕೆ.ಜೆ. ಜಾರ್ಜ್‌ರವರು ರಾಜಿನಾಮೆಯನ್ನು ನೀಡಿದ್ದರು. ಕ್ಲೀನ್ ಚಿಟ್ ಬಂದ ಮೇಲೆ ಪುನಃ ಸಚಿವ ಸಂಪುಟಕ್ಕೆ ತೆಗೆದುಕೊಂಡಿದ್ದಾರೆ. ಈಗ ಸಿ.ಬಿ.ಐ. ಎಫ್.ಐ.ಆರ್. ದಾಖಲು ಮಾಡಿರುವುದರಿಂದ ಅವರು ರಾಜಿನಾಮೆ ನೀಡಲಿ. ಸುಪ್ರೀಂ ಕೋರ್ಟ್ ಕ್ಲೀನ್ ಚಿಟ್ ಕೊಟ್ಟ ನಂತರ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ತಮ್ಮ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲಿ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಇದು ಹೊಸ complaint ಅಲ್ಲ. ಹಳೆಯ complaint ಆಗಿದೆ. ಆಗ ರಾಜಿನಾಮೆ ಕೊಟ್ಟಿದ್ದರು. ಈಗ ಪುನಃ ರಾಜಿನಾಮೆ ಕೊಡುವ ಅವಶ್ಯಕತೆ ಏನಿದೆ?

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇರುವಾಗಲೇ ಅವರ ಪಕ್ಷದ ಸದಸ್ಯರು ಈ ರೀತಿ ಆಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯಃ–** ಮಾನ್ಯ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಅವರು ತಮ್ಮ ಮಾತುಗಳನ್ನು ಮುಗಿಸಿಬಿಡಲಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ನಮಗೆ ರಕ್ಷಣೆ. ಅವರು ಇಲ್ಲದಿದ್ದರೆ ಮುಗಿಯಿತು.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ನಾನು ಅವರಿಗೆಲ್ಲ ರಕ್ಷಣೆ ಕೊಡಲೇಬೇಕಾಗಿದೆ. ಮಾನ್ಯ ಈಶ್ವರಪ್ಪನವರಿಗೆ ವಿಶೇಷ ರಕ್ಷಣೆ ಕೊಡುತ್ತೇವೆ ಅದು ಬೇರೆ ವಿಚಾರವಾಗಿದೆ. ಆದರೆ, ಈ ರಾಜ್ಯದ ಮುಖ್ಯಮಂತ್ರಿಯಾಗಿ ಇಡೀ ರಾಜ್ಯದ ಆರೂವರೆ ಕೋಟಿ ಜನರಿಗೆ ರಕ್ಷಣೆ ಕೊಡಬೇಕಾಗಿದೆ. ಅದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಮಾನ್ಯ ಈಶ್ವರಪ್ಪನವರಿಗೆ ವಿಶೇಷ ರಕ್ಷಣೆ ಕೊಡುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಅವರು 'ಆರೋಪಿ ನಂಬರ್ ಒನ್' ಗೆ ಸಹ ರಕ್ಷಣೆ ಕೊಡುತ್ತಿದ್ದಾರೆ. ಅದು ನಮಗೆ ಬೇಸರದ ಸಂಗತಿಯಾಗಿದೆ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಈಗ ನಾನು ಮಧ್ಯ ಪ್ರವೇಶ ಮಾಡಿದರೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಅವರು ತಮ್ಮನ್ನು ಉದ್ದೇಶಿಸಿ ಮಾತನಾಡಿದರೆ ಒಳ್ಳೆಯದು.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಪೂರ್ಣಗೊಳಸುವವರೆಗೆ ಮಾನ್ಯ ಮುಖ್ಯಮಂತ್ರಿಗಳು ಮಧ್ಯೆಪ್ರವೇಶ ಮಾಡಬಾರದೆಂದು ನನ್ನ ಮನವಿ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನೋಡೋಣ. It depends upon the later developments.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು)ಃ-** ಸನ್ಮಾನ್ಯ ಸಭಾಪತಿಯವರೇ, ಅದು ಅವರು ಏನು ಮಾತನಾಡುತ್ತಾರೆ ಎನ್ನುವುದರ ಮೇಲೆ ನಿರ್ಧಾರವಾಗುತ್ತದೆ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಬೆರಸದೇ ಮಾತನಾಡಿದರೆ ನಾನು ಮಧ್ಯೆ ಪ್ರವೇಶಿಸುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಯಾವ ರೀತಿ ವಿಚಿತ್ರ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದಕ್ಕೆ ನಾನೊಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಜೆ.ಎಂ.ಎಫ್.ಸಿ. ಕೋರ್ಟಿನಿಂದ ಎಫ್.ಐ.ಆರ್. ದಾಖಲಾದ ಮೇಲೆ . . . . .

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಜೆ.ಎಂ.ಎಫ್.ಸಿ., ಕೋರ್ಟ್‌ನಿಂದ ಎಫ್.ಐ.ಆರ್. ದಾಖಲು ಮಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಜೆ.ಎಂ.ಎಫ್.ಸಿ., ಕೋರ್ಟ್‌ನಿಂದ ಎಫ್.ಐ.ಆರ್. ಹಾಕಿದ ಮೇಲೆ ಮಾನ್ಯ ಕೆ.ಜೆ.ಜಾರ್ಜ್‌ರವರು ರಾಜಿನಾಮೆ ಕೊಟ್ಟರು.

**ಶ್ರೀ ಎಂ.ಆರ್.ಸೀತಾರಾಂ:–** ಸನ್ಮಾನ್ಯ ಸಭಾಪತಿಯವರೇ, ಜೆ.ಎಂ.ಎಫ್.ಸಿ. ಕೋರ್ಟ್ ಎಫ್.ಐ.ಆರ್.ದಾಖಲು ಮಾಡುವುದಿಲ್ಲ. ಅವರು ದೂರು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಜೆ.ಎಂ.ಎಫ್.ಸಿ. ಕೋರ್ಟ್ ಎಫ್.ಐ.ಆರ್.ದಾಖಲು ಮಾಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಸರಿಯಾಗಿ ವಾಸ್ತವಾಂಶ ತಿಳಿಸಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ವಾಸ್ತವಾಂಶವನ್ನು ಅವರೇ ಹೇಳಲಿ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ವಾಸ್ತವಾಂಶವನ್ನು ನಾನು ಈಗ ಹೇಳುವುದಿಲ್ಲ. ಆಮೇಲೆ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ಈ ವಿಚಾರ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ಮಾನ್ಯ ಜಾರ್ಜ್‌ರವರೇ ಆ ವಿಚಾರವನ್ನು ಹೇಳಿದ್ದಾರೆ. ಅವರು ತಪ್ಪು ಹೇಳಿದ್ದಾರೆಯೇ?

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅವರು ಆಮೇಲೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ಈ ವಿಚಾರ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ಸದನದ ಮುಂದೆ, ಪತ್ರಕರ್ತರ ಮುಂದೆ ಮತ್ತು ಅಧಿಕಾರಿಗಳ ಮುಂದೆ ಮಾನ್ಯ ಜಾರ್ಜ್‌ರವರು, 'ಜೆ.ಎಂ.ಎಫ್.ಸಿ. ಕೋರ್ಟ್‌ನಲ್ಲಿ ಎಫ್.ಐ.ಆರ್. ಹಾಕಿದ ನಂತರ ನಾನೇ ರಾಜಿನಾಮೆ ಕೊಟ್ಟೆ' ಎಂದು ಹೇಳಿದರು.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅದು ಜೆ.ಎಂ.ಎಫ್.ಸಿ., ಕೋರ್ಟ್‌ನ ನಿರ್ದೇಶನದ ಮೇರೆಗೆ ಆಗಿದ್ದು, ಎಫ್.ಐ.ಆರ್. ದಾಖಲು ಮಾಡುವುದು ಪೊಲೀಸ್ ಠಾಣೆಯಲ್ಲಿಯೇ ಹೊರತು ಕೋರ್ಟ್‌ನಲ್ಲಿ ಅಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳುತ್ತಿಲ್ಲ. ಬೆಳಗ್ಗೆ ಮಾನ್ಯ ಜಾರ್ಜ್‌ರವರು ಏನು ಹೇಳಿದ್ದಾರೆ ಅದನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಸ್ವಇಚ್ಛೆ ಮೇರೆಗೆ ನಾನು ರಾಜಿನಾಮೆ ಕೊಟ್ಟೆ ಎಂದು ಅವರು ಹೇಳಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ಅಭಿವೃದ್ಧಿ ಸಚಿವರು)ಃ-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಅವಕಾಶವನ್ನು ನೀಡಿದರೆ ಇದರ ಬಗ್ಗೆ ನಾನು ಸ್ಪಷ್ಟೀಕರಣವನ್ನು ನೀಡುತ್ತೇನೆ. ನಾನು ಹೇಳಿದ ಯಾವುದೋ ಒಂದು ವಾಕ್ಯವನ್ನು ತೆಗೆದುಕೊಂಡು ಈ ರೀತಿ ಮಾತನಾಡಿದರೆ ಸರಿಯಾಗುವುದಿಲ್ಲ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಿದ ಮೇಲೆ ಮಾನ್ಯ ಕೆ.ಜೆ.ಜಾರ್ಜ್‌ರವರು ತಮ್ಮ ಹೇಳಿಕೆಯನ್ನು ನೀಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ತಾವೆಲ್ಲರೂ 3–4 ನಿಮಿಷಗಳ ಕಾಲ ಸುಮ್ಮನಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸುತ್ತಾರೆ. ಅವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದ ಮೇಲೆ ಆಡಳಿತ ಪಕ್ಷದವರಿಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇರುವವರೆಗೆ ಅವರುಗಳು ಸುಮ್ಮನೆ ಇರುತ್ತಾರೆ ಎನ್ನುವ ನಂಬಿಕೆ ನನಗೆ.

**ಶ್ರೀ ಸಿದ್ದರಾಮಯ್ಯಃ–** ಸನ್ಮಾನ್ಯ ಸಭಾಪತಿಯವರೇ, ಈಗ ಎಲ್ಲರೂ ಸುಮ್ಮನಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಈಗ ಸುಮ್ಮನೆ ಇದ್ದಾರೆ. ಬೆಳಗ್ಗೆ ಆಡಳಿತ ಪಕ್ಷದ ಸದಸ್ಯರು ಒಬ್ಬರಿಗಿಂತ ಒಬ್ಬರು ರುದ್ರಾವತಾರವನ್ನು ತಾಳಿದ್ದರು.

**ಶ್ರೀ ಹೆಚ್.ಎಂ.ರೇವಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಅವರ ಭಾಷೆ ಆ ರೀತಿ ಇರುತ್ತದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಅವರನ್ನು ಪ್ರಚೋದಿಸುತ್ತಾರೆ. ಆದ್ದರಿಂದ ಅವರು ಎದ್ದು ಮಾತನಾಡಲು ಪ್ರಾರಂಭಿಸುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂಃ–** ಸನ್ಮಾನ್ಯ ಸಭಾಪತಿಯವರೇ, ವಿನಾಕಾರಣ [XXX] ಎಂದು ಹೇಳಿದರೆ ಬೇಜಾರು ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಏನು ತಪ್ಪಾಗಿದೆ ಎಂದು ಹೇಳುವುದು ಬಿಟ್ಟು ನಾವು ಅವರಿಗೆ ಮುದ್ದು ಮಾಡಿ ಮುತ್ತು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುವಂತಹ ಎರಡು ಮೂರು ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕಾಗಿದೆ. ಸದರಿ ಪ್ರಕರಣವನ್ನು ಕಳೆದ ಬಾರಿ Criminal Investigation Department (C.I.D.)ಗೆ ವಹಿಸಿಕೊಟ್ಟಂಥ ಸಂದರ್ಭದಲ್ಲಿ ತೆಗೆದುಕೊಂಡಂತಹ ಕ್ರಮಕ್ಕೂ ಈಗ ಸುಪ್ರೀಂ ಕೋರ್ಟ್‌ನಲ್ಲಿ Central Bureau of Investigation (CBI) ನವರು ಎಫ್.ಐ.ಆರ್. ದಾಖಲು ಮಾಡಿದ ನಂತರ ತೆಗೆದುಕೊಂಡಿರುವ ರೂಪ ಈ ಎರಡನ್ನೂ ಅವರೇ ಹೋಲಿಕೆ ಮಾಡಿ ನೋಡಬೇಕಾಗಿದೆ. ಆಗ ರಾಜಿನಾಮೆಯನ್ನು ಕೊಟ್ಟು ತನಿಖೆ ನಡೆಸಿ, ಕ್ಲೀನ್ ಚಿಟ್ ತೆಗೆದುಕೊಂಡು ನಂತರ ಪುನಃ ಸಚಿವರಾಗಿ ಬಂದರು.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾವು ಕ್ಲೀನ್ ಚಿಟ್ ತೆಗೆದುಕೊಂಡಿದ್ದೇವೆಂದು ಹೇಳುವುದು ಸರಿಯಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕ್ಲೀನ್ ಚಿಟ್ ತೆಗೆದುಕೊಂಡಿರಿ. ನಾನು ಬೇಕು ಅಂತಲೇ ಆ ಪದವನ್ನು ಬಳಕೆ ಮಾಡುತ್ತಿದ್ದೇನೆ. ಸರ್ಕಾರದವರೇ ಸಿ.ಐ.ಡಿ.ಗೆ ಪ್ರಕರಣವನ್ನು ವಹಿಸಿಕೊಂಡಂತೆ ಮಾಡಿ, ತನಿಖೆ ಮಾಡಿಸಿದಂತೆ ಮಾಡಿ, FSL (Forensic Science

---

**[xxx] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

Laboratory) Report ಬರುವುದಕ್ಕೂ ಮುಂಚಿತವಾಗಿ ಕೇವಲ ಆರು ವಾರದಲ್ಲಿ ವರದಿಯನ್ನು ಪಡೆದುಕೊಂಡಿತು. ನಾನು ಕಾನೂನು ತಜ್ಞನಲ್ಲ. ಅವರು ಕಾನೂನು ತಜ್ಞರು. ಆರೋಪಿ 'ನಂಬರ್ ಒನ್' ಅನ್ನು ರಕ್ಷಣೆ ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಎರಡನ್ನೂ ಹೇಳಿದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಅವರು ಮಾಡಿರುವುದನ್ನು ನಾನು ಹೇಳುತ್ತಿದ್ದೇನೆ. ಅವರು ಏನೇನು ಮಾಡುತ್ತಿದ್ದಾರೆ ಎನ್ನುವುದನ್ನು ಇಡೀ ರಾಜ್ಯ ನೋಡುತ್ತಿದೆ. ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿಕೊಟ್ಟಾಗ ತೆಗೆದುಕೊಟ್ಟಂಥ ದಿಟ್ಟ ಹೆಜ್ಜೆಯನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ರಾಜಿನಾಮೆಯನ್ನು ಅವರೇ ಕೊಟ್ಟರೋ, ಸರ್ಕಾರವೇ ತೆಗೆದುಕೊಂಡಿತ್ತೋ ನನಗೆ ಗೊತ್ತಿಲ್ಲ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅವರೇ ರಾಜಿನಾಮೆಯನ್ನು ಕೊಟ್ಟರು.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಅವರೇ ಕೊಟ್ಟಿದ್ದರೆ ಬಹಳ ಸಂತೋಷ. ಆದರೆ, ಈಗ ಯಾಕೆ ರಾಜಿನಾಮೆ ನೀಡುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಂ.ಆರ್.ಸೀತಾರಾಂಃ-** ಈಗ ಅದರ ಅವಶ್ಯಕತೆ ಇಲ್ಲ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, ಅವರು ಯಾಕೆ ರಾಜಿನಾಮೆ ಕೊಡಬಾರದು ಎನ್ನುವುದನ್ನು ನಾವು ಆಮೇಲೆ ಹೇಳುತ್ತೇವೆ. ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಈ ನಿಲುವಳಿ ಸೂಚನೆಯನ್ನು ಏತಕ್ಕೋಸ್ಕರ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡಬೇಕಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ತಮಗೆ ಮನವರಿಕೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸದನ, ಅಧಿಕಾರಿಗಳು ಮತ್ತು ಕಾಂಗ್ರೆಸ್‌ನಲ್ಲಿರುವ ಬಹಳಷ್ಟು ಜನರಿಗೂ ಇದು ಮನವರಿಕೆಯಾಗಿದೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)ಃ-** ಸನ್ಮಾನ್ಯ ಸಭಾಪತಿಯವರೇ, ಅವರು ಏನು ತಪ್ಪು ಮಾಡಿಲ್ಲ ಎನ್ನುವುದರ ಬಗ್ಗೆ ನಮ್ಮೆಲ್ಲರಿಗೂ ಮನವರಿಕೆಯಾಗಿದೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri SIDDARAMAIAH**:- Let him (Sri K.S.Eshwarappa) complete his submission.

**ಸಭಾಪತಿಯವರುः–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದರಿ ನಿಲುವಳಿ ಸೂಚನೆಯನ್ನು ಯಾವ ಕಾರಣಗಳ ಹಿನ್ನೆಲೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ.

**ಶ್ರೀ ಕೆ.ಬಿ.ಶಾಣಪ್ಪः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಗ್ಗೆಯಿಂದ ಸದರಿ ನಿಲುವಳಿ ಸೂಚನೆಯನ್ನು ಏತಕ್ಕೋಸ್ಕರ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಮಧ್ಯದಲ್ಲಿ ಮಾತನಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು ಏತಕ್ಕೋಸ್ಕರ ಈ ರೀತಿ ಬದಲಾಗಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಕೆ.ಬಿ.ಶಾಣಪ್ಪः–** ಸನ್ಮಾನ್ಯ ಸಭಾಪತಿಯವರೇ, ನಾನು ಬದಲಾವಣೆ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಸದರಿ ನಿಲುವಳಿ ಸೂಚನೆಯನ್ನು ಏತಕ್ಕೋಸ್ಕರ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. You have to convince yourself.

**ಶ್ರೀ ಕೆ.ಎಸ್.ಈಶ್ವರಪ್ಪः–** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳೇ ಆರೋಪಿ ನಂಬರ್ ಒನ್ ಆಗಿರುವಂತಹ ಈ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ತಮ್ಮ ಸಚಿವ ಸಂಪುಟದಲ್ಲಿರುವ ವ್ಯಕ್ತಿಗೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದಾರೆ ಎನ್ನುವ ನೋವು ರಾಜ್ಯದ ಜನರಲ್ಲಿದೆ. ಮಾನ್ಯ ಗಣಪತಿಯವರು ಆ ಸಂದರ್ಭದಲ್ಲಿ ಮಾಡಿದಂತಹ ಸಿ.ಡಿ.ಯನ್ನು ಸರ್ಕಾರ ತೋರಿಸಿಬಿಡಲಿ. ಅವರು ಕರ್ನಾಟಕದ ಜನತೆಗೆ ಅರ್ಥವಾಗುವಂತೆ ಟಿ.ವಿ.ಮುಖಾಂತರ ಸುಮಾರು 33 ನಿಮಿಷಗಳ ಕಾಲ ಮಾತನಾಡಿದ್ದಾರೆ.

(ಮುಂದುವರಿದಿದೆ)

(931)13.11.2016–4.00–ಪಿಕೆ–ಕೆಎಸ್

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದುವರೆದಿದೆ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ತುಂಬಾ ಸ್ಪಷ್ಟವಾಗಿ, ಬಹಿರಂಗವಾಗಿ ತೋರಿಸಿಬಿಟ್ಟರೆ ಮಾನ್ಯ ಗಣಪತಿ ಅವರ ಪ್ರಕರಣದಲ್ಲಿ ಏನೇನು ನಡೆದಿದೆ ಎನ್ನುವುದು ಗೊತ್ತಾಗುತ್ತದೆ. ಎರಡನೆಯದಾಗಿ, ಮಾನ್ಯ ಗಣಪತಿಯವರು ಕೊಟ್ಟಂಥ ಸಂದರ್ಶನ ರಾತ್ರಿ ೮.೦೦ ಗಂಟೆಗೆ ದೃಶ್ಯ ಮಾಧ್ಯಮದಲ್ಲಿ ಪ್ರಸಾರವಾಗುತ್ತದೆ. ಅದಕ್ಕೂ ಮುಂಚೆ, ಗಣಪತಿಯವರ ಮೃತ ದೇಹ ಮಡಿಕೇರಿ ಪಟ್ಟಣದ ಒಂದು ಖಾಸಗಿ ಹೋಟೆಲ್‌ನಲ್ಲಿ ಪತ್ತೆಯಾಗುತ್ತದೆ. ಈ ರೀತಿ ನಡೆದಿರುವಂಥದ್ದು ನೋಡಿದರೆ ಇಲ್ಲಿ ಸಮಸ್ಯೆ ಇದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರ ಕುಟುಂಬದವರು, ನಮ್ಮಪ್ಪನನ್ನು ಸಾಯಿಸಿದ್ದಾರೆ, ಅದರ ಬಗ್ಗೆ ದೂರನ್ನು ತೆಗೆದುಕೊಳ್ಳಿ ಎಂದು ಪೋಲೀಸ್ ಠಾಣೆಗೆ ದೂರು ಕೊಡಲು ಹೋದಾಗ ಅವರು ದೂರನ್ನು ತೆಗೆದುಕೊಳ್ಳುವುದಿಲ್ಲ. ಸಾಮಾನ್ಯ ಒಬ್ಬ ಕಳ್ಳ pickpocket ಮಾಡಿದಾಗ ಆ ಕುರಿತು ದೂರನ್ನು ಕೊಟ್ಟರೆ ಅದನ್ನು ತೆಗೆದುಕೊಳ್ಳುತ್ತಾರೆ. ಇವರ ದೂರನ್ನು ಏಕೆ ತೆಗೆದುಕೊಳ್ಳಲಿಲ್ಲ? ಇದನ್ನು ನೋಡಿದರೆ ಇದರಲ್ಲಿ ಮಂತ್ರಿಗಳ influence ಇದೆ ಎಂದೆನಿಸುವುದಿಲ್ಲವೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ನ್ಯಾಯಯುತವಾಗಿರುವಂಥದ್ದೇ? ಇಂಥದ್ದು ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿರುವಂತಹ ಸಂದರ್ಭದಲ್ಲಿ ಮಾತ್ರ ನಡೆಯುವಂಥದ್ದು. ಮಾನ್ಯ ಸಭಾಪತಿಯವರೇ, ಕೋರ್ಟ್‌ನವರು ಹೇಳಿದ ಮೇಲೆ ಎಫ್‌ಐಆರ್ ಹಾಕುತ್ತಾರೆ. ಇದಾದ ನಂತರ ತನಿಖೆಯನ್ನು ನಡೆಸಲು ಸಿಐಡಿಗೆ ಸರ್ಕಾರ ಕೊಟ್ಟು, ೬ ವಾರಗಳಲ್ಲಿ ಸಿಐಡಿ ಯವರು clean chit ಎಂದು ವರದಿಯನ್ನು ಕೊಡುತ್ತಾರೆ. ನಂತರ ಮತ್ತೆ ಮಾನ್ಯ ಜಾರ್ಜ್ ಅವರನ್ನು ಸಚಿವಸಂಪುಟಕ್ಕೆ ಸಚಿವರಾಗಿ ತೆಗೆದುಕೊಳ್ಳುತ್ತೀರಿ. ಇದರ ಅರ್ಥ ಏನು? ಸಿಐಡಿ ತನಿಖೆಗೆ ಕೊಟ್ಟಿದ್ದೇ clean chit ಪಡೆದುಕೊಳ್ಳಲು ಎನ್ನುವುದು ಇದರಿಂದ ಅರ್ಥವಾಗುತ್ತದೆ. Clean chit ತೆಗೆದುಕೊಳ್ಳುವುದಕ್ಕೋಸ್ಕರವೇ ಸಿಐಡಿಗೆ ಕೊಡುತ್ತಾರೆ. Forensic Science laboratory report ೬ ತಿಂಗಳ ನಂತರ ಬರುತ್ತದೆ. ಮಂತ್ರಿಯನ್ನು ಮಾಡಿದಾಗ ಆ ರಿಪೋರ್ಟ್ ಕೂಡ ಬಂದಿರಲಿಲ್ಲ. ಸಿಐಡಿ ಯನ್ನು ಸಂಪೂರ್ಣ ದುರುಪಯೋಗ ಮಾಡಿಕೊಂಡಿದ್ದೀರಿ. ವ್ಯವಸ್ಥಿತವಾಗಿ ಮಾನ್ಯ ಜಾರ್ಜ್ ಅವರನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಸಿಐಡಿ ತನಿಖೆಗೆ ಸರ್ಕಾರ ಕೊಟ್ಟಿದೆ.

**ಸಭಾಪತಿಯವರು:-** ನಿಲುವಳಿ ಸೂಚನೆ ಅಡಿಯಲ್ಲಿ ಏಕೆ ಈ ವಿಷಯವನ್ನು ಚರ್ಚೆ ಮಾಡಬೇಕು ಎಂಬುದರ ಬಗ್ಗೆ ಅಷ್ಟೇ ಮಾತನಾಡಿ. We are not discussing on the merit of the case.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದೇ ವಿಷಯಕ್ಕೆ ಬರುತ್ತಿದ್ದೇನೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಇದನ್ನೇ ಮಾತನಾಡುತ್ತಿದ್ದಾರೆ. ಇದು ಬಿಟ್ಟು ಬೇರೆ ಏನು ಮಾಡುತ್ತಿದ್ದಾರೆ? ಇನ್ನೂ ಪ್ರಶ್ನೋತ್ತರ ತೆಗೆದುಕೊಳ್ಳುವುದಿದೆ. ದಯಮಾಡಿ ಮುಗಿಸುವುದಕ್ಕೆ ಹೇಳಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ವಿಷಯವನ್ನು ಏಕೆ ನಿಲುವಳಿ ಸೂಚನೆ ಅಡಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಅಷ್ಟೇ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–**ಮಾನ್ಯ ಸಭಾಪತಿಯವರೇ, ಮಾನ್ಯ ಕುಶಾಲಪ್ಪನವರು ಸುಪ್ರಿಂ ಕೋರ್ಟ್‌ಗೆ ಹೋಗದೇ ಇದ್ದಿದ್ದರೆ ಈ ಪ್ರಕರಣವನ್ನು ಪೂರ ಮುಚ್ಚಿ ಹಾಕಿದ ಹಾಗೆ ಆಗುತ್ತಿತ್ತು. ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿಯನ್ನು ಅವರ ಕುಟುಂಬದವರು ಸಲ್ಲಿಸಿದಾಗ ಸುಪ್ರೀಂ ಕೋರ್ಟ್, ಸಿಐಡಿ ತನಿಖೆಯಲ್ಲಿ ಆಗಿರುವಂತಹ ಕೆಲವು ಲೋಪದೋಷಗಳನ್ನು ಗಮನಿಸಿ, ಇಂಥಿಂಥ ಲೋಪದೋಷಗಳಾಗಿವೆ ಎನ್ನುವ ಕಾರಣದಿಂದಾಗಿ ಇದನ್ನು ಸಿಬಿಐ ತನಿಖೆಗೆ ಕೊಡುತ್ತದೆ. ಸಿಬಿಐ ನವರು ಶ್ರೀ ಜಾರ್ಜ್‌ರವರ ಮೇಲೆ ಎಫ್‌ಐಆರ್ ಹಾಕಿದೆ. ಎಫ್‌ಐಆರ್ ಹಾಕಿದ ತಕ್ಷಣ, ಎಫ್‌ಎಸ್‌ಎಲ್ ರಿಪೋರ್ಟ್‌ನ ವಿವರಗಳನ್ನು ತೆಗೆದುಕೊಂಡು ನೋಡಿದಾಗ ತುಂಬಾ ಸ್ಪಷ್ಟವಾಗಿ, ಒತ್ತಡದ ಮಧ್ಯೆ ಆಗಿರುವಂತಹ ಆತ್ಮಹತ್ಯೆಯನ್ನು, ಕೊಲೆಯನ್ನು ತಿರುಚಿ ಹೇಳುವ ಪ್ರಯತ್ನ ಮಾಡುತ್ತಿರುವುದು ಕಾಣುತ್ತಿದೆ ಎಂದು ಹೇಳಿದೆ. ದಿನಾಂಕ:24.8.2017ರ ವಿಜಯವಾಣಿ ಪತ್ರಿಕೆಯಲ್ಲಿ ‘ಮೊಬೈಲ್, ಕಂಪ್ಯೂಟರ್‌ಗಳಲ್ಲಿನ ಸಾಕ್ಷ್ಯಗಳ ನಾಶ’ ಎನ್ನುವ ಶೀರ್ಷಿಕೆಯ ಅಡಿಯಲ್ಲಿ ಅದರ ವಿವರವಾದ ವರದಿ ಬಂದಿದೆ. ಎಫ್‌ಎಸ್‌ಎಲ್ ವರದಿಯಲ್ಲಿ, ಮಾಹಿತಿ, ಸಾಕ್ಷ್ಯ ನಾಶವಾಗಿದೆ, pendrive ನಾಪತ್ತೆಯಾಗಿದೆ, ದಾಖಲೆಗಳು ನಾಪತ್ತೆಯಾಗಿವೆ ಎಂದಿದೆ. ಮಂತ್ರಿಗಳಾಗಿದ್ದುಕೊಂಡು ಅಧಿಕಾರ ಚಲಾಯಿಸಿದರೆ ದಾಖಲೆಗಳು ಉಳಿದುಕೊಳ್ಳುತ್ತವೆಯೇ? ಆ ದಾಖಲೆಗಳನ್ನು ಹಾಳು ಮಾಡುತ್ತಾರೆ ಎನ್ನುವ ಕಾರಣಕ್ಕೋಸ್ಕರವಾಗಿಯೇ ಇವರು ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ವಿಜಯವಾಣಿ ಪತ್ರಿಕೆಯಲ್ಲಿ, ‘ಸಾಕ್ಷ್ಯ ನಾಶದಲ್ಲೂ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೈಚಳಕ', 'ಗಣಪತಿ ಸಾವಿನ ಪ್ರಕರಣಕ್ಕೆ ಟ್ವಿಸ್ಟ್', 'ಸಿಸಿ ಕ್ಯಾಮೆರಾ ವಿಡಿಯೋ ನಾಶ', '14 ವರ್ಷಗಳ ಹಿಂದಿನ ವಿಡಿಯೋ ಸೇರ್ಪಡೆಗೊಂಡ ಸತ್ಯ ಬಹಿರಂಗ' ಎಂದು ವರದಿಯಾಗಿದೆ.

**ಶ್ರೀ ಸಿದ್ಧರಾಮಯ್ಯ:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು** ಪತ್ರಿಕೆಯಲ್ಲಿ ಬಂದಿದ್ದನ್ನು ಹೇಳುತ್ತಿದ್ದಾರಲ್ಲಾ?

**ಶ್ರೀ ಕೆ.ಎಸ್.ಈಶ್ವರಪ್ಪ:**-ಪತ್ರಿಕೆಯಲ್ಲಿ ಬರುವಂಥದ್ದನ್ನು ಕೋಟ್ ಮಾಡಬಾರದು ಎಂದು ಕಾನೂನು ಮಾಡಿಬಿಡಲಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಇದು evidence ಆಗುತ್ತದೆಯೇ? ನೀವು ಈ ಕುರಿತು ವಿವಿರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ?

**ಸಭಾಪತಿಯವರು:-** ಅದಕ್ಕೆ ಅವಕಾಶ ಕೊಟ್ಟಿಲ್ಲ. ಬೇಗ ಮುಗಿಸಿ ಎಂದು ಅವರನ್ನು ಹೇಳುತ್ತಿದ್ದೇನೆ.

**Sri SIDDARAMAIAH:-** Mr Chairman, Preliminary submission ಮಾಡುವಾಗ ಪತ್ರಿಕೆಗಳಲ್ಲಿ ಬರುವುದನ್ನು ನಮೂದು ಮಾಡುವುದು ಎಷ್ಟರಮಟ್ಟಿಗೆ ಸರಿ?

**ಸಭಾಪತಿಯವರು:-** ಈ ವಿಷಯವನ್ನು ನಿಲುವಳ ಸೂಚನೆ ಅಡಿ ಏಕೆ ತೆಗೆದುಕೊಳ್ಳಬೇಕು ಎಂದಷ್ಟೇ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಜೆ.ಜಾರ್ಜ್‌ರವರು ಮಂತ್ರಿಯಾಗಿ ಮುಂದುವರೆದರೆ ದಾಖಲೆಗಳು ನಾಶವಾಗುತ್ತವೆ. ಸಾಕ್ಷ್ಯಗಳನ್ನು ಮುಚ್ಚಿ ಹಾಕುತ್ತಾರೆ. ಈ ಪ್ರಕರಣವನ್ನು ಸಿಐಡಿ ತನಿಖೆಗೆ ಕೊಟ್ಟಾಗ ಇವರ ರಾಜೀನಾಮೆಯನ್ನು ಸರ್ಕಾರ ತೆಗೆದುಕೊಂಡಿತ್ತು. ಸಿಐಡಿ ಯಿಂದ Clean chit ತರಿಸಿಕೊಂಡಿರಿ. ಸಿಬಿಐ ನಿಂದಲೂ ಇವರಿಗೆ clean chit ಸಿಕ್ಕಿದರೆ ಮತ್ತೆ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಿ. Clean chit ಸಿಗುವ ತನಕ ಶ್ರೀ ಕೆ.ಜೆ.ಜಾರ್ಜ್ ರಾಜೀನಾಮೆ ಕೊಡಲಿ ಎಂದು ನಾವು ಕೇಳುತ್ತಿದ್ದೇವೆ. ನೀವು ಸಿಐಡಿ ಮೇಲೆ influence ಮಾಡಿ 6 ವಾರಗಳಲ್ಲಿ clean chit ತೆಗೆದುಕೊಂಡಿದ್ದೀರಿ. ಇದು ಅನ್ಯಾಯ. ಸಾಕ್ಷ್ಯಗಳನ್ನು ನಾಶ ಮಾಡುತ್ತಿದ್ದೀರಿ. ಮಾನ್ಯ ಜಾರ್ಜ್‌ರವರು ಮಂತ್ರಿಯಾಗಿ ಮುಂದುವರೆದರೆ ಇನ್ನೂ ಸಾಕ್ಷ್ಯಗಳು ನಾಶ ಆಗುತ್ತವೆ. ಆದ್ದರಿಂದ ಮಾನ್ಯ ಜಾರ್ಜ್‌ರವರನ್ನು ಕ್ಯಾಬಿನೆಟ್‌ನಿಂದ ಕೈಬಿಡಬೇಕು. ಸುಪ್ರಿಂ ಕೋರ್ಟ್

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಜಡ್ಜ್‌ಮೆಂಟ್‌ನಲ್ಲಿ ಇವರು ಸತ್ಯಹರಿಶ್ಚಂದ್ರರೆಂದು ತೀರ್ಪು ಬಂದರೆ ಇವರನ್ನು ಉಪಮುಖ್ಯಮಂತ್ರಿಯಾಗಿ ಮಾಡಿದರೂ ನಮ್ಮ ಅಭ್ಯಂತರ ಇಲ್ಲ. ಇವೆಲ್ಲ ಅಂಶಗಳ ಬಗ್ಗೆ ನಿಲುವಳಿ ಸೂಚನೆ ಅಡಿ ಪೂರ್ಣ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಾರ್ಜ್‌ರವರ ಹೆಸರು ಪ್ರಸ್ತಾಪ ಮಾಡಿರುವುದರಿಂದ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಅವರು ಮಾತನಾಡುವುದಕ್ಕೆ ಅಪೇಕ್ಷೆಪಟ್ಟರೆ ಮಾತನಾಡಬಹುದು ಎಂದು ಹೇಳಿದ್ದೆ. ಆನಂತರ ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳೋ ಅಥವಾ ಸಭಾನಾಯಕರೋ ಮಾತನಾಡಲಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸುಪ್ರಿಂ ಕೋರ್ಟ್ ಹೇಳಿರುವ ಅಂಶಗಳನ್ನು ಹೇಳಬಯಸುತ್ತಿದ್ದೇನೆ. *"...The CBI may complete the investigation..." "...It will be open to CBI to ascertain the nature of offence..."* Under Section 306 and Section 304 what is nature of offence mentioned in the FIR? ಅಂದರೆ ಇದರ ಅರ್ಥ ಏನು? ಅದು offence ಅಲ್ಲವೇ? ಇದು ಸೆಕ್ಷನ್ ೩೦೬ರ ಅಡಿ ಕೇಸ್ register ಆಗಿರುವುದರಿಂದ ದಯವಿಟ್ಟು ಮಾನ್ಯ ಜಾರ್ಜ್‌ರವರು ರಾಜೀನಾಮೆ ಕೊಡಬೇಕಾಗುತ್ತದೆ. ತನಿಖೆ ಮಾಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವ ಬಗ್ಗೆ, ಹೆಚ್ಚಿನ ವಿಚಾರಗಳನ್ನು ತಿಳಿಸಬೇಕಾಗಿರುವ ದೃಷ್ಟಿಯಿಂದ ಈ ವಿಷಯವನ್ನು ನಿಲುವಳಿ ಸೂಚನೆ ಅಡಿ ತಂದಿದ್ದೇವೆ. ಈ ನಿಯಮದ ಅಡಿಯಲ್ಲಿಯೇ ಚರ್ಚೆ ಮಾಡಲು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಗಣಪತಿ ಸ್ವಾಮಿನ ವಿಚಾರ ಈ ಸದನ ಮತ್ತು ಕೆಳಗಿನ ಮನೆಯಲ್ಲಿ ಸಾಕಷ್ಟು ಚರ್ಚೆ ಆಗಿದೆ. ಈ ಘಟನೆ ದಿನಾಂಕ:7.7.2016ರಲ್ಲಿ ನಡೆಯಿತು. ನಾನೂ ಸಹ ಈ ಘಟನೆಗೆ ಸಂಬಂಧಪಟ್ಟಂತೆ ವಿಷಾದ ವ್ಯಕ್ತಪಡಿಸಿದ್ದೇನೆ. ಅವರ ಸಾವಿಗೆ ಕಾರಣ ಏನು ಎಂಬುವ ವಿಚಾರ ಆಚೆ ಬರಬೇಕು. ಅವರ ಕುಟುಂಬದೊಡನೆ ಸಂತಾಪ ಹಂಚಿಕೊಂಡಿದ್ದೇನೆ. ಮಾನ್ಯ ಸಭಾಪತಿಯವರೇ, ನಾನು ಆವತ್ತು ಗೃಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿ ಆಗಿರಲಿಲ್ಲ. ನಾನು ಗೃಹ ಮಂತ್ರಿಯ ಹುದ್ದೆಯನ್ನು ಬಿಟ್ಟು 6 ತಿಂಗಳ ಆದಮೇಲೆ ಈ ಘಟನೆ ನಡೆದಿದೆ. ಆಗ ನಾನು ಬೆಂಗಳೂರು ನಗರ ಅಭಿವೃದ್ಧಿ ಮಂತ್ರಿಯಾಗಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೋ ಅದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ನಾನು ಎರಡು ಸದನಗಳಲ್ಲೂ ಅದಕ್ಕೆ ಉತ್ತರ ಕೊಟ್ಟಿರುವುದು ದಾಖಲೆಯಲ್ಲಿದೆ. ನಾನು merit ನ ವಿಚಾರದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗಾಗಲೇ ಸಿಬಿಐ ನವರು ತನಿಖೆ ನಡೆಸುತ್ತಿದ್ದಾರೆ. ಇದನ್ನು ನಾನು ಸ್ವಾಗತ ಮಾಡಿದ್ದೇನೆ. ನಿಜಾಂಶ ಹೊರಗಡೆ ಬರಲಿ. ಗಣಪತಿಯವರ ಸಾವಿಗೆ ಕಾರಣವೇನು, 'nature of death' ಅನ್ನು ಸಿಬಿಐ ನವರು ಕಂಡುಹಿಡಿಯುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು, ನಾನು ಹಿಂದೆ ರಾಜೀನಾಮೆ ಕೊಟ್ಟ ವಿಚಾರವನ್ನು ಹೇಳಿದರು. ಆವತ್ತು ನಮ್ಮ ಸರ್ಕಾರ ಪ್ರಕರಣವನ್ನು ಮಾರನೆಯ ದಿನವೇ ಸಿಐಡಿಗೆ ತನಿಖೆಗೆಂದು ಒಪ್ಪಿಸಿತು. ಆನಂತರ ಗಣಪತಿಯವರ ಮಗ ಶ್ರೀ ನೇಹಾಲ್ ಗಣಪತಿಯವರು, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಳ್ಳಲಿಲ್ಲ ಎಂದು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹೋಗುತ್ತಾರೆ. ಗಣಪತಿಯವರ ತಂದೆ ಕುಶಾಲಪ್ಪನವರು ಮೊದಲು ಏನು ಸ್ಟೇಟ್‌ಮೆಂಟ್ ಕೊಟ್ಟು ವರದಿ ಬಂತೋ ಅದರಲ್ಲಿ ಯಾರ ವಿಚಾರವಾಗಿಯೂ ಅವರು ಹೇಳಿಲ್ಲ, ಅವರು ಏನು ಹೇಳಿದರು ಎನ್ನುವುದು ದಾಖಲೆಯಲ್ಲಿದೆ. ನನ್ನ ವಿಚಾರ ಅದರಲ್ಲೆಲ್ಲಿಯೂ ಪ್ರಸ್ತಾಪ ಮಾಡಿಲ್ಲ. ನಂತರ ಗಣಪತಿಯವರ ಮಗ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹೋಗಿ, ಸಿಐಡಿ ತನಿಖೆ ಮಾಡಿದರೆ ಸತ್ಯಾಂಶ ಹೊರಗಡೆ ಬರುವುದಿಲ್ಲ ಎಂದು ಹೇಳಿದಾಗ, ಮ್ಯಾಜಿಸ್ಟ್ರೇಟ್ ಕೋರ್ಟ್‌ನವರು, ಸ್ಥಳೀಯ ಪೊಲೀಸರಿಗೆ ಕೊಡಿ ಎಂದು ಹೇಳಿದಾಗ, ಸಿಐಡಿ ತನಿಖೆಯಿಂದ ವಾಪಸ್ಸು ತೆಗೆದುಕೊಳ್ಳಲಾಯಿತು. ಇದನ್ನು ವಾಪಸ್ಸು ತೆಗೆದುಕೊಂಡ ಮೇಲೆ, ಹೈಕೋರ್ಟ್‌ನ ನ್ಯಾಯಾಧೀಶರು, ಉನ್ನತ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ದೂರು ಬಂದಿರುವುದರಿಂದ ಸ್ಥಳೀಯ ಪೊಲೀಸರಿಂದ ತನಿಖೆ ಮಾಡುವುದಕ್ಕಾಗುವುದಿಲ್ಲ, ಸಿಐಡಿ ಯಿಂದಲೇ ತನಿಖೆ ಆಗಬೇಕು ಎಂದು ಹೇಳಿದಾಗ, ಹೈಕೋರ್ಟ್‌ನ ಆದೇಶದ ಪ್ರಕಾರ ಸಿಐಡಿಯಿಂದಲೇ ತನಿಖೆ ಆಯಿತು.

(ಮುಂದು . . )

(932)13.11.2017 4.10ಡಿಎಸ್-ಕೆಎಸ್

**ಶ್ರೀ ಕೆ.ಜೆ.ಜಾರ್ಜ್(ಮುಂದು):-**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೈಕೋರ್ಟ್‌ನವರು ಇದು ಡಿಜಿಪಿ ಮತ್ತು ಐಜಿಪಿ ಅವರಿಗೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ತನಿಖೆಯಾಗಬೇಕೆಂದು ಹೇಳುತ್ತಾರೆ. ನಂತರ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಗಡುವು ಕೊಡುತ್ತಾರೆ. ಇಷ್ಟು ದಿವಸದೊಳಗೆ ನೀವು ಇದರ ವರದಿ ಕೊಡಬೇಕೆಂದು ಹೇಳುತ್ತಾರೆ. ನಂತರ ಸಿ.ಐ.ಡಿ. ಅವರು ತನಿಖೆ ಮಾಡುತ್ತಾರೆ. ಆ ಗಡುವಿನೊಳಗೆ ಅವರಿಗೆ ಮಾಡುವುದಕ್ಕಾಗಲಿಲ್ಲ. ಅವರು ಮತ್ತೆ ನಮಗೆ ಸಮಯಾವಕಾಶ ಕೊಡಿ ಎಂದು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹೋಗುತ್ತಾರೆ. ಅವರು ಮತ್ತೆ ಒಂದು ತಿಂಗಳು ಸಮಯಾವಕಾಶ ಕೊಡುತ್ತಾರೆ. ಆ ಸಮಯಾವಕಾಶದೊಳಗೆ ಸಿ.ಐ.ಡಿ. ಅವರು ತನಿಖೆ ಮಾಡಿ ಬಿ ರಿಪೋರ್ಟ್ ಕೊಡುತ್ತಾರೆ. ಶ್ರೀ ನೇಹಾಲ್ ಗಣಪತಿಯವರು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದೂರನ್ನು ಕೊಟ್ಟಿದ್ದರು ಸಹ ಅವರು ಆ 'ಬಿ ರಿಪೋರ್ಟ್' ಅನ್ನು ಚಾಲೆಂಜ್ ಮಾಡುವುದಿಲ್ಲ, ಅವರು ಅದನ್ನು ಒಪ್ಪಿಕೊಳ್ಳುತ್ತಾರೆ. ನಂತರ ಗಣಪತಿಯವರ ತಂದೆ ಶ್ರೀ ಕುಶಾಲಪ್ಪನವರು ಯಾರು ಮೊದಲು ಎಫ್.ಐ.ಆರ್.ನಲ್ಲಿ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದರು, ಅವರು ಹೈಕೋರ್ಟ್‌ನ Single Bench ನ ಮೊರೆ ಹೋಗಿ ಇದನ್ನು ಸಿ.ಬಿ.ಐ.ಗೆ ವಹಿಸಿ ಎಂದು ಹೇಳುತ್ತಾರೆ. ಈಗಾಗಲೇ ಸಿ.ಐ.ಡಿ. ಅವರು ತನಿಖೆ ಮಾಡುತ್ತಿರುವುದರಿಂದ ಹೈಕೋರ್ಟ್‌ನವರು Single Benchಗೆ ನೀಡುವುದರ ಬಗ್ಗೆ ಒಪ್ಪುವುದಿಲ್ಲ. ಅದರ ಮಧ್ಯದಲ್ಲಿ ಶ್ರೀ ಕೇಶವ್ ನಾರಾಯಣರವರು judicial commission ಸಮೇತ 'circumstance of death of Ganapathy' ಎಂದು ನಮ್ಮ ಸರ್ಕಾರದಿಂದ ನೇಮಕ ಮಾಡುತ್ತಾರೆ. ಅದು ಕೂಡ ನಡೆಯುತ್ತಿದೆ. ನಂತರ ಅವರು Division Bench ಗೆ ಹೋಗುತ್ತಾರೆ. Division Bench ನಲ್ಲೂ ಕೂಡ ಹೈಕೋರ್ಟ್‌ನವರು ಸಿ.ಬಿ.ಐ. ತನಿಖೆಗೆ ಒಪ್ಪುವುದಿಲ್ಲ. ನಂತರ ಅವರು ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ. ನಮ್ಮ ವಿರೋಧ ಪಕ್ಷದ ನಾಯಕರು ಯಾವ ಆದೇಶವನ್ನು ಉಲ್ಲೇಖ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರ ಹತ್ತಿರ ಸುಪ್ರೀಂ ಕೋರ್ಟ್ ಆದೇಶ ಇಲ್ಲದಿದ್ದರೆ ನಾನು ಅವರಿಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಸಭಾಪತಿಯವರೇ, ತಮಗೂ ಕೂಡ ಸುಪ್ರೀಂ ಕೋರ್ಟ್ ಆದೇಶವನ್ನು ಕಳುಹಿಸಿಕೊಡುತ್ತೇನೆ. ಸುಪ್ರೀಂ ಕೋರ್ಟ್‌ನವರು ಸ್ಪಷ್ಟವಾಗಿ ಏನು ಹೇಳುತ್ತಾರೆಂದರೆ, *'....without expressing any opinion on merits...'* ಅಂದರೆ, ಸಿ.ಐ.ಡಿ. ವರದಿಯಾಗಲಿ, ಯಾವುದೇ ವಿಚಾರದಲ್ಲಿ ಆಗಲಿ ಸಿ.ಐ.ಡಿ. ನೀಡಿರುವಂತಹ 'ಬಿ ರಿಪೋರ್ಟ್' ನಲ್ಲಿಯೇ ಇದು ಪೆಂಡಿಂಗ್ ಇರುತ್ತದೆ. ಮತ್ತೆ *'....The CBI may complete the investigation, as far as possible, within three months from the date of*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*receipt of a copy of the order. The investigation may be supervised by an officer of an appropriate rank, having regard to the nature of the present case. It will be open to the CBI to conduct investigation afresh or in continuation of the investigation already conducted. It will be open to the CBI to ascertain the nature of offence....'* ಇದು ಬಹಳ ಮುಖ್ಯ. *'....It will be open to the CBI to ascertain the nature of offence, if any....'* ಏನಾದರೂ ಆಗಿದೆಯೇ nature of offence ಎಂದು ಕೇಳುತ್ತಾರೆ. *'....committed and by whom.'* ಇದನ್ನು ಈಗ ಸಿ.ಬಿ.ಐ.,ಗೆ ಮೂರು ತಿಂಗಳೊಳಗಾಗಿ ವರದಿ ಕೊಡಿ ಎಂದು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, ನಾನು ಕೇಳುವುದೇನೆಂದರೆ, ಎರಡು ಕಡೆಯವರು ಆ ಕಡೆ ಈ ಕಡೆ ವಾದ ಮಾಡುವಾಗ ಅವರ ಪರವಾಗಿ ವಾದ ಮಾಡುತ್ತಾರೆ. *'We have given due consideration to the rival submissions and perused the record. It is well settled that prayer for transfer of investigation from State to CBI can be allowed only in exceptional circumstances where investigation done by the State does not inspire confidence. There are no fixed parameters to determine such exceptional circumstances. A Constitutional court, taking an overall view of the fact situation of a particular case, may find it just and proper to direct CBI investigation.'* ಈ ತರಹ ಅವರು ಹೇಳಿ ಇವತ್ತು ಸಿ.ಬಿ.ಐ.,ಗೆ ಕೊಟ್ಟಿದ್ದಾರೆ.

**ಶ್ರೀಮತಿ ಉಮಾಶ್ರೀ:–** ಮುಂದಿನ ವಿಷಯವನ್ನು ಓದಿ.

**ಸಭಾಪತಿಯವರು:–** ಯಾರು ಮಧ್ಯೆ ಮಾತನಾಡಬೇಡಿ. ಅವರ fluency ಹೋಯಿತು. ಅವರ argument cut ಆಯಿತು. ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri K.J. George**:- *'....having regard to the consideration of fair investigation. No doubt, directions for CBI investigation are not to be ordered just for the asking. Fairness to the accused and to the victim has to be carefully weighed.'* ಎಲ್ಲಾ ಹೇಳಿ merit ಮೇಲೆ ಹೋಗುತ್ತದೆಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೆ, ನಾನು ಏನು ಹೇಳುತ್ತೇನೆಂದರೆ, ಈಗ ತನಿಖೆಗೆ ಸಿ.ಬಿ.ಐ.ಗೆ ಕೊಟ್ಟಿದ್ದಾರೆ. ಸಿ.ಬಿ.ಐ. ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಯಾರು merit ಮೇಲೆ ಮಾತನಾಡುತ್ತಿದ್ದಾರೆ, ಈಗ ನಮ್ಮ ವಿರೋಧ ಪಕ್ಷದ ನಾಯಕರು 'ಕೊಲೆ' ಎಂದು ಹೇಳುತ್ತಿದ್ದಾರೆ. [xxx] ಯಾರು' ಎಂದು ಕೇಳುತ್ತಿದ್ದಾರೆ. ನನ್ನ ಮೇಲೆಯೂ ಹೇಳುತ್ತಿದ್ದಾರೆ. ಅವರ ಹತ್ತಿರ ಏನಾದರೂ ದಾಖಲೆಗಳು, ಪುರಾವೆಗಳಿದ್ದರೆ ದಯವಿಟ್ಟು ಸಿ.ಬಿ.ಐ.,ಗೆ ಕೊಡಲಿ. ಅವರು ತನಿಖೆಯನ್ನು ಮಾಡಲಿ. ಯಾರು ತಪ್ಪಿತಸ್ಥರು ಎಂದು ಅವರು ಹೇಳಲಿ. ಅಲ್ಲಿಯವರೆಗೆ ನಾವು ಈ ಸದನದಲ್ಲಿ ಕುಳಿತು ಇದರ ವಿಚಾರಣೆ ಮಾಡುವುದು, ತೀರ್ಪು ಕೊಡುವುದು, ದುರುದ್ದೇಶವಾಗುತ್ತದೆ. ಯಾವುದೋ 'ವಿಜಯವಾಣಿ' ಪತ್ರಿಕೆಯಲ್ಲಿ ಬಂದಿರುವುದು, ಯಾವುದೋ 'Times Now' news channel ನಲ್ಲಿ ಬಂದಿರುವುದು ದಾಖಲೆಯಾಗುತ್ತದೆಯೇ? 'ವಿಜಯವಾಣಿ' ಪತ್ರಿಕೆಯವರು ಮತ್ತು 'Times Now' channel ಅವರು ದಾಖಲೆಯನ್ನು ಕಳುಹಿಸಿ ಕೊಡಲಿ, ಏನೇ ದಾಖಲೆಗಳಿದ್ದರೂ ಕೂಡ ಕಳುಹಿಸಿ ಕೊಡಲಿ. ಯಾರೇ ತಪ್ಪು ಮಾಡಿರಲಿ, ಆ ತಪ್ಪು ಮಾಡಿರುವವರನ್ನು ಸಿ.ಬಿ.ಐ.,ನವರು ಕಂಡುಹಿಡಿಯಲಿ. ಸಿ.ಬಿ.ಐ.,ನವರಿಗೆ ಯಾವುದೇ ಒತ್ತಡವನ್ನು ತರದೆ, ಯಾವುದೇ ರೀತಿ ಅವರ ತನಿಖೆಯ ಮೇಲೆ ಪ್ರಭಾವ ಬೀರದೆ ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಬಹುಶಃ ನನಗನಿಸುವುದೇನೆಂದರೆ, ಅವರಿಗೆ ಸಿ.ಬಿ.ಐ. ತನಿಖೆಯ ಮೇಲೆ ನಂಬಿಕೆ ಇಲ್ಲವೆಂದು ಕಾಣುತ್ತದೆ. ಎಲ್ಲದಕ್ಕೂ ಸಿ.ಬಿ.ಐ., ತನಿಖೆಗೆ ವಹಿಸಿ ಎಂದು ಸುಮ್ಮನೆ ಹೇಳುತ್ತಾರೆ. ಶ್ರೀ ಡಿ.ಕೆ.ರವಿ ಅವರ ವಿಚಾರದಲ್ಲಿ ಏನಾಯಿತು? ಎರಡು ಸದನಗಳಲ್ಲಿಯೂ ಏನು ಮಾಡಿದರು? ಎರಡೂ ಸದನಗಳಲ್ಲಿಯೂ ಒಳಗೆ, ಹೊರಗೆ ಸಾಕಷ್ಟು ಗಲಾಟೆ ಮಾಡಿದರು. ಧರಣಿ ಕುಳಿತ್ತಿದ್ದರು. ಸಿ.ಬಿ.ಐ. ತನಿಖೆಯ ವರದಿಯನ್ನು ನೋಡಿದ್ದಾರೆಯೇ? ಆ ವರದಿಯಲ್ಲಿ ನನ್ನ ಮೇಲೆ ಪ್ಯಾರಾವೈಸ್ ರಿಮಾರ್ಕ್ಸ್

---

**[xxx] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿದ್ದಾರೆ. ನಾನೇನು ತಪ್ಪು ಮಾಡಿಲ್ಲ. ಆದರೂ ಮಾನ್ಯ ಸೋಮಣ್ಣನವರು ನಮ್ಮ ಸಂಸ್ಥೆ 40-50 ಕೋಟಿ ಆದಾಯದ ಮಟ್ಟಕ್ಕೆ ಬಂದಿದೆ ಎಂದು ಹೇಳಿದ್ದರು.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ನಾನು ಜಾರ್ಜ್ ಅವರ ಸಂಸ್ಥೆ ಎಂದು ಎಲ್ಲಿಯೂ ಹೇಳಲಿಲ್ಲ. ನಾನು ಹೇಳಿದ್ದು Embassy ಸಂಸ್ಥೆಯ ಬಗ್ಗೆ.

(ಗೊಂದಲ)

**ಶ್ರೀ ವಿ.ಸೋಮಣ್ಣ:-** ಹಾಗಿದ್ದರೆ ಅದು ನಿಮ್ಮದು ಎನ್ನುವುದಾದರೆ ಅದನ್ನು ಒಪ್ಪಿಕೊಳ್ಳಿ. ಅದಕ್ಕೇನು ತೊಂದರೆ ಇಲ್ಲ. ಮಾನ್ಯ ಸಭಾಪತಿಯವರೆ, ಇವರು ಮಾತ್ರ ಈ ಸದನವನ್ನು ತಪ್ಪು ದಾರಿಗೆ ಎಳೆಯಬಹುದೇ? ಬೇರೆಯವರು ಯಾರು ಮಾತನಾಡುವ ಹಾಗಿಲ್ಲ. ಇವರು ಏನು ಹೇಳಿದರೂ ನಾವು ಕೇಳಬೇಕು. ನಿಮ್ಮ ಹತ್ತಿರ ನಾನು ಯಾವಾಗ ಹೇಳಿದ್ದೆ ಎಂಬುದನ್ನು ಅವರು ಹೇಳಲಿ. ನಿಮಗೆ ಜಾರ್ಜ್ ಅವರು ಈ ರೀತಿ ತಪ್ಪು ಮಾಡಿದ್ದಾರೆ ಎಂದು ಹೇಳಿದ್ದೇನೆಯೇ?

**ಶ್ರೀ ಕೆ.ಜೆ.ಜಾರ್ಜ್:-** ನೀವು ಹೇಳಲಿಲ್ಲವೆ?

**ಶ್ರೀ ವಿ.ಸೋಮಣ್ಣ:-** ನಾನು Embassy ಸಂಸ್ಥೆ ಎಂದು ಹೇಳಿದೆ. ನಿಮ್ಮ ಮೇಲೆ ನಾನು ಹೇಳಲಿಲ್ಲ. Embassy ಎಂದು ಹೇಳಿದ್ದು. Embassy ಸಂಸ್ಥೆಗೆ ನೀವೇ ಪಾಲುದಾರರಾಗಿದ್ದರೆ, ನೀವು ಮಾಡಿದ್ದೇನು? ಹಾಗಾದರೆ ನೀವು ಅದನ್ನು ಮುಚ್ಚಿ ಹಾಕುತ್ತಿದ್ದೀರಿ. Embassy ಸಂಸ್ಥೆಯು ನಿಮ್ಮದೇ ಎಂಬುದನ್ನು ಒಪ್ಪಿಕೊಳ್ಳಿ. ನನ್ನ ಬಳಿ ಅದರ ಬಗ್ಗೆ ಸಾಕಷ್ಟು ಮಾಹಿತಿಗಳು ಇವೆ, ಅದರ ಬಗ್ಗೆಯೂ ಸದನದಲ್ಲೂ ಚರ್ಚೆಯಾಗಲಿ.

ಮಾನ್ಯ ಸಭಾಪತಿಯವರೆ, ಮಾನ್ಯ ಜಾರ್ಜ್‌ರವರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ನಾನು ಹೇಳುವುದೇನೆಂದರೆ, ನನಗೂ ಆ ಸಂಸ್ಥೆಗೆ ಸಂಬಂಧವಿಲ್ಲ ಎಂದು ಅವೊತ್ತು ಅವರು ಹೇಳಿದ್ದರು. ನನಗೂ ಆ ಸಂಸ್ಥೆಗೂ ಸಂಬಂಧವಿಲ್ಲ ಎಂದು ಹೇಳಿದವರು ಇವತ್ತು ಆ ಸಂಸ್ಥೆ ನಮ್ಮದು ಎಂದು ಹೇಗೆ ಹೇಳುತ್ತಿದ್ದಾರೆ? ಸಿ.ಬಿ.ಐ. ಏನು ಹೇಳಿದೆ ಎಂದು ಅವರು ಓದಲಿ. ಸಿ.ಬಿ.ಐ.,ನವರು ಎಫ್.ಐ.ಆರ್. ಅನ್ನು ಏಕೆ ಹಾಕಿದ್ದಾರೆ? ಹೊಟ್ಟೆಯಲ್ಲೊಂದು, ಹೊರಗಡೆಯೊಂದು ನಮ್ಮ ಹತ್ತಿರ ಇಲ್ಲ. ನಾವು ಏನೇ ಇದ್ದರೂ ಕೂಡ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೇಳತಕ್ಕಂಥ ಅಧಿಕಾರ ನಮಗಿದೆ. ನಮ್ಮ ಮಾಹಿತಿಯನ್ನು ನಾವು ಕೊಡುತ್ತೇವೆ. ಅದನ್ನು ಅವರೇ defend ಮಾಡಿಕೊಳ್ಳಲಿ. ನಾನು ಬೇಡ ಎನ್ನುವುದಿಲ್ಲ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಈಗ ಸಾಕಷ್ಟು ವಿಚಾರಗಳು ಚರ್ಚೆಯಾಗಿವೆ. Embassy Golf Links (EGL) ಸಂಸ್ಥೆಗೆ ನಾನೇ ಚೇರ್ಮನ್. Embassy ದೊಡ್ಡ ಸಂಸ್ಥೆ. ಅದರಲ್ಲಿ ಒಂದಕ್ಕೆ ನಾನೇ ಚೇರ್ಮನ್ ಎಂದು ಹೇಳಿದ್ದೇನೆ. ಆವತ್ತೇ ನಾನು ಹೇಳಿದ್ದೇನೆ, ನನ್ನ chairmanship ನಲ್ಲಿರುವ ಯಾವುದೇ ಸಂಸ್ಥೆಯನ್ನು ಸಹ sales tax ನವರು raid ಮಾಡಿಲ್ಲವೆಂದು ನಾನು ದಾಖಲೆಯಲ್ಲಿ ಹೇಳಿದ್ದೇನೆ. ನಾನು ಇಲ್ಲ ಎಂದು ಹೇಳುವುದಿಲ್ಲ. ನಾನು ಸಿ.ಬಿ.ಐ. ವರದಿ ಬಗ್ಗೆ ಹೇಳುತ್ತಿದ್ದೇನೆ. ಶ್ರೀ ಡಿ.ಕೆ.ರವಿ ಅವರ ವಿಚಾರದಲ್ಲಿ ಒಂದು ಪ್ಯಾರಾವನ್ನು ಓದಿ ಹೇಳುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಅದರಲ್ಲಿ ಏನು ಹೇಳಿದ್ದಾರೆಂದರೆ, ಅಂದಿನ ಗೃಹ ಸಚಿವರು ಇದಕ್ಕೆ ಯಾವುದೇ ಸಂಬಂಧವಿಲ್ಲ. ಅವರ ಯಾವುದೇ ಮಾಲೀಕತ್ವ ಸಂಸ್ಥೆ ಇದರಲ್ಲಿ ಭಾಗಿಯಾಗಿಲ್ಲ ಎಂದು clean chit ನೀಡಿದ್ದಾರೆ. ನನ್ನನು ಅವರು ಕರೆಯಿಸಿ ಮಾತನಾಡಿಸಿಲ್ಲ, ಸಿ.ಬಿ.ಐ.,ನವರು ನನ್ನನ್ನು ಒಂದು ದಿವಸ ಕೂಡ ಕರೆಸಲಿಲ್ಲ. ಅವರು ಆ ಪ್ಯಾರಾದಲ್ಲಿ ಹಾಕಿದ್ದಾರೆ. ನಾನೇನು ಹೇಳುತ್ತಿದ್ದೇನೆಂದರೆ, ಅವರು ಎಷ್ಟು ಕಾತುರರಾಗಿದ್ದಾರೆಯೋ ಅಷ್ಟೇ ನಾನೂ ಕಾತುರನಾಗಿದ್ದೇನೆ. ಶ್ರೀ ಗಣಪತಿಯವರ ಪ್ರಕರಣದಲ್ಲಿ ಏನಾದರೂ ತಪ್ಪಾಗಿದ್ದರೆ ಅಥವಾ ಯಾವುದಾದರು ಕಾರಣಗಳಿದ್ದರೆ ಅದು ಹೊರಗಡೆ ಬರಲಿ. ಅವರಿಗೆ ಅಷ್ಟು ಆತುರ ಏಕೆ? ಎರಡು-ಮೂರು ತಿಂಗಳಲ್ಲಿ ವರದಿ ಬರುತ್ತದೆ. As far as possible ಮೂರು ತಿಂಗಳಲ್ಲಿ ವರದಿ ಕೊಡುತ್ತೇವೆಂದು ಹೇಳಿದ್ದಾರೆ. ಸಿ.ಬಿ.ಐ. ಅವರ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ದಯವಿಟ್ಟು ಆದಷ್ಟು ಬೇಗ ವರದಿ ಕೊಡಿ ಎಂದು ಅವರು ಹೇಳಲಿ. ಯಾರು ತಪ್ಪಿತಸ್ಥರು ಎಂದು ಹೊರಗಡೆ ಬಂದರೆ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ. ದಯವಿಟ್ಟು ಒಬ್ಬರನ್ನು [xxx] ಎಂದು ನಾವು ಈ ಸದನದಲ್ಲಿ ತೀರ್ಮಾನ ಮಾಡುವುದಾದರೆ ನ್ಯಾಯಾಂಗ ಏಕೆ ಇರಬೇಕು? ಸಿ.ಬಿ.ಐ., ಸಿ.ಐ.ಡಿ. ಇಂತಹ ತನಿಖಾ ಸಂಸ್ಥೆ ಏಕೆ ಇರಬೇಕು? ಇವತ್ತು ಸಿ.ಐ.ಡಿ. ಅವರು ಏನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**[xxx] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

'ಬಿ ರಿಪೋರ್ಟ್' ಕೊಟ್ಟಿದ್ದಾರೆ ಸುಪ್ರೀಂ ಕೋರ್ಟ್‌ನವರು ಮೆರಿಟ್ ವಿಚಾರಕ್ಕೆ ಹೋಗಲಿಲ್ಲ. ಈಗ ಮರು ತನಿಖೆಯನ್ನು ಮಾಡುತ್ತಿದ್ದಾರೆ. ಸಿ.ಬಿ.ಐ. ಅವರು ಶ್ರೀ ನೇಹಾಲ್ ಗಣಪತಿಯವರು ಕೊಟ್ಟ ದೂರಿನ ಮೇಲೆಯೇ ತನಿಖೆಯನ್ನು ಮಾಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ಪ್ರಕಾರ continuation ಮಾಡುತ್ತಿದ್ದಾರೆ. ಆದ್ದರಿಂದ ತನಿಖಾ ವರದಿ ಬಂದ ಮೇಲೆ ಕುಳಿತು ಚರ್ಚೆ ಮಾಡೋಣ.

(ಮುಂದು)

933/13-11-2017/04-20/ಬಿಕೆಪಿ-ಜಿಆರ್

**ಶ್ರೀ ಎಂ.ಆರ್.ಸೀತಾರಾಮ್(ಸಭಾನಾಯಕರು)**:-ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಮಂಡನೆ ಮಾಡಿರುವ ನಿಲುವಳಿ ಸೂಚನೆಯನ್ನು ರದ್ದುಗೊಳಿಸಬೇಕು. ಈ ಕೆಳಗಿನ ಕಾರಣಗಳಿಂದ ಯಾವುದೇ ಕಾರಣಕ್ಕೂ ಅದು maintainable ಆಗುವುದಿಲ್ಲ. ಮಾನ್ಯ ಸಚಿವರಾದ ಶ್ರೀಯುತ ಜಾರ್ಜ್‌ರವರು ಸುಪ್ರೀಂ ಕೋರ್ಟ್ ತೀರ್ಪನ್ನು ವಿವರವಾಗಿ ಎಲ್ಲರಿಗೂ ತಿಳಿಸಿದ್ದಾರೆ. Rule 61(iii) of the Rules of Procedure and Conduct of Business in the Karnataka Legislative Council reads thus:-

> "The motion shall be restricted to a specific matter of recent occurrence."

ಇದು ಆಗಿ ಒಂದೂವರೆ ವರ್ಷವಾಗಿದೆ. ಹೀಗಾಗಿ ಇದು ಇತ್ತೀಚಿನದಲ್ಲ ಮತ್ತು there is no urgency.

Secondly, Rule 61(v) of the Rules of Procedure and Conduct of Business in the Karnataka Legislative Council reads thus:-

> "The motion shall not revise discussion on a matter which has been discussed in the same Session."

ಇದನ್ನು ಮೊದಲು ಎರಡುವರೆ ದಿವಸಗಳ ಕಾಲ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಮತ್ತೆ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರನೆಯದಾಗಿ, Rule 62 of the Rules of Procedure and Conduct of Business in the Karnataka Legislative Council reads thus:-

> "**62. Motion for discussion on matters before Tribunals, Commission etc**.,:- No motion which seeks to raise discussion on a matter pending before any statutory tribunal or statutory authority performing any judicial or quasi judicial functions or any commission or court of enquiry appointed to enquire into or investigate any matter shall ordinarily be permitted to be moved."

ಅಂದರೆ no motion should be accepted ಎಂದು ಇದೆ. ಹೀಗಾಗಿ, ಈ ಎಲ್ಲಾ ಕಾರಣಕ್ಕೆ ಇದನ್ನು ತಾವು ರಿಜೆಕ್ಟ್ ಮಾಡಬೇಕು, ಒಪ್ಪಿಕೊಳ್ಳಬಾರದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ State Forensic Science Laboratory ರವರು ದಿನಾಂಕ: 23-07-2016 ರಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಆ ಒಂದು ವರದಿ ಬಹಳ ಮುಖ್ಯವಾಗಿರುತ್ತದೆ. ಮಾನ್ಯ ಸಚಿವರಾದ ಶ್ರೀಯುತ ಜಾರ್ಜ್‌ರವರು ಮಾತನಾಡಿದ ಮೇಲೆ ನಾನು ಆ ವರದಿಯ ವಿವರವನ್ನು ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಅವರು 4ನೇ ಪ್ಯಾರಾದಲ್ಲಿ ಏನು ಹೇಳುತ್ತಾರೆಂದರೆ:-

> "4. The complete details of deleted files in 320 GB WD Digital hard disk article marked as D1, is as follows …" ಎಂದು ಹೇಳಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಮ್:-** ಮಾನ್ಯ ಸಭಾಪತಿಯವರೇ, ಅದು ಸುಪ್ರೀಂ ಕೋರ್ಟ್ ಆರ್ಡರ್‌ನಲ್ಲಿ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ**:- ನಾನು ಆ ವಿಷಯವನ್ನು ಹೇಳುತ್ತಿಲ್ಲ. ನಾನು ಸುಪ್ರೀಂ ಕೋರ್ಟ್‌ನಲ್ಲಿ ಯಾವ ಒಂದು ವಿಚಾರವನ್ನು observe ಮಾಡಿದ್ದಾರೆಂದು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಮ್**:- ಇಲ್ಲ ಸರ್, ಅದು ಫೈಂಡಿಂಗ್ ಅಲ್ಲ. ಇದು ವಾದಕ್ಕೆ ಇವರು ಕೊಟ್ಟಿರುವುದಾಗಿದೆ. It's not a finding.

**ಶ್ರೀ ರಾಮಚಂದ್ರಗೌಡ**:- ನಮ್ಮ ರಾಜ್ಯದ State Forensic Science Laboratory ನವರು ಕೊಟ್ಟಿರುವಂತಹ ವರದಿಯಾಗಿದೆ.

**ಶ್ರೀ ಎಂ.ಆರ್.ಸೀತಾರಾಮ್:**- ಇದು ಫೈಂಡಿಂಗ್ ಅಲ್ಲ. ಇದು ವಾದಕ್ಕೆ ಇವರು ಕೊಟ್ಟಿರುವುದಾಗಿದೆ. Hon'ble Member cannot rely on that.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾನಾಯಕರು ಸ್ವಲ್ಪ ಸುಮ್ಮನಿರಬೇಕು.

**ಶ್ರೀ ಕೆ.ಜೆ.ಜಾರ್ಜ್**:- ಅದು ಸುಪ್ರೀಂ ಕೋರ್ಟ್ ಆರ್ಡರ್. ಆರ್ಡರ್ ಪ್ರಮುಖವಾದುದಾಗಿದೆ. (ನೀವು ಅದರ ಮೆರಿಟ್ ಮೇಲೆ ಹೋಗುವುದಿಲ್ಲವೆಂದು ಹೇಳಿದ ಮೇಲೆ) ಸುಪ್ರೀಂ ಕೋರ್ಟ್ ಆರ್ಡರ್‌ನಲ್ಲಿನ ಮೆರಿಟ್ ಮೇಲೆ ಹೋಗುತ್ತಿಲ್ಲವೆಂದು ಹೇಳಿದ ಮೇಲೂ ನೀವು ಈ ರೀತಿ ಮಾತನಾಡುತ್ತಿದ್ದೀರಿ.

**ಶ್ರೀ ರಾಮಚಂದ್ರಗೌಡ**:- ಮೆರಿಟ್ ಮೇಲೆ ಹೋಗುತ್ತಿಲ್ಲ. ಇವತ್ತು ನಾವು ತಂದಿರುವಂತಹ ವಿಚಾರ ಚರ್ಚೆಗೆ ಯಾವ ರೀತಿಯಾಗಿ ಅರ್ಹತೆ ಇದೆ ಎಂದು ಹೇಳಲಿಕ್ಕೆ ಹೊರಟಿದ್ದೇನೆ.

**ಶ್ರೀ ಎಂ.ಆರ್. ಸೀತಾರಾಂ**:- ಇದು ಕೇಸ್‌ನಲ್ಲಿ ಯಾರೋ ಒಬ್ಬರು ಕೊಟ್ಟಿರುವಂತಹ ಸಬ್‌ಮಿಷನ್ ಅಷ್ಟೇ ಆಗಿದೆ. This is not a finding of the Court.

**Sri RAMACHANDRA GOWDA:-** Mr.Chairman, Sir, the report further reads thus:-

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"a) 100 E-mail related files are deleted from the disk, the same is enclosed in A3.a."

**ಶ್ರೀ ಐವನ್ ಡಿ. ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರಿಗೆ ಪದೇ ಪದೇ ಈ ವಿಷಯವನ್ನು ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಹೇಗೆ? ನಮಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ. ನಾವು ಸಹ ಮಾತನಾಡುತ್ತೇವೆ.

**Sri RAMACHANDRA GOWDA:-** Mr.Chairman, Sir, the report further reads thus:-

"b) 2,699 MS Word files are deleted from the disk, the same is enclosed in A3.b.

c) 9910 MS Excel files are deleted from the disk, the same is enclosed in A3.c.

d) 145 PDF files are deleted from the disk, the same is enclosed in A3.d.

e) 2,500 Image files are deleted from the disk, the same is enclosed in A3.e."

ಈ ರೀತಿಯಾಗಿ ಅನೇಕ ವಿಚಾರಗಳನ್ನು ಏನು ತೆಗೆದುಬಿಟ್ಟಿದ್ದಾರೆ, ಏನನ್ನು ಮರೆಮಾಚಿದ್ದಾರೆ, ಆ ಒಂದು ಹಿನ್ನೆಲೆಯೊಳಗೆ ಸುಪ್ರೀಂ ಕೋರ್ಟ್ . .

**(ಗೊಂದಲ)**

**ಸಭಾಪತಿಯವರು:-** ನಾನು ರೂಲಿಂಗ್ ಕೊಡುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಅವರಿಗೆ ಏನೇನೋ ಹೇಳಲಿಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗ ಸಭಾನಾಯಕರು ಹೇಳಿದರು. . .

**(ಗೊಂದಲ)**

**ಶ್ರೀ ಬಿ.ಜೆ. ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸುಪ್ರೀಂ ಕೋರ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ " However, the FSL report was filed in the Court only in April, 2017." ಅಂದರೆ, after deletion, FSL report ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. FSL report ಅನ್ನು ಸುಪ್ರೀಂ ಕೋರ್ಟ್‌ನಲ್ಲಿ ಫೈಲ್ ಮಾಡಿದ್ದಾರೆ ಎನ್ನುವ ದಾಖಲೆ ಇದೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಒಬ್ಬರಾದ ಮೇಲೆ ಒಬ್ಬರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಹೇಗೆ? ವಿರೋಧ ಪಕ್ಷದ ವತಿಯಿಂದ ಒಬ್ಬರಿಗೆ ಅವಕಾಶವನ್ನು ಕೊಡಬೇಕು. ತಾವು ಎಲ್ಲರಿಗೂ ಅವಕಾಶ ಕೊಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಐವನ್ ಡಿ. ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ಸದನದ ಮುಂದೆ ಬೇರೆ ವಿಚಾರಗಳು ಇಲ್ಲವೇ?

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್:-** ನೋಡಿ, ನಿಮ್ಮ ಹತ್ತಿರವಿರುವ ಎಲ್ಲಾ ದಾಖಲೆಗಳನ್ನು ಸಿಬಿಐ ವಿಚಾರಣೆಗೆ ತೆಗೆದುಕೊಂಡು ಹೋಗಿ ಕೊಡಿ, ಯಾರು ಬೇಡವೆಂದು ಹೇಳುತ್ತಾರೆ. ನೀವು ಇಲ್ಲಿ investigation ಮಾಡುತ್ತಿದ್ದೀರಿ. ಇದೆಲ್ಲವನ್ನು ನೋಡಿ ಸಿ.ಬಿ.ಐ., ನವರು investigation ಮಾಡಲಿ. ಶ್ರೀಯುತ ಪುಟ್ಟಸ್ವಾಮಿಯವರು ಇದೆಲ್ಲವನ್ನು ತೆಗೆದುಕೊಂಡು ಹೋಗಿ ಸಿಬಿಐ.ನವರಿಗೆ ಕೊಡಲಿ. ಅವರು reinvestigate ಮಾಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ನಾನು ಕೋರ್ಟ್‌ನಲ್ಲಿ ಹೇಳಿರುವುದನ್ನು ಹೇಳಿದೆ. Cognizance ಅನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳಲಿಲ್ಲ. Cognizance ಅನ್ನು ಸಹ ತೆಗೆದುಕೊಂಡಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್:-** ಕೋರ್ಟ್ ಆರ್ಡರ್ ಸ್ಪಷ್ಟವಾಗಿದೆ.

**ಶ್ರೀ ಬಿ**.ಜೆ.ಪುಟ್ಟಸ್ವಾಮಿ:- ಸುಪ್ರೀಂ ಕೋರ್ಟ್‌ನಲ್ಲಿ Cognizance ಅನ್ನು ತೆಗೆದುಕೊಂಡಿದ್ದಾರೆ. ಅದನ್ನು ಅವರು observe ಮಾಡಿದ್ದಾರೆ.

**ಶ್ರೀ ಕೆ**.ಜೆ.ಜಾರ್ಜ್:- ಮೆರಿಟ್ ಮೇಲೆ ಹೋಗುವುದಿಲ್ಲವೆಂದು ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ. ನೀವು ಮೆರಿಟ್ ಮೇಲೆ ಹೋಗುತ್ತೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದು ಕಳೆದ ಅಧಿವೇಶನದಲ್ಲಿ ಚರ್ಚೆಯಾಗಿದೆ, ಮತ್ತೆ ಚರ್ಚೆಗೆ ಬರುವುದು ಅವಶ್ಯಕತೆ ಇಲ್ಲವೆಂದು ಒಂದು ವಿಚಾರವನ್ನು ಹೇಳಿದರು. ಎರಡನೆಯದಾಗಿ, ಇದು ಇತ್ತೀಚೆಗೆ ಆಗಿರುವಂತಹ ವಿಷಯವಲ್ಲವೆಂದು ಹೇಳಿದರು. ಇಲ್ಲಿನ ಪ್ರಶ್ನೆ ಏನೆಂದರೆ, ಸುಪ್ರೀಂ ಕೋರ್ಟ್‌ನವರು ಸಿ.ಬಿ.ಐ.,ಗೆ ಕೊಟ್ಟಿರುವುದು ಇತ್ತೀಚೆಗೆ. ಸಿಬಿಐ.ನವರು ಎಫ್.ಐ.ಆರ್., ಹಾಕಿರುವುದು ಇತ್ತೀಚೆಗೆ. 'ಆರೋಪಿ ನಂ.1' ಆಗಿರುವುದು ಇತ್ತೀಚೆಗೆ. ಸಿ.ಬಿ.ಐ.,ಗೆ ಕೊಟ್ಟ ನಂತರ 'ಆರೋಪಿ ನಂ.1' ಮಾಡಿರುವುದು ಇತ್ತೀಚೆಗೆ.

**(ಗೊಂದಲ)**

**ಶ್ರೀ ಐವನ್ ಡಿ. ಸೋಜಾ:-** ಅದು ಬೇರೆ ಕೇಸ್ ಅಲ್ಲ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಮ್:-** ಅದು ಬೇರೆ ಕೇಸ್ ಅಲ್ಲ. ಅದು ಸಹ ಇದೇ ಕೇಸ್ ಆಗಿದೆ.

**ಶ್ರೀ ಸಿದ್ದರಾಮಯ್ಯ:-** ಇದನ್ನು ಮಡಿಕೇರಿ ಪೋಲಿಸ್ ಸ್ಟೇಷನ್‌ನಲ್ಲಿ ಹಾಕಿದ್ದೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಹೌದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಐವನ್ ಡಿ. ಸೋಜಾ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರಿಗೆ ಮಾತನಾಡಲಿಕ್ಕೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ಇನ್ನು ಅವರಿಗೆ ಎಷ್ಟು ಸಮಯವನ್ನು ಕೊಡುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಹೇಳಿರುವ ಅಂಶಗಳ ಬಗ್ಗೆ ಹೇಳಲಿಕ್ಕೆ ಹೊರಟಿದ್ದೇನೆ. ಇದು ಎರಡು ಅಧಿವೇಶನಗಳ ಮುಂಚೆಯೇ ಸಹ ಈ ಪ್ರಕರಣದ ಬಗ್ಗೆ ಚರ್ಚೆಯಾಗಿತ್ತು.

**(ಗೊಂದಲ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ನಾವು ಅದೇ ವಿಷಯಕ್ಕೆ ಬಂದಿದ್ದೇವೆ. ಇಲ್ಲಿ ಸುಪ್ರೀಂ ಕೋರ್ಟ್ ನಡೆದ ರೀತಿಯಲ್ಲಿಯೇ ಆಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಆ ಪ್ರಾಮಾಣಿಕ ಅಧಿಕಾರಿ ನೇಣು ಹಾಕಿಕೊಂಡು ಸತ್ತು ಹೋದನೋ, ಕೊಲೆ ಮಾಡಿದ್ದೋ? ಇಲ್ಲಿ ಇವರ ಪರಿಸ್ಥಿತಿಯನ್ನು ನೋಡಿದರೆ ನಾಳೆ ನಮಗೂ ಆ ಸ್ಥಿತಿ ಬರುತ್ತದೆಯೋ ನಮಗೇ ಗೊತ್ತಿಲ್ಲ. ಇವರು ನಮಗೆ ಇಲ್ಲಿ ಮಾತನಾಡಲಿಕ್ಕೆ ಬಿಡದಿದ್ದರೆ ನಾವು ಇನ್ನೇನು ಮಾಡಬೇಕು?

**(ಗೊಂದಲ)**

ಅಲ್ಲಿ ನೋಡಿ, ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಅವರು ಕೇಳುತ್ತಿಲ್ಲ. ನಮ್ಮ ಪ್ರಶ್ನೆ ಬಂದಿರುವುದು ಅದೇ. ನಾನು ಮುಖ್ಯಮಂತ್ರಿ, ಎಂಎಲ್ಎ/ಎಂಎಲ್‌ಸಿ ಎಲ್ಲರೂ ನನ್ನ ಮಾತನ್ನು ಕೇಳುತ್ತಾರೆ,. ಪಕ್ಷ ನನ್ನ ಕಂಟ್ರೋಲ್‌ನಲ್ಲಿ ಇದೆ ಎಂದು ತಾವು ತಿಳಿದುಕೊಂಡಿದ್ದೀರಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಈ ಒಂದು ವ್ಯವಸ್ಥೆಯೊಳಗಡೆ ಇದು ಸರಳವಾಗಿ ನಡೆಯಬೇಕೆನ್ನುವ ಕಾರಣಕ್ಕೋಸ್ಕರ ಅವರಿಗೆ ಡಿಸ್ಟರ್ಬ್ ಮಾಡಬೇಡಿ ಎಂದು ಹೇಳಬಹುದು ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮ್ಮ ಮಾತನ್ನು ಅವರು ಕೇಳುವುದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಯಾರು ಕೇಳುವುದಿಲ್ಲ. ಈಗ ಕೇಳುವುದಕ್ಕೆ ಅವರು ಕುಳತಿರುವುದಾಗಿದೆ. ಇಲ್ಲವೆಂದರೆ ನೀವು ಎಲ್ಲಿ ಮಾತನಾಡುತ್ತಿದ್ದೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಬೆಳಗ್ಗೆ ನೂರು ಬಾರಿ ಈ ರೀತಿಯಲ್ಲಿ ಮಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ನಾನು ಹೇಳರುವುದಕ್ಕೆ ಅವರು ಕುಳತಿರುವುದಾಗಿದೆ. ಇಲ್ಲವೆಂದರೆ ನೀವು ಮಾತನಾಡಲಿಕ್ಕೆ ಎಲ್ಲಿ ಆಗುತ್ತಿತ್ತು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಬೆಳಗ್ಗೆ ಅವರು ಕೇಳುತ್ತಿಲ್ಲ. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದಾಗಿದೆ. ನೀವು ಬರುವವರೆಗೂ ಸಹ ಬೆಳಗ್ಗೆಯಿಂದಲೂ ಸಹ ಇದೇ ರೀತಿ ಮಾಡುತ್ತಿದ್ದಾರೆ. ಇದನ್ನು ಯಾವ ರೀತಿ ಫೇಸ್ ಮಾಡಬೇಕೆಂದು ನಮಗೆ ಗೊತ್ತಿದೆ. ಇಂತಹ 100 ಜನರನ್ನು ಫೇಸ್ ಮಾಡಿರುವ ಅಭ್ಯಾಸ ನಮಗಿದೆ. ಮಾಡಿದ್ದೇವೆ.

**(ಗೊಂದಲ)**

ಇದು ಇತ್ತೀಚೆಗೆ ಸುಪ್ರೀಂ ಕೋರ್ಟ್ ಸಿ.ಬಿ.ಐ. ತನಿಖೆಗೆ ಕೊಟ್ಟ ನಂತರ ಆಗಿರುವಂತಹ ವಿಚಾರ ಆಗಿರುವುದರಿಂದ ಇಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಸಿಐಡಿ ಅವರಿಂದ 'ಬಿ' ರಿಪೋರ್ಟ್ ಬಂದ ನಂತರ ಅಗಿರುವಂತಹ ದೂರು ಇದಾಗಿದೆ. ಅದಕ್ಕೋಸ್ಕರ ನಾನು ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಶ್ರೀಯುತ ಕುಶಾಲಪ್ಪನವರು ಈ ವಿಚಾರವಾಗಿ ಒಂದು ವೇಳೆ ಸುಪ್ರೀಂ ಕೋರ್ಟ್‌ಗೆ ಹೋಗಲಿಲ್ಲವೆಂದರೆ ಈ ವಿಚಾರ ಮುಚ್ಚಿ ಹೋಗುತ್ತಿತ್ತು. ಅದಕ್ಕೋಸ್ಕರ ನಾವು ಏನು ಹೇಳುತ್ತಿದ್ದೇವೆಂದರೆ ಅನೇಕ ಅಂಶಗಳು, ದಾಖಲೆಗಳು. . ಮಾನ್ಯ ಶ್ರೀ ಜಾರ್ಜ್ ರವರು ರಾಜೀನಾಮೆ ಕೊಡಲಿಲ್ಲವೆಂದರೆ ಈ ದಾಖಲೆಗಳನ್ನು ಮುಚ್ಚಿ ಹಾಕುತ್ತಾರೆ. ಇದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ ಅವರ ರಾಜೀನಾಮೆಯನ್ನು ತೆಗೆದುಕೊಳ್ಳಿ. ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ಬಂದ ನಂತರ ಅವರು ತಪ್ಪಿತಸ್ಥರಲ್ಲವೆಂದರೆ, ಆಗಲೇ ಅವರನ್ನು ಮಂತ್ರಿ ಮಾಡಿ. ಅದಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇವರು ಈ ನಿಲುವಳಿ ಸೂಚನೆಯನ್ನು ಏನು ತಂದಿದ್ದಾರೆ, ಇದು ಮೇಲ್ನೋಟಕ್ಕೆ ಚರ್ಚೆಗೆ ಯೋಗ್ಯವಲ್ಲ. ಇದು ಒಂದು ವಿಚಾರ. ಎರಡನೆಯದಾಗಿ, ಈಗಾಗಲೇ ನಮ್ಮ ಸಭಾನಾಯಕರು ಇದನ್ನು ಏತಕ್ಕೆ ಚರ್ಚೆಗೆ ತೆಗೆದುಕೊಳ್ಳಬಾರದು ಎನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಮಾವಳಿಗಳೊಂದಿಗೆ ಉಲ್ಲೇಖ ಮಾಡಿ ಪ್ರಸ್ತಾಪ ಮಾಡಿದ್ದಾರೆ. ನಿಯಮ 61 ಮತ್ತು 62 ಈ ಎರಡು ನಿಯಮಗಳನ್ನು ಸಹ ಉಲ್ಲೇಖ ಮಾಡಿ ಹೇಳಿದ್ದಾರೆ. ಇದನ್ನು ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಇವರು ರಾಜೀನಾಮೆ ಕೊಡಬೇಕು, ಎಫ್.ಐ.ಆರ್., ಆಗಿದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಈ ದೇಶದಲ್ಲಿ ಎಫ್.ಐ.ಆರ್., ಆಗಿರುವಂತಹವರು ಅನೇಕ ಜನರು ಇವತ್ತು ಕೂಡ ಅಧಿಕಾರದಲ್ಲಿದ್ದಾರೆ. ಕೇಂದ್ರ ಸರ್ಕಾರದಲ್ಲಿದ್ದಾರೆ, ಅನೇಕ ರಾಜ್ಯ ಸರ್ಕಾರಗಳಲ್ಲಿದ್ದಾರೆ. ಎಫ್ಐಆರ್ ಆಗಿರುವಂತಹವರು ಮಂತ್ರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇದನ್ನು ನಿಮ್ಮ ಗಮನದಲ್ಲಿ ಇರಲಿ ಎಂದು ಹೇಳುತ್ತಿದ್ದೇನೆ. ಅವರ್ಯಾರು ಕೂಡ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿಲ್ಲ. ಶ್ರೀಯುತ ಜಾರ್ಜ್ ರವರು ಕೂಡ ಅಂದು ಸಹ ರಾಜೀನಾಮೆ ಕೊಡುವಂತಹ ಅಗತ್ಯ ಇರಲಿಲ್ಲ. I am making it very very clear. ಅಂದು ಸಹ ರಾಜೀನಾಮೆ ಕೊಡುವಂತಹ ಅಗತ್ಯ ಇರಲಿಲ್ಲ. ನಾನು ಸಹ ರಾಜೀನಾಮೆ ಕೊಡಬೇಡಿ ಎಂದು ಅವರಿಗೆ ಹೇಳಿದೆ. ಏಕೆಂದರೆ, ಈ ದೇಶದಲ್ಲಿ ಬೇಕಾದಷ್ಟು ಜನರ ಮೇಲೆ ಎಫ್.ಐ.ಆರ್., ಗಳಿವೆ. ಎಫ್.ಐ.ಆರ್., ಹಾಕಿದ ತಕ್ಷಣ ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ.

ಮುಂದು. .

(934)13.11.2017/04.30/ಎಸ್‌ವಿ-ಜಿಆರ್

**ಶ್ರೀ ಸಿದ್ದರಾಮಯ್ಯ (ಮುಂದು):-**

ಎಫ್.ಐ.ಆರ್., ಹಾಕಿದ ತಕ್ಷಣವೇ ರಾಜೀನಾಮೆ ಕೊಡುವ ಅಗತ್ಯವಿಲ್ಲ. ಎಫ್.ಐ.ಆರ್., ಎಂದರೆ ಕೇವಲ ಅಲಿಗೇಷನ್ಸ್ ಮಾಡಿರುತ್ತಾರೆ. Unless the allegations are proved, guilt ಸಾಬೀತಾಗುವವರೆಗೂ 'he is innocent' ಎಂದು ಹೇಳುತ್ತಾರೆ. ಆದ್ದರಿಂದ ಯಾರೂ ರಾಜೀನಾಮೆ ಕೊಡುವಂತಹ ಅಗತ್ಯವಿಲ್ಲ. This is the basic principle under the criminal jurisprudence. ಆಗಲೂ ಸಹ ನಾನು ರಾಜೀನಾಮೆ ಕೊಡಿ ಎಂದು ಹೇಳಲಿಲ್ಲ. ಯಾವಾಗ ಜೆ.ಎಂ.ಎಫ್.ಸಿ., ನ್ಯಾಯಾಲಯದವರು ಎಫ್.ಐ.ಆರ್., ದಾಖಲು ಮಾಡಿಕೊಳ್ಳಿ ಎಂದು ಹೇಳಿದರೋ, ತಕ್ಷಣವೇ ಶ್ರೀ ಜಾರ್ಜ್‌ರವರು ಸ್ವಯಂಪ್ರೇರಿತರಾಗಿ on his own ರಾಜೀನಾಮೆಯನ್ನು ಕೊಟ್ಟುಬಿಟ್ಟರು. ಕೊಡಬೇಕಾದ ಅಗತ್ಯವಿಲ್ಲ, ಬೇಡ ಎಂದು ನಾನು ಒತ್ತಾಯ ಮಾಡಿದೆ. ಆದರೂ ಸಹ ಅವರು ಅಕ್ಸೆಪ್ಟ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡಿದರು. ಹಾಗಾಗಿ ಅವರ ರಾಜೀನಾಮೆಯನ್ನು ನಾನು ಅಕ್ಸೆಪ್ಟ್ ಮಾಡಿಕೊಂಡಿರುತ್ತೇನೆ. ಸಾರ್ವಜನಿಕರಿಗೆ ಅಥವಾ ರಾಜಕೀಯ ವ್ಯವಸ್ಥೆಯಲ್ಲಿ ಒಂದು ಒಳ್ಳೆಯ ಸಂದೇಶ ಹೋಗಲಿ ಎಂದು ಅವರು ಒತ್ತಾಯ ಮಾಡಿದುದರಿಂದ ಇದನ್ನು ನಾವು ಮಾಡಿರುತ್ತೇವೆ. ಈಗ ಸುಪ್ರೀಂ ಕೋರ್ಟ್‌ನವರು ಹೇಳಿರುವುದೇನೆಂದರೆ ಮೆರಿಟ್ ಮೇಲೆ ನಾವು ಏನೂ ಹೇಳುವುದಿಲ್ಲ; ಸಿ.ಬಿ.ಐ., ನವರು ಆದಷ್ಟು ಶೀಘ್ರವಾಗಿ ತನಿಖೆಯನ್ನು ನಡೆಸಿ, as far as possible, ಮೂರು ತಿಂಗಳೊಳಗಾಗಿ ವರದಿಯನ್ನು ಕೊಡಲಿ ಎಂದು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಒಂದು complaint ಅನ್ನು afresh ಆಗಿಯಾದರೂ ಮಾಡಿಕೊಳ್ಳಿ, ಇಲ್ಲವಾದಲ್ಲಿ ಹಳೆಯ ದೂರನ್ನು ಮುಂದುವರೆಸಿ ಎಂದು ಹೇಳಿರುತ್ತಾರೆ. ಸಿ.ಬಿ.ಐ., ನವರು ಏನು ಮಾಡಿದ್ದಾರೆಂದರೆ ಹಿಂದೆ ಇದ್ದ ದೂರನ್ನು ಆಧರಿಸಿ ಎರಡನೇ ಬಾರಿಗೆ ಎಫ್.ಐ.ಆರ್., ಅನ್ನು ದಾಖಲಿಸಿ ಕೊಂಡಿದ್ದಾರೆ. There is no new complaint, there is no new material and it is not a fresh F.I.R., This is very very clear. ಈ ರೀತಿ ಇದೆ. ನಂತರ ಸುಪ್ರೀಂ ಕೋರ್ಟ್‌ನವರು ಎಲ್ಲಿಯೂ ಕೂಡ ಸಿ.ಐ.ಡಿ., ಯವರು ಕೊಟ್ಟಿರತಕ್ಕಂತಹ 'ಬಿ' ರಿಪೋರ್ಟ್ ಮೇಲಾಗಲೀ, ಶ್ರೀ ಜಾರ್ಜ್ ಅವರ ಹೆಸರನ್ನು ಪ್ರಸ್ತಾಪ ಮಾಡುವುದಾಗಲೀ ಅಥವಾ ಇನ್ನಿಬ್ಬರು ಆರೋಪಿಗಳ ಹೆಸರುಗಳನ್ನು ಪ್ರಸ್ತಾಪ ಮಾಡುವುದಾಗಲೀ ಮಾಡಿರುವುದಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಕಂಡಿಕೆ 8 ಅನ್ನು ಈಗಾಗಲೇ ಓದಿ ಹೇಳಲಾಗಿದೆ. It is stated specifically in paragraph no.8 of the order. ಶ್ರೀ ರಾಮಚಂದ್ರಗೌಡರು ಹೇಳಿದ್ದಾಗಲೀ, ಶ್ರೀ ಕೆ.ಎಸ್.ಈಶ್ವರಪ್ಪನವರು ಹೇಳಿದ್ದಾಗಲೀ, ಶ್ರೀ ಸೋಮಣ್ಣನವರು ಹೇಳಿದ್ದಾಗಲೀ ಯಾವುದೂ ಕೂಡ ಕೋರ್ಟ್ ಆದೇಶದಲ್ಲಿರುವುದಿಲ್ಲ. ನಿಮ್ಮ ಗಮನಕ್ಕೆ ಬೇಕೆನ್ನುವುದಾದರೆ ನ್ಯಾಯಾಲಯದ ಆದೇಶವನ್ನು ಪೂರ್ಣವಾಗಿ ಓದಿ ಬಿಡುತ್ತೇನೆ. ಆದರೆ ಬಹಳ relevant ಆಗಿರತಕ್ಕಂತಹದ್ದು paragraph No.8 of the orders of the Supreme Court. ಅದು ಈ ಕೆಳಕಂಡಂತಿದೆ:-

> "Having considered the entirety of the material before this Court but without expressing any opinion on merits, we direct that investigation be handed over to the CBI. The CBI may complete the investigation, as

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> far as possible, within three months from the date of receipt of a copy of the order. ...”

ಎನ್ನುವುದನ್ನು ಹೇಳಿದ್ದಾರೆ. Further, in the said order, it is stated thus:

> “..The investigation may be supervised by an officer of an appropriate rank ...”

ಅಂದರೆ ಸಿ.ಬಿ.ಐ., ನಲ್ಲಿ. Further, in the said order, it is stated thus:

> “...having regard to the nature of the present case. It will be open to the CBI ...”

This is important. The order further reads thus:-

> “...it is open CBI to conduct investigation afresh ...”

ಈ option ಅನ್ನು ಅವರು ಆಯ್ಕೆಮಾಡಿಕೊಂಡಿಲ್ಲ. The order further reads thus:-

> “.... or in continuation of the investigation already conducted. ...”

ಸಿ.ಬಿ.ಐ.ನವರಿಗೆ ಎರಡು ಆಯ್ಕೆಗಳಿದ್ದು, ಎರಡನೆಯದನ್ನು ಅವರು ಆಯ್ದುಕೊಂಡಿರುತ್ತಾರೆ.

The order further reads thus:-

> “It will be open to the CBI to ascertain the nature of offence, if any, committed and by whom.”

ತನಿಖೆ ಮಾಡಿ ಮೂರು ತಿಂಗಳೊಳಗಾಗಿ ವರದಿಯನ್ನು ಕೊಡಿ ಎಂದು ಹೇಳಿರುತ್ತಾರೆ. ಇದನ್ನು ಬಿಟ್ಟರೆ ಬೇರೆಲ್ಲಿಯೂ ಕೂಡ ಆದೇಶದಲ್ಲಿ ಶ್ರೀ ಜಾರ್ಜ್ ಅವರ ಹೆಸರನ್ನು ಪ್ರಸ್ತಾಪ ಮಾಡಿರತಕ್ಕಂತಹದ್ದಾಗಲೀ, ಸಿ.ಐ.ಡಿ., ವರದಿಯನ್ನು ಉಲ್ಲೇಖ ಮಾಡಿರತಕ್ಕಂತಹದ್ದಾಗಲೀ, ಸಿ.ಐ.ಡಿ., ವರದಿಯನ್ನು ಸರಿಯಾಗಿ ಮಾಡಿಲ್ಲ ಎನ್ನುವಂತಹದ್ದಾಗಲೀ ಹೇಳಿರುವುದಿಲ್ಲ. ಅದನ್ನು ಕೂಡ ಹೈಕೋರ್ಟಿನಲ್ಲಿ ಹೇಳಿರುತ್ತಾರೆ. ಈ ಪ್ರಕರಣವು ನೇರವಾಗಿ ಸುಪ್ರೀಂ ಕೋರ್ಟ್‌ಗೆ ಬಂದಿರುವುದಲ್ಲ. ಹೈಕೋರ್ಟಿನಲ್ಲಿ ಒಮ್ಮೆ ಏಕ ಸದಸ್ಯ ಪೀಠದ

ಮುಂದೆ ವಿಚಾರಣೆ ನಡೆದಿದೆ. ಏಕಸದಸ್ಯ ಪೀಠದ ಗೌರವಾನ್ವಿತ ನ್ಯಾಯಮೂರ್ತಿಗಳು ಅದನ್ನು ತಿರಸ್ಕರಿಸಿದ್ದಾರೆ. ‘There is no merit in the case’ ಎಂದು ಹೇಳಿದ್ದಾರೆ. ಏಕೆಂದರೆ ಡಿ.ಜಿ.ಪಿ., ಮಟ್ಟದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ತನಿಖೆ ಮಾಡಿ ‘ಬಿ’ ರಿಪೋರ್ಟ್ ಕೊಟ್ಟಿರುವುದರಿಂದ ಈ ಪ್ರಕರಣದಲ್ಲಿ ಯಾವುದೇ ಮೆರಿಟ್ ಇರುವುದಿಲ್ಲ. ಸಿ.ಬಿ.ಐ.ಗೆ ವಹಿಸಬೇಕಾದಂತಹ ಅಗತ್ಯವಿರುವುದಿಲ್ಲ ಎಂದು ಹೇಳಿದ್ದಾರೆ. Again it is reiterated. ಎಲ್ಲಿ? ಪುನಃ ಇದು ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿದ್ದು, ಆ ವಿಭಾಗೀಯ ಪೀಠವೂ ಸಹ ಇದನ್ನೇ ಹೇಳಿರುತ್ತದೆ. ಎರಡು ಬಾರಿ ಉಚ್ಛ ನ್ಯಾಯಾಲಯದಿಂದ ಪರಿಶೀಲನೆ ಆಗಿದೆ. ಒಮ್ಮೆ ಏಕಸದಸ್ಯ ಪೀಠದಿಂದ; ಮತ್ತೊಮ್ಮೆ ವಿಭಾಗೀಯ ಪೀಠದಿಂದ ಈ ರೀತಿ ಎರಡು ಬಾರಿ ಪರಿಶೀಲನೆ ಆಗಿದೆ. ಎರಡೂ ಕಡೆ ಇದನ್ನು ತಿರಸ್ಕರಿಸಲಾಗಿದೆ. ಇದಾದ ಮೇಲೆ Mr.Kushalappa, who is a father of the deceased M.K.Ganapathi, went in an Appeal by way of filing a Special Leave Petition. ಅದರಲ್ಲಿ ಸರ್ವೋಚ್ಛ ನ್ಯಾಯಾಲಯದವರು ಈ ಆದೇಶವನ್ನು ಮಾಡಿರುತ್ತಾರೆ. ಈಗ ನೀವೇ ಹೇಳಿ. ಶ್ರೀ ಜಾರ್ಜ್ ಅವರು ಈ ಪ್ರಕರಣದಲ್ಲಿ ರಾಜೀನಾಮೆಯನ್ನು ಕೊಡಬೇಕೆ? ಹಾಗಾದರೆ ಈ ದೇಶದಲ್ಲಿ ಬಹಳಷ್ಟು ಜನರ ಮೇಲೆ ಎಫ್.ಐ.ಆರ್., ಇದೆ. ಅವರೆಲ್ಲಾ ಹಾಗೆಯೇ ಅಧಿಕಾರದಲ್ಲಿ ಮುಂದುವರೆಯುತ್ತಿದ್ದಾರೆ. ಅವರೇಕೆ ರಾಜೀನಾಮೆ ಕೊಟ್ಟಿರುವುದಿಲ್ಲ? Why they are all continuing in the Government? Moral turpitude ನಿಂದಾಗಲೀ ಅಥವಾ ಕಾನೂನಾತ್ಮಕವಾಗಿ ಮಾಡಬೇಕಲ್ಲವೆ? ಸುಮ್ಮನೆ ರಾಜಕೀಯಕ್ಕೋಸ್ಕರ ಇದನ್ನೆಲ್ಲಾ ಮಾಡುವಂತಹದ್ದು ಸರಿಯಾದುದಲ್ಲ. ಶ್ರೀ ಕೆ.ಜೆ.ಜಾರ್ಜ್‌ನವರು ರಾಜೀನಾಮೆ ಕೊಟ್ಟ ದಿನ he was not a Home Minister. ಅವರು ಬೆಂಗಳೂರು ನಗರ ಅಭಿವೃದ್ಧಿ ಸಚಿವರಾಗಿದ್ದರು. ಆದರೂ ರಾಜೀನಾಮೆ ಕೊಟ್ಟರು. ಸಾಮಾನ್ಯವಾಗಿ ಗೃಹ ಸಚಿವರಾಗಿರುವವರು ಸಿ.ಐ.ಡಿ., ಮೇಲೆ ಪ್ರಭಾವವನ್ನು ಬೀರುತ್ತಾರೆ. ಅದಕ್ಕಾಗಿ ಅವರು ಗೃಹ ಸಚಿವರಾಗಿರಬಾರದು ಎನ್ನುವುದು ಸರಿಯಷ್ಟೆ. ಇದು ಸಾಮಾನ್ಯವಾಗಿ ಜನರು ಭಾವಿಸತಕ್ಕಂತಹದ್ದು. ಅಂದು ಅವರು ಗೃಹಸಚಿವರೂ ಅಲ್ಲ..

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು ಪ್ರಭಾವಿ ಮಂತ್ರಿಗಳಾಗಿದ್ದರು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಯಾರು ಪ್ರಭಾವಿ ಮಂತ್ರಿಗಳಾಗಿದ್ದವರು ಎಂದು ಕೇಳಬಯಸುತ್ತೇನೆ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೆ, ಶ್ರೀ ಜಾರ್ಜ್ ಅವರು ಪ್ರಭಾವಿ ಮಂತ್ರಿಗಳಾಗಿದ್ದರು.

**ಶ್ರೀ ಸಿದ್ದರಾಮಯ್ಯ:-** ಆಯಿತು ಮಾನ್ಯ ಸಭಾಪತಿಯವರೆ, ಎಲ್ಲರೂ ಪ್ರಭಾವಿಗಳೇ. ಹಾಗಾದರೆ ಇವರು ಪ್ರಭಾವಿಗಳಲ್ಲವೋ?

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೆ, ನಾವು ಕೇಳುತ್ತಿರುವುದು ಮಾರಲ್ ಗ್ರೌಂಡ್ಸ್ ಮೇಲೆ ರಾಜೀನಾಮೆ ಕೊಡಿ ಎಂದಷ್ಟೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇವರು ಪ್ರಭಾವಿಗಳೋ ಅಲ್ಲವೋ ಎಂಬುದನ್ನು ಹೇಳಲಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೆ, ನಾವು ಪ್ರಭಾವಿಗಳು ಹೌದೋ ಅಲ್ಲವೋ ಎಂಬುದನ್ನು ಆಡಳಿತ ಪಕ್ಷದವರು ಹೇಳಬೇಕು. ಈ ನಾಡಿನ ದೊರೆ ಹೇಳಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಅವರನ್ನು ಪ್ರಭಾವಿ ಎಂದು ತಿಳಿದುಕೊಂಡಿದ್ದೇನೆ. ಇಲ್ಲ ಎಂದು ಅವರು ಹೇಳಿದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಎಂಬಂತೆ ಮುಖ್ಯಮಂತ್ರಿಗಳು ಈ ರೀತಿ ಹೊಸ ಶಾಸಕರನ್ನು ಕೇಳುತ್ತಾ ಕುಳಿತುಕೊಂಡು ಬಿಟ್ಟರೆ ಹೇಗೆ? ಅವರು ಕೇಳುತ್ತಿರುವುದು ಹೇಗಿದೆಯೆಂದರೆ ಇಲಿ ಮೇಲೆ ಹುಲಿ ಹೋದ ಹಾಗಿದೆ.

**ಶ್ರೀ ಸಿದ್ದರಾಮಯ್ಯ:-** ನೋಡಿ ಮಾನ್ಯ ಸುನಿಲ್ ಸುಬ್ರಮಣಿಯವರೆ, ನಿಮ್ಮನ್ನು ಇಲಿ ಎಂದು ಕರೆಯುತ್ತಿದ್ದಾರೆ. ನೀವು ಇಲಿಯೇನ್ರೀ...?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಮುಖ್ಯಮಂತ್ರಿಗಳು ಹುಲಿಯೇನಾ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದನ್ನು ಮಾನ್ಯ ಈಶ್ವರಪ್ಪನವರು ಹೇಳಿದ್ದು. ನಾವು ಇಲೀನೂ ಅಲ್ಲ.. ಹುಲೀನೂ ಅಲ್ಲ. ನಾನು ಸಿದ್ದರಾಮಯ್ಯ ಮಾನವೀಯ ಮೌಲ್ಯಗಳನ್ನು ಇಟ್ಟುಕೊಂಡಿರತಕ್ಕಂತಹ ಒಬ್ಬ ಮನುಷ್ಯ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು.)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೂರಕ್ಕೆ ನೂರು ಸುಳ್ಳು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಇಲೀನೂ ಅಲ್ಲ, ಹುಲೀನೂ ಅಲ್ಲ. ನಾನು ಇನ್ನೂ ನನ್ನ ಉತ್ತರವನ್ನು ಮುಗಿಸಿರುವುದಿಲ್ಲ. ನಾನೇಕೆ ಇದನ್ನು ವಿರೋಧ ಮಾಡುತ್ತಿದ್ದೇನೆಂದರೆ this is not a fit case. ಇದು ಯೋಗ್ಯತೆ ಇರತಕ್ಕಂಥದ್ದಲ್ಲ. ಈಗಾಗಲೇ ಅವರು ಪ್ರಿಲಿಮಿನರಿ ಸಬ್ಮಿಷನ್ ಎಂದು ಹೇಳಿ ಬಹಳ ದೀರ್ಘವಾಗಿ ಎಲ್ಲವನ್ನೂ ಮಾತನಾಡಿದ್ದಾರೆ. ಯಾವಾಗಲೂ ಮೆರಿಟ್ ಮೇಲೆ ಮಾತನಾಡಕೂಡದು. ನಿಲುವಳಿ ಸೂಚನೆ ಮೇಲೆ ಅವರಿಗೆ ಕನ್ವಿನ್ಸ್ ಮಾಡಬೇಕು. ಈ ಗ್ರೌಂಡ್ಸ್ ಮೇಲೆ ಈ ಕಾರಣಕ್ಕೋಸ್ಕರ ಇದು ಚರ್ಚೆಗೆ ಯೋಗ್ಯವಾಗಿದೆ ಎಂದು ಕನ್ವಿನ್ಸ್ ಮಾಡಬೇಕು. ಅದನ್ನು ಬಿಟ್ಟು ಏನೇನೋ ಮಾತನಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಇದರಲ್ಲಿ ಈಗಾಗಲೇ ಒಮ್ಮೆ ಶ್ರೀ ಜಾರ್ಜ್ ಅವರು ರಾಜೀನಾಮೆಯನ್ನು ಕೊಟ್ಟಿರುತ್ತಾರೆ. ಹಳೆಯ ದೂರೇ ಇರುವುದು. ಪುನಃ ಹೊಸದಾಗಿ ಏನೂ ದೂರನ್ನು ದಾಖಲಿಸಿರುವುದಿಲ್ಲ. ಆಮೇಲೆ ಯಾರು ಇದನ್ನು ಎಫ್.ಐ.ಆರ್., ಮಾಡಬೇಕೆಂದು ಅರ್ಜಿಯನ್ನು ಹಾಕಿದ್ದರೋ ಅವರು 'ಬಿ' ರಿಪೋರ್ಟ್ ಅನ್ನು ಚಾಲೆಂಜ್ ಮಾಡಿರುವುದಿಲ್ಲ. Mr.Nehal, who is the son of the deceased Ganapathi, went to the Court of Magistrate, by way of filing a Private Complaint. ಅಲ್ಲಿ ಹೋಗಿ ಎಫ್.ಐ.ಆರ್., ಮಾಡಿಕೊಳ್ಳುವುದಕ್ಕೆ ಕೇಳಿದ್ದಾರೆ. ಅದರ ಆಧಾರದ ಮೇರೆಗೆ ಎಫ್.ಐ.ಆರ್., ಆಗಿದೆ. ಶ್ರೀ ಕುಶಾಲಪ್ಪನವರು ಪೋಲೀಸಿನವರ ಮುಂದೆ ಏನೇನು ಹೇಳಿಕೆಗಳನ್ನು ಕೊಟ್ಟಿದ್ದಾರೆ ಎಂಬುದನ್ನೆಲ್ಲಾ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಅಗತ್ಯವಿಲ್ಲ. ಆದ್ದರಿಂದ ಉಚ್ಛ ನ್ಯಾಯಾಲಯದಲ್ಲಿ ಎರಡು ಬಾರಿ ಸಿ.ಬಿ.ಐ., ತನಿಖೆ ಅಗತ್ಯವಿಲ್ಲ ಎಂದು ಹೇಳಲಾಗಿದೆ. ಅದರಲ್ಲಿಯೂ ಕೂಡ ಶ್ರೀ ಜಾರ್ಜ್ ಹೆಸರಾಗಲೀ ಅಥವಾ ಇನ್ನಿಬ್ಬರು ಅಧಿಕಾರಿಗಳ ಹೆಸರನ್ನು ಪ್ರಸ್ತಾಪ ಮಾಡುವುದಾಗಲೀ ಏನೂ ಇಲ್ಲ.

(...ಮುಂದು)

(935)13.11.2017/4.40/ಕೆ.ಜಿ-ಎಂಡಿ

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು):-** ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿಯೂ ಸಹ ಕೆ.ಜೆ.ಜಾರ್ಜ್‌ರವರ ಬಗ್ಗೆ ಎಲ್ಲೂ ಪ್ರಸ್ತಾಪ ಆಗಿಲ್ಲ. ಆದ್ದರಿಂದ ಕೆ.ಜೆ.ಜಾರ್ಜ್‌ರವರು ರಾಜೀನಾಮೆ ಕೊಡುವಂತಹ ಪ್ರಶ್ನೆಯೇ ಬರುವುದಿಲ್ಲ. ನನ್ನ ಪ್ರಕಾರ, ಮಾನ್ಯ ಕೆ.ಜೆ.ಜಾರ್ಜ್‌ರವರು ಈ ಹಿಂದೆ ಒಮ್ಮೆ ರಾಜೀರಾಮೆ ಕೊಟ್ಟಿರುವುದೇ ಸರಿ ಇಲ್ಲ. ಸಿ.ಐ.ಡಿ., ಯವರು "ಬಿ" ವರದಿ ಸಲ್ಲಿಸಿದ ನಂತರ ಅವರನ್ನು ನಾನು ಮಂತ್ರಿಮಂಡಲಕ್ಕೆ ಮತ್ತೆ ಸೇರಿಕೊಂಡಿದ್ದೇನೆ. ಈಗ ಮತ್ತೆ ಅವರ ರಾಜೀನಾಮೆಯನ್ನು ಕೇಳುವುದು ಸರಿಯಲ್ಲ. ಅದು ಯೋಗ್ಯವಲ್ಲ. ಅವರು ಕೇಳಲು ಬಾರದು. ಇದು ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾದ ವಿಷಯವೂ ಅಲ್ಲ. ಈಗಾಗಲೇ ಇದರ ಬಗ್ಗೆ ಈ ಸದನದಲ್ಲಿ ಮತ್ತು ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆ ಆಗಿದೆ. ಇದು ಹಳೆಯ ವಿಷಯ. ಈ ವಿಷಯವನ್ನು ಮತ್ತೆ ಚರ್ಚೆ ಮಾಡುತ್ತೇವೆಂದರೆ, ಇದಕ್ಕೆ ಅವಕಾಶ ಕೊಡಬೇಕಾ? ಇದಕ್ಕೆ ನಿಯಮಗಳಲ್ಲಿ ಅವಕಾಶ ಇದೆಯೇ? ಮಾನ್ಯ ಸಭಾಪತಿಯವರೇ, ಆದ್ದರಿಂದ ದಯಮಾಡಿ ಇದನ್ನು ತೀರಸ್ಕಾರ ಮಾಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ವಿಚಾರ ಇದೆ. ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ *"...The true facts have not been properly investigated..."* ಎಂದಿದೆ. ಮೂರು ಜನರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಹಾಗಾದರೆ, who are those three respondents? Those three names have been mentioned in the Supreme Court order. "*...The deceased, soon before his death, specifically named the three respondents from whom he apprehended danger to his life.*" ಮಾನ್ಯ ಮುಖ್ಯಮಂತ್ರಿಗಳು ತೀರ್ಪಿನಲ್ಲಿ ಹೆಸರನ್ನು ಹೇಳಿಲ್ಲವೆಂದು ಹೇಳಿದರು. ಅದರ ತೀರ್ಪಿನ ನಕಲು ಪ್ರತಿ ನನ್ನ ಹತ್ತಿರ ಇದೆ.

(ಗೊಂದಲ)

**ಸಭಾಪತಿಯವರು:-** ಆಯಿತು ಬಿಡಿ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಮತ್ತು ನೀವೆಲ್ಲರೂ ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದೀರಿ. ಈಗ ನಾನು ಇದರ ಬಗ್ಗೆ ತೀರ್ಪು ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ವಿರೋಧ ಪಕ್ಷದಲ್ಲಿದ್ದಾಗ ಈ ರೀತಿ ಮಾಡುತ್ತಿದ್ದರಾ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದಲ್ಲಿದ್ದಾಗ, ಯಾವ ರೀತಿ ಇದ್ದೆ ಎಂಬುದು ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೆ ಗೊತ್ತಿದೆ. ನಾನು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಾಗಲೆಲ್ಲಾ ಮಾನ್ಯ ಕೆ.ಎಸ್.ಈಶ್ವರಪ್ಪನವರು ಎದ್ದು ನಿಂತುಕೊಂಡುಬಿಡುತ್ತಿದ್ದರು. ಈಗ ಅವರು ಅದನ್ನು ಜ್ಞಾಪಕ ಮಾಡಿಕೊಳ್ಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಎದ್ದು ನಿಂತುಕೊಂಡಾಗ, ನಾನು ಯಾವತ್ತು ಎದ್ದು ನಿಂತುಕೊಂಡಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಯಾವಾಗಲಾದರೂ ವಿಧಾನಸಭೆಯಲ್ಲಿ ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಎದ್ದು ನಿಂತುಕೊಂಡಾಗ, ಶ್ರೀ ಬಿ.ಎಸ್.ಯಡಿಯೂರಪ್ಪನವರು ರೆಡಿಯಾಗಿ ಎದ್ದು ನಿಂತುಕೊಂಡು ಬಿಡುತ್ತಿದ್ದರು. ಅಲ್ಲಿ ಈಶ್ವರಪ್ಪನವರು ರೆಡಿಯಾಗಿ ಎದ್ದು ನಿಂತುಕೊಂಡು ಬಿಡುತ್ತಿದ್ದರು. .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಗೆ ಯಾವಾಗಲೂ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಹೆಸರೇ ಜ್ಞಾಪಕಕ್ಕೆ ಬರುತ್ತಿರುತ್ತೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಹೆದರಿಕೆ ಏನು?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಹೆಸರನ್ನು ಹೇಳುವುದು ಬೇಡವೇ? ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತು ಮಾನ್ಯ ಈಶ್ವರಪ್ಪನವರು ಒಂದೇ ಊರಿನವರು ಅಲ್ಲವೆ ಅದಕ್ಕೆ ಹೇಳಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಣ್ಣ ತಮ್ಮಂದಿರು ಇದ್ದ ಹಾಗೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತು ಕೆ.ಎಸ್.ಈಶ್ವರಪ್ಪನವರು ಗಿಳಿಮರಿಗಳು ಇದ್ದಂತೆ. ಅವರು ಹೇಳುವುದು ನೋಡಿ. ಈಗ ತಾವು ಇದರ ಬಗ್ಗೆ ತೀರ್ಪು ಕೊಟ್ಟುಬಿಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಜೆ.ಜಾರ್ಜ್‌ರವರು ಆರೋಪಿ ನಂ-1 ಎಂದು ಆಗಿರಬೇಕಾದರೆ,

(ಗೊಂದಲ)

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರು ಮಾತನಾಡುವುದಕ್ಕೆ ಬೆಳಗ್ಗೆಯಿಂದ ಅವಕಾಶ ಕೇಳುತ್ತಿದ್ದಾರೆ. ಈಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಉಗ್ರಪ್ಪನವರೆ ಸ್ವಲ್ಪ ಸರಳವಾಗಿ ಹೇಳಿಬಿಡಿ. ನಾನು ಅದರ ಮೇಲೆ ತೀರ್ಪು ಕೊಡಬೇಕು. I am ready with the order. ಇದು tenable ಹೌದು ಅಥವಾ ಅಲ್ಲವೋ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 21ರ ಪ್ರಕಾರ right to life and liberty is a fundamental right of a citizen. ಯಾರು ಸಹ ವಿನಾಕಾರಣ ಸಾವನ್ನಪ್ಪಬಾರದು. ಶ್ರೀ ಗಣಪತಿಯವರ ಸಾವು ವಿನಾಕಾರಣ ಆಗಿರುವಂಥದ್ದು, ನಾವು ಯಾರು ಸಹ ಅದನ್ನು ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ವಿನಾಕಾರಣ ತಪ್ಪು ಎಸಗದೆ ಇರುವಂಥಹವರನ್ನು ಇಕ್ಕಟ್ಟಿಗೆ ಸಿಲುಕಿಸುವುದು ಸಮಂಜಸವಲ್ಲ ಇದು ಒಂದು. ಎರಡನೆಯದಾಗಿ, ಈ ಕೇಸ್‌ನಲ್ಲಿ as per the provisions of section 174 of CrPC inquest ಅದಂತಹ ಸಂದರ್ಭದಲ್ಲಿ ಯಾರು ಸಂಬಂಧಿಗಳು ಇದ್ದಾರೆ ಅಲ್ಲಿ suicide ಎಂದು ಬರೆದಿರುವಂಥದ್ದಕ್ಕೆ ಹತ್ತಿರದ ಸಂಬಂಧಿಗಳು ಸಹಿ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, merit ಗೆ ಏಕೆ ಹೋಗುತ್ತೀರಿ? ಮಾನ್ಯ ಮುಖ್ಯ ಮಂತ್ರಿಯವರು ಈಗಾಗಲೇ ಎಲ್ಲವನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿದರೆ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದರಲ್ಲಿ 4-5 ಹಂತಗಳು ಆಗಿವೆ. ಈ ಕೇಸಿನಲ್ಲಿ ಒಂದು ಸೆಕ್ಷನ್ 174 ಕೆಳಗಡೆ. ಇನ್ನೊಂದು ಸಿಆರ್‌ಪಿಸಿ ಕಲಂ.200 ಕೆಳಗಡೆ ಖಾಸಗಿ ದೂರು, ಆದಾದ ಮೇಲೆ ಸಿಐಡಿ ನವರು 'ಬಿ' ವರದಿ ಸಲ್ಲಿಸಿದ್ದಾರೆ. ಇದಾದ ಮೇಲೆ ಜೂಡಿಷಿಯಲ್ ಕಮಿಷನ್‌ನಿಂದ ತನಿಖೆಯಾಗಿದೆ. ಸರ್ವೋಚ್ಚ ನ್ಯಾಯಾಲಯ ಸೆಪ್ಟಂಬರ್ 5ನೇ ದಿನಾಂಕದಂದು ಆದೇಶ ಮಾಡಿದೆ. ಆದೇಶ ಮಾಡಿ ಎರಡು ತಿಂಗಳು ಎಂಟು ದಿವಸಗಳಾಗಿವೆ. ಆದರೆ, ಇವತ್ತಿನವರೆಗೂ ಸಹ ಯಾವುದೇ ವಿಧವಾದವಂತಹ ಮೆಟಿರಿಯಲ್ಸ್‌ನಲ್ಲಿ ಯಾರು ಆರೋಪಿ ಎಂದು ಹೇಳುತ್ತಿದ್ದಾರೆ, ಅವರ ವಿರುದ್ಧ ಬಂದಿರುವುದಿಲ್ಲ. ನಾನು ಇದನ್ನು ಏಕೆ ಚರ್ಚೆಗೆ ತೆಗೆದುಕೊಳ್ಳಬಾರದೆಂದು, ನಾನು Point of Order raise ಮಾಡುವುದಕ್ಕೆ ಹೊರಟ್ಟಿದೇನೆಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 60 ಮತ್ತು 61 ರೀತ್ಯಾ ಸ್ಪಷ್ಟವಾಗಿ ಹೇಳಿದೆ. ಯಾವುದೇ ಕಾರಣಕ್ಕೂ ನ್ಯಾಯಾಲಯದ ಮುಂದೆ ಅಥವಾ ತನಿಖೆಯ ಮುಂದೆ ಇರುವಂತಹ ಮ್ಯಾಟರ್ಸ್‌ನಲ್ಲಿ ಏನಿದೆ.. . .(ಗೊಂದಲ)

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಇದರ ಬಗ್ಗೆ ಇವತ್ತು ಬೆಳಗ್ಗೆ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆ. ಅದಕ್ಕೆ ನಾನು ತಮ್ಮನ್ನು ಕರೆದೆ. ಆದರೆ, ಒಂದು ವಿಷಯವನ್ನು ತಾವು ಗಮನಿಸಬೇಕು. ತಾವು ಹಿರಿಯ ಸದಸ್ಯರಾಗಿದ್ದೀರಿ. ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಸರ್ಕಾರದ ಪರವಾಗಿ ಸಭಾನಾಯಕರು ಮತ್ತು ಮುಖ್ಯಮಂತ್ರಿಯವರು ಇದು tenable ಹೌದು ಅಥವಾ ಅಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿದ ಮೇಲೆ, ತಾವು ಆಡಳಿತದ ಪಕ್ಷದ ಸದಸ್ಯರಾಗಿ ಮತ್ತೆ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದು ಸರಿ ಆಗುತ್ತದೆಯೇ ಎಂಬುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಅವರು ಹೇಳದೆ ಇರುವಂತಹ ಅಂಶಗಳನ್ನು ಹೇಳುತ್ತೇನೆ. ಏಕೆಂದರೆ, ನಾನು ಮೊದಲು Point of Order raise ಮಾಡಿದ್ದು. ಅದರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 61 ಮತ್ತು 62 ನಲ್ಲಿ ಏಕೆ ಹೇಳಿದ್ದಾರೆ. ನ್ಯಾಯಾಲಯಗಳ ಮುಂದೆ ಅಥವಾ ತನಿಖೆ ಆಗತಕ್ಕಂತಹ ವಿಚಾರವನ್ನು ಸದನದಲ್ಲಿ ಏಕೆ ಚರ್ಚೆ ಮಾಡಬಾರದೆಂದು ಹೇಳಿ, there is a bar. ಏಕೆಂದರೆ, ಇಲ್ಲಿ ಚರ್ಚೆಯ ಅಭಿಪ್ರಾಯಗಳು ಆ Investigating Officer ಮೇಲೆ ಪ್ರಭಾವ ಬೀಳುತ್ತದೆ. ಹಾಗಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲವಾಗಲಿ, ಮಾನ್ಯ ಉಚ್ಚ ನ್ಯಾಯಾಲಯವಾಗಲಿ, Trial Court ಅಥವಾ Magistrate Court ನಲ್ಲಿ investigation ನಡೆಯುತ್ತಿರಬೇಕಾದರೆ, ಅವರು ಯಾರು interfere ಆಗಬಾರದೆಂದು ಹೇಳಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಇವೆ. ಇಲ್ಲಿ ಚರ್ಚೆ ಆಗುವುದರಿಂದ ಸಿಬಿಐ ನ Enquiry Authorities ಮೇಲೆ ಪ್ರಭಾವ ಬೀರುವಂತಹ ಸಂದರ್ಭಗಳು ಇರುತ್ತವೆ. ಹಾಗಾಗಿ, ದಯಮಾಡಿ ಇದನ್ನು Adjournment Motion ಅಥವಾ ಇನ್ನಿತರ ನಿಯಮದ ಅಡಿಯಲ್ಲಿ ತೆಗೆದುಕೊಳ್ಳುವಂತಹದ್ದು ನಿಯಮ ಬಾಹಿರವಾಗುತ್ತದೆ ಮತ್ತು ಕಾನೂನು ಬಾಹಿರವಾಗುತ್ತದೆ. ಅದಕ್ಕೆ ದಯಮಾಡಿ ಇದನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೇ, ಇನ್ನು ರಾಜೀನಾಮೆ ಪ್ರಶ್ನೆ ಎಂದರೆ, ಶ್ರೀಮತಿ ಉಮಾಭಾರತಿ ರವರಿಂದ ಹಿಡಿದು ಮಾನ್ಯ ಎಲ್.ಕೆ.ಅಡ್ವಾನಿಯವರಿಗೂ ಹಾಗೂ ಕೇಂದ್ರದ ಸುಮಾರು ಅನೇಕ ಮಂತ್ರಿಗಳ ವಿರುದ್ಧ ಸಿಬಿಐ ತನಿಖೆ ನಡೆಯುತ್ತಿದೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರ ವಿರುದ್ಧ ಸಿ.ಬಿ.ಐ.,ನಲ್ಲಿ 09 ಕೇಸ್‌ಗಳು ನೋಂದಣಿ ಆಗಿವೆ. ಹಾಗಾದರೆ, ಇವರೆಲ್ಲಾ ಏಕೆ ರಾಜೀನಾಮೆ ಕೊಟ್ಟಿಲ್ಲ? ಜಾರ್ಜ್‌ರವರು ರಾಜೀನಾಮೆ ಕೊಡಬೇಕು ಎನ್ನುವುದಾದರೆ, ಕೇಂದ್ರದಲ್ಲಿರುವಂತಹ ಮಂತ್ರಿಗಳು ಸಹ ರಾಜೀನಾಮೆ ಕೊಡಬೇಕು. ಮಾನ್ಯ ಬಿ.ಎಸ್.ಯಡಿಯೂರಪ್ಪನವರ ವಿರುದ್ಧ ಸಿ.ಬಿ.ಐ.,09 ಕೇಸ್‌ಗಳು ಇರುವುದರಿಂದ ಅವರು ಯಾವ ರೀತಿ ಉತ್ತರ ಕೊಡುತ್ತಾರೆ?

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ವಿರುದ್ಧ ಸಿ.ಬಿ.,ಐ.,ನಲ್ಲಿ 09 ಕೇಸ್‌ಗಳು ಎಲ್ಲಿ ದಾಖಲಾಗಿವೆ ಎಂಬುದನ್ನು ಅವರು ಹೇಳಲಿ? ಯಾವುದೋ ಒಂದು ಕೇಸ್ ಹಾಕಿದ್ದಾರೆ, ಅವರಿಗೆ ಅದರಲ್ಲಿ ನ್ಯಾಯಾಲಯ ತಡೆಯಾಜ್ಞೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿದೆ. ಆಡಳಿತ ಪಕ್ಷದವರು ಸುಮ್ಮನೆ ಇಲ್ಲದೇ ಇರುವಂತಹ ವಿಷಯವನ್ನು ಹೇಳುತ್ತಿದ್ದಾರೆ. ಅವರ ವಿರುದ್ಧ ಇದ್ದ ಪ್ರಕರಣಗಳು quash ಆಗಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು Point of Order ಎಂದರು. ಬೇರೆ ವಿಚಾರಕ್ಕೆ Point of Order ಕೊಡಿ. ಸದನವನ್ನು ದಾರಿ ತಪ್ಪಿಸುವುದಕ್ಕೆ ನಾವು ಬಿಡುವುದಿಲ್ಲ.

**ಸಭಾಪತಿಯವರು:-** ಆಯಿತು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ವಿರುದ್ಧ ಸಿ.ಬಿ.ಐ.,ನಲ್ಲಿ 09 ಕೇಸ್‌ಗಳು ದಾಖಲಾಗಿವೆ ಎಂದು ಹೇಳಿದ್ದಾರೆ. ಆ ಕೇಸ್‌ಗಳು ಯಾವುದೆಂದು ಸದನದ ಮುಂದೆ ಅವರು ಹೇಳಲಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಚರ್ಚೆ ನಡೆಯುತ್ತಿರುವ ವಿಷಯ ಅದಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಾನು ಬೇಡವೆಂದರೂ ಸಹ ಅವರು ಕೇಳಲಿಲ್ಲ.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ವಿರುದ್ಧ ಇದ್ದ ಕೇಸ್ quash ಆಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಒಬ್ಬರೇ ಕಾಣಿಸುತ್ತಾರೆ. ಮಾನ್ಯ ಉಗ್ರಪ್ಪನವರು ಬೇರೆಯವರ ಬಗ್ಗೆಯೂ ಸಹ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

(ಮುಂದು...)

(936)13.11.2017-4.50-ಎಂವಿ-ಎಂಡಿ

**ಶ್ರೀ ವಿ.ಎಸ್.ಉಗ್ರಪ್ಪ:-** ನಾನು ಈಗಲೂ ಸಹ ಹೇಳುತ್ತಿದ್ದೇನೆ. Provisions of Rule 60, 61 and 62 ಪ್ರಕಾರ ಇದು maintain ಆಗುವುದಿಲ್ಲ. ದಯಮಾಡಿ ಅದನ್ನು consider ಮಾಡಬೇಕೆಂದು ಹೇಳುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಅವರು ಬೆಳಗ್ಗೆಯೂ ಸಹ ಹಾಗೆಯೇ ಮಾಡಿದರು. ಸಭೆಯನ್ನು misguide, disrupt ಮಾಡುವುದು, ಅವರದ್ದು ಅದೇ ಕೆಲಸ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ ಇಲ್ಲ, ಸಿ.ಬಿ.ಐ.ನಲ್ಲಿ ಇಲ್ಲ, ಅವರು ಆರೋಪಿ ನಂಬರ್-ಒಂದು ಅಲ್ಲ ಎನ್ನುವುದಾದರೆ, ಆಯಿತು ಬಿಡಿ. ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರೆ, ನಿಮ್ಮ Point of Order ಏನೆಂದು ಗೊತ್ತಾಯಿತು. ಇನ್ನು ಮುಂದೆ Point of Order ಎಂದು ಅವರು ಹೇಳಿದಾಗ, ಅದರಿಂದ ದುರುಪಯೋಗ ಪಡೆದುಕೊಳ್ಳುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳುವುದನ್ನು ನಂಬಬೇಕು ಎನ್ನುತ್ತೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದು ಯಾವ ಕಾನೂನು ಚೌಕಟ್ಟು? Point of Order ಎಂದು ಹೇಳುವುದು ಮತ್ತು ದಾರಿ ತಪ್ಪಿಸುವುದೆ?

**ಶ್ರೀ ವಿ.ಎಸ್.ಉಗ್ರಪ್ಪ:-** ನಿಮಗೆ Point of Order ಎಂದರೆ, ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು Point of Order ನ definition ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರನ್ನು ಕುಳ್ಳಿರಿಸಿ.

**(ಗೊಂದಲ)**

**ಸಭಾಪತಿಯವರು:-** ನಾನು ಅವರಿಗೆ ಅನುಮತಿ ಕೊಟ್ಟಿಲ್ಲ, ಬೇಡವೆಂದು ಹೇಳಿದೆ. ನಾನು ಅದರ ಬಗ್ಗೆ ಮಧ್ಯದಲ್ಲಿ ಮಾತನಾಡಬೇಡಿ ಎಂದು ಹೇಳಿದೆ. (ಗೊಂದಲ) ಅದಕ್ಕೆ ಸಾಕು ಎಂದು ಹೇಳಿ ಅವರನ್ನು ಕುಳ್ಳಿರಿಸಿದ್ದೇನೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅವರು ಕುಳಿತಿದ್ದಾರೆ, ಸದಸ್ಯರನ್ನು ಸುಮ್ಮನಿರುವುದಕ್ಕೆ ಹೇಳಿ.

**ಸಭಾಪತಿಯವರು:-** ತಾವು ಬೇಗ ಮುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ನ್ಯಾಯ ಕೊಡಬೇಕು, ಅವರು ವಕೀಲರಾಗಿಯೂ ಕೂಡ ಇದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ನ್ಯಾಯ ಹೇಳಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ? ಸುಪ್ರೀಂ ಕೋರ್ಟ್‌ನಲ್ಲಿದೆ, ಸಿ.ಬಿ.ಐ.ನಲ್ಲಿದೆ, ಆರೋಪಿ ನಂಬರ್-ಒಂದು ಎಂದು ಇದೆ. ಅವರು ಮಂತ್ರಿಗಳಾಗಿದ್ದಾರೆ, ದಾಖಲೆಗಳನ್ನು ತಿದ್ದುತ್ತಾರೆ ಮತ್ತು ನಾಶ ಮಾಡುತ್ತಾರೆಂದು ಹೇಳುವಂತಹ ಸಂದರ್ಭದಲ್ಲಿ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಆ ರೀತಿ ಎಲ್ಲಿ ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿದ್ದಾರೆ, ನಾವು ಸಹ ಹೇಳುತ್ತಿದ್ದೇವೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು ಇಂತಹವರ ರಾಜೀನಾಮೆಯನ್ನು ತೆಗೆದುಕೊಳ್ಳಿ. ಆಗ ಮೂರು ತಿಂಗಳ ಒಳಗಡೆ ಸ್ಪಷ್ಟವಾದಂತಹ ವರದಿ ಬರುತ್ತದೆ. ಬರುತ್ತಿದ್ದ ಹಾಗೆ ಅವರು ತಪ್ಪಿತಸ್ಥರೆಂದು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, There is no need at all.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಈ ಹಿಂದೆ ಏಕೆ ಅವರ ರಾಜೀನಾಮೆಯನ್ನು ತೆಗೆದುಕೊಂಡಿರಿ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾವು ರಾಜೀನಾಮೆಯನ್ನು ತೆಗೆದುಕೊಂಡಿಲ್ಲ, ಮಾನ್ಯ ಸದಸ್ಯರೆ ರಾಜೀನಾಮೆಯನ್ನು ನೀಡಿದರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜೀನಾಮೆ ಕೊಟ್ಟರು. (ಗೊಂದಲ) Clean chit ಅನ್ನು ಅವರ ಹತ್ತಿರವೇ ಕೊಡಿಸಿಕೊಂಡಿದ್ದೀರಿ,

**(ಗೊಂದಲ).**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಪದೇ ಪದೇ ಹೇಳುತ್ತೇನೆ, ನಾನು ಎಲ್ಲರ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರದಲ್ಲಿ there are FIR's, 24 Minister's are facing trial.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ನಿಮ್ಮ ಪಕ್ಷದವರು ಅದನ್ನು ವಿರೋಧ ಮಾಡಬಹುದು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಒಬ್ಬರಿಗೆ ಒಂದು ನ್ಯಾಯ, ಮತ್ತೊಬ್ಬರಿಗೆ ಒಂದು ನ್ಯಾಯವೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೆಲ್ಲಾ ಹೇಳಬೇಕಾಗಿತ್ತು. Merit ಮೇಲೆ ಹೋಗಬಾರದೆಂದು ಹೇಳಿದ್ದೇನೆ.

**(ಗೊಂದಲ)**

This is not a fit case to discuss. It is already discussed in both the Houses. Again they are raising the same issue. It cannot be taken

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

up. This is too much. ನಾನು specific ಆಗಿ oppose ಮಾಡಿದ್ದೇನೆ, ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇನೆ. This subject cannot be discussed. They cannot go on merits.

**(ಗೊಂದಲ)**

**ಸಭಾಪತಿಯವರು:-** ಸದನ ಅನುಮತಿ ಕೊಟ್ಟರೆ ನಾನು ರೂಲಿಂಗ್ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. **(ಗೊಂದಲ)** ಅವರು ಆರೋಪಿ ನಂಬರ್ ಒಂದು, ಅವರು ದಾಖಲೆಗಳನ್ನು ಹಾಳು ಮಾಡುತ್ತಾರೆ. ಅವರು ಸಿ.ಐ.ಡಿ. ತನಿಖೆ ನಡೆಯುವಂಥ ಸಂದರ್ಭದಲ್ಲಿ clean chit ತೆಗೆದುಕೊಂಡಂತಹ ಒಂದು ಅವ್ಯವಸ್ಥೆಯನ್ನು ಮಾಡಿದ್ದಾರೆ. ಅದಕ್ಕೋಸ್ಕರ ಅವರು ರಾಜೀನಾಮೆಯನ್ನು ಕೊಡಬೇಕು, ರಾಜೀನಾಮೆ ಕೊಡುವವರೆಗೂ ನಾವು ಧರಣಿಗೆ ಹೋಗುತ್ತೇವೆ.

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ತಾವು ಹೇಳಬೇಕು, ಅವರು ಸದನದ ಬಾವಿಗೆ ಬರುತ್ತಿದ್ದಾರೆ.

**ಸಭಾಪತಿಯವರು:-** ಈಗ ನಮ್ಮ ಸದನದ ನಡವಳಿಕೆಗಳು ನಡೆದು ಬಂದಿರುವಂತಹ ಹಾದಿ, ಸುಮಾರು ನೂರು ವರ್ಷಗಳಿಗಿಂತ ಹೆಚ್ಚು ವರ್ಷಗಳ ಕಾಲ ನಡೆದು ಬಂದಿರುವಂತಹ ಕರ್ನಾಟಕ ವಿಧಾನ ಪರಿಷತ್ತು. ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಈ ರೀತಿಯಾದಂತಹ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೋ ಅಥವಾ ಬೇಡವೋ ಎನ್ನುವುದರ ಬಗ್ಗೆ ಈ ಹಿಂದೆ ಬಹಳ ದೊಡ್ಡ ಚರ್ಚೆ ನಡೆದಿದೆ. ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು ಬಹಳ ಸೂಕ್ಷ್ಮವಾಗಿ ಅದನ್ನು ಪ್ರಸ್ತಾಪ ಮಾಡಿದರು. ಮೇಲ್ಮನೆಯಲ್ಲಿ ನಿಲುವಳಿ ಸೂಚನೆ ಹೇಗೆ ಸರಿಯಾಗುತ್ತದೆ? ಇದು ಸರಿಯಾಗುವುದಿಲ್ಲವೆಂದು ಹೇಳಿದರು. ಈ ಹಿಂದೆ ಇದರ ಬಗ್ಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ನಾನು ವಿರೋಧ ಪಕ್ಷದಲ್ಲಿ ಕುಳಿತಿದ್ದೆ. ಈ ಅವಕಾಶ ಬೇಕೋ, ಬೇಡವೋ ಎನ್ನುವುದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದವರ ಪೈಕಿ ನಾನೂ ಒಬ್ಬ. ಆದರೆ, ಇದು ಇರಬಾರದೋ, ಇರಬೇಕೋ ಎಂದು ಚರ್ಚೆ ಮಾಡುವುದಕ್ಕಿಂತ, ಇದು ಇರಬೇಕು. ಆದರೆ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಿಯವರೆವಿಗೂ ಇರಬೇಕು ಎನ್ನುವುದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಸ್ವಲ್ಪ ಅದರ ಬಗ್ಗೆ ಗಹನವಾದಂತಹ ಮತ್ತು ಪ್ರಮುಖವಾದಂತಹ ವಿಷಯಗಳು ಬಂದಾಗ ವಿರೋಧ ಪಕ್ಷಗಳಿಗೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಒಂದು ಅವಕಾಶ ಕೊಡಲೇಬೇಕು. ಆ ಅವಕಾಶವನ್ನು ಕೊಡದೇ ಹೋದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿ ಹೋಗುವುದಿಲ್ಲ ಎನ್ನುವ ಕಾರಣಕ್ಕಾಗಿ ಅದನ್ನು ಹಾಗೆಯೇ ಇಟ್ಟುಕೊಂಡು ಬಂದಿದ್ದೇವೆ. ನಮ್ಮ ನಿಯಮದಲ್ಲಿ, ನಿಯಮ 59ನ್ನು delete ಮಾಡಬೇಕು ಎಂಬುದರ ಬಗ್ಗೆ ಬಹಳ ದೊಡ್ಡ ಚರ್ಚೆ ಆದಂತಹ ಸಂದರ್ಭದಲ್ಲಿ ನಡೆದ ಚರ್ಚೆಯನ್ನು ಸಭೆಯ ಗಮನಕ್ಕೆ ನಾನು ತರುತ್ತಿದ್ದೇನೆ. ಏಕೆಂದರೆ ನಾನೂ ಆ ಚರ್ಚೆಯಲ್ಲಿ ಪಾಲುದಾರ. ಈ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಆ ವಿಷಯವನ್ನು ಪ್ರಸ್ತಾವನೆ ಮಾಡುವುದಕ್ಕೆ ಅವಕಾಶವೇ ಹೊರತು, ಕರ್ನಾಟಕ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ನಿಲುವಳಿ ಸೂಚನೆಯನ್ನು ಎಂದೂ ಸ್ವೀಕರಿಸಿಲ್ಲ. ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ನಾನು ಸಭಾಪತಿಯಾದ ಮೇಲೆ ಮತ್ತು ಸದನದ ಈ ಹಿಂದಿನ ಸಭಾಪತಿಗಳು ಇದಕ್ಕೆ ಅವಕಾಶ ಕೊಟ್ಟಿಲ್ಲ ಮತ್ತು ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಆದರೆ, ವಿಷಯದ ಬಗ್ಗೆ ಗಾಂಭೀರ್ಯವಾಗಿ ಚರ್ಚೆ ಆಗಬೇಕು ಎನ್ನುವಂತಹ ಕಾರಣಕ್ಕಾಗಿ, preliminary submission ಪದದ ಆಧಾರದ ಮೇಲೆ ಚರ್ಚೆಗೆ ಸ್ವಲ್ಪ ಅವಕಾಶವನ್ನು ಕೊಟ್ಟಿದ್ದೇವೆ. ನಾನು ವಿಷಯದ merits and demerits ಗೆ ಹೋಗುವುದಿಲ್ಲ. ಆದರೆ, ಸದನದ ನಡವಳಿಕೆ ಹಿನ್ನೆಲೆಯಲ್ಲಿ ಮತ್ತು ಗಾಂಭೀರ್ಯದ ಹಿನ್ನೆಲೆಯಲ್ಲಿ ನಾವು ಯಾವುದೇ ನಿಲುವಳಿ ಸೂಚನೆಯನ್ನು ಇದುವರೆವಿಗೂ ಸ್ವೀಕರಿಸಿಲ್ಲ. ಆ ಕಾರಣಕ್ಕಾಗಿ ನಾನು merit of the caseಗೆ ಹೋಗುತ್ತಿಲ್ಲ ಮತ್ತು ನಿಲುವಳಿ ಸೂಚನೆಯನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಆದುದರಿಂದ ನಾನು ನಿಲುವಳಿ ಸೂಚನೆಯನ್ನು ತಿರಸ್ಕರಿಸುತ್ತೇನೆ. ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ, ಮುಂದಕ್ಕೆ ಹೋಗೋಣ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವುದರ ಮೂಲಕ ಮಾನ್ಯ ಸಭಾಪತಿಯವರ ತೀರ್ಪನ್ನು ಸ್ವಾಗತಿಸಿದರು)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತಾವು ನಿಲುವಳಿ ಸೂಚನೆಯ ಬಗ್ಗೆ ಹೇಳಿದ್ದೀರಿ. ಆದರೆ, ನಮ್ಮ ಅಪೇಕ್ಷೆ ಅವರು ರಾಜೀನಾಮೆಯನ್ನು ಕೊಡಬೇಕು. ಅವರು ಆರೋಪಿ ನಂಬರ್ ಒಂದು. ಕಾರಣ ಇದು ಸುಪ್ರೀಂ ಕೋರ್ಟ್‌ನಲ್ಲಿದ್ದು, ಅದು ಆದ ನಂತರ ಸಿ.ಬಿ.ಐ. ತನಿಖೆ ಆಗುತ್ತಿದೆ. ಸಿ.ಐ.ಡಿ.ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲೆಗಳನ್ನು ಕೊಟ್ಟು ಅದರ ತನಿಖೆಯನ್ನು ಮುಗಿಸಿದ್ದಾರೆ. ಅವರು ತಮ್ಮ ರಾಜೀನಾಮೆಯನ್ನು ಕೊಡಲಿಲ್ಲವೆಂದರೆ, ನಾವುಗಳು ಅವರು ರಾಜೀನಾಮೆ ಕೊಡುವವರೆವಿಗೂ ಧರಣಿಯಿಂದ ಕದಲುವುದಿಲ್ಲ.

**ಶ್ರೀ ಕೆ.ಅಬ್ದುಲ್ ಜಬ್ಬಾರ್**:- ಮಾನ್ಯ ಸಭಾಪತಿಯವರೇ, ಮುಂದಿನ ವಿಷಯವನ್ನು ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಇದು ರಾಜಕೀಯವಾಗಿ ನೋಡುವಂಥದ್ದು. ನಾನು ಈಗಲೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ, ಸದನದಲ್ಲಿ ಅನೇಕ ವಿಷಯಗಳಿವೆ ಅದರ ಬಗ್ಗೆ ಚರ್ಚೆ ಮಾಡೋಣ. ಈಗ ಸದನದಲ್ಲಿ ಧರಣಿ ಮಾಡುವುದನ್ನು ಬಿಡಿ. ನೀವು ತಂದಿರುವಂತಹ ನಿಲುವಳಿ ಸೂಚನೆ ಚರ್ಚೆಗೆ ಯೋಗ್ಯವಲ್ಲ ಎನ್ನುವಂಥದ್ದು ಮೇಲ್ನೋಟಕ್ಕೆ ಕಾಣಿಸುತ್ತದೆ, ಮತ್ತೆ ಮತ್ತೆ ಅದನ್ನು ಮಾಡುವಂಥದ್ದು ಸರಿಯಲ್ಲ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಹೋಗಿ ಕುಳಿತುಕೊಳ್ಳಿ. ಬೇರೆ ವಿಚಾರಗಳನ್ನು ಚರ್ಚೆ ಮಾಡೋಣ. ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ. ಈಗಾಗಲೇ ಮಾನ್ಯ ಸಭಾಪತಿಯವರು ತಮ್ಮ ರೂಲಿಂಗ್ ಅನ್ನು ಕೊಟ್ಟಿದ್ದಾರೆ. ದಯವಿಟ್ಟು ಮಾನ್ಯ ಸದಸ್ಯರು ಆ ಪೀಠಕ್ಕೆ ಗೌರವ ನೀಡಿ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಆಗ ಅವರು ರಾಜೀನಾಮೆಯನ್ನು ಕೊಟ್ಟರು, ಈಗ ಏಕೆ ಕೊಡುವುದಿಲ್ಲ. ಆಗ clean chit ತೆಗೆದುಕೊಂಡರು. Clean chit ತೆಗೆದುಕೊಂಡ ಮೇಲೆ ಅವರನ್ನು ಸೇರಿಸಿಕೊಳ್ಳಿ. (ಗೊಂದಲ) ನಿಮ್ಮ ನಂಬಿಕೆ ಏನಿರಬಹುದೆಂದರೆ, ನಮ್ಮದೇ ಸಿ.ಐ.ಡಿ ನಾವು clean chit ಅನ್ನು ತೆಗೆದುಕೊಳ್ಳಬಹುದು. ಅದಕ್ಕೋಸ್ಕರ ಆರು ವಾರದಲ್ಲಿ ವರದಿಯನ್ನು ತರಿಸಿಕೊಂಡು, ಅವರಿಗೆ clean chit ಕೊಟ್ಟು, ಅವರನ್ನು ಮತ್ತೆ ಮಂತ್ರಿಗಳನ್ನಾಗಿ ಮಾಡುತ್ತೀರಿ. ನಾನು ಅದಕ್ಕೋಸ್ಕರ ಹೇಳುತ್ತಿರುವುದು, ಈ ರೀತಿ ಮಾಡುತ್ತಿರುವುದು ಕರ್ನಾಟಕ ರಾಜ್ಯದ ಜನರಿಗೆ ಮಾಡಿದಂತಹ ದ್ರೋಹ. ಅದಕ್ಕೆ ನಾನು ಹೇಳುತ್ತಿರುವುದೇನೆಂದರೆ, ಆರೋಪಿ ನಂಬರ್-01 ಆಗಿದೆ. (ಗೊಂದಲ) ಹಾಗಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಅವರ ರಾಜೀನಾಮೆಯನ್ನು ತೆಗೆದುಕೊಳ್ಳಲಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್**:- ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಪೂರ್ತಿ ದಿವಸ ಹೋಗಿದೆ. ದಯವಿಟ್ಟು ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ. ಅವರು ಬೆಳಗ್ಗೆಯವರೆವಿಗೂ ಅದನ್ನೇ ಹೇಳುತ್ತಾರೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದಂತಹ ಶ್ರೀ ಕೆ.ಜೆ.ಜಾರ್ಜ್‌ರವರು ಅಲ್ಪಸಂಖ್ಯಾತರಾಗಿರುವುದರಿಂದ ಅವರಿಗೆ ತೇಜೋವಧೆ ಮಾಡಬೇಕೆಂದು ಈ ಒಂದು ರಾಜಕೀಯವನ್ನು ಮಾಡುತ್ತಿದ್ದಾರೆ. ನಾವು ಉತ್ತರ ಕರ್ನಾಟಕದ ಬಗ್ಗೆ ಬೆಳಗಾವಿಯಲ್ಲಿ ಹತ್ತು ದಿವಸಗಳ ಕಾಲ ಚರ್ಚೆ ಮಾಡುವುದಕ್ಕೆ ಕರೆದಿರುವುದು. ದಯವಿಟ್ಟು ಕಾಲವನ್ನು ವ್ಯಯ ಮಾಡುವುದು ಬೇಡ. ಈ ಭಾಗದ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ನಾವು ಬಂದಿರುವುದು. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ಬಹಳ ಉತ್ಸುಕವಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಮ್ಮ ರೂಲಿಂಗ್ ಬಗ್ಗೆ ನಾನು ಖಂಡಿತ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರು ಇನ್ನೇನು ಪ್ರಶ್ನೆ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಗಳಿಗೆ ಪ್ರಶ್ನೆ ಮಾಡುತ್ತಿದ್ದೇನೆ. ನಾನು ನಿಮ್ಮ ಮುಖಾಂತರ ಅವರಿಗೆ ಮನವಿ ಮಾಡುತ್ತಿದ್ದೇನೆ. ಆಗ ಸಿ.ಐ.ಡಿ. ತನಿಖೆಗೆ ಕೊಟ್ಟು, ಅವರಿಂದ clean chit ತೆಗೆದುಕೊಂಡಿದ್ದಾರೆ. Clean chitನ್ನು ತೆಗೆದುಕೊಳ್ಳುತ್ತಿದ್ದ ಹಾಗೆ ಮಾನ್ಯ ಕೆ.ಜೆ.ಜಾರ್ಜ್ ಅವರನ್ನು ಪುನಃ ಸಂಪುಟಕ್ಕೆ ತೆಗೆದುಕೊಂಡರು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ದಿನಾಂಕ 07.07.2016ನೇ ಇಸವಿಯಲ್ಲಿ ಶ್ರೀ ಗಣಪತಿಯವರು ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡರು ಎಂದು ಸುದ್ದಿಯಾಗುತ್ತದೆ. ಅದು ಆದ ತಕ್ಷಣ ಅಂದರೆ, ದಿನಾಂಕ 08.07.2016ರಂದು ಅದನ್ನು ಸಿ.ಐ.ಡಿ.ಗೆ ವಹಿಸಿದ್ದೇವೆ. ಅವರ ಮಗ ದಿನಾಂಕ 10.07.2016ರಂದು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡುತ್ತಾರೆ. ಅವರು ಏನು ಹೇಳುತ್ತಾರೆಂದರೆ, because of the statements made by Ganapathi's father and others, ಅವರು ಎಲ್ಲವನ್ನು ಮಾಡಿದ ಮೇಲೆ, ದೂರನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಪೋಲೀಸ್ ಠಾಣೆಯಲ್ಲಿ ಹೇಳುತ್ತಾರೆ. ಅದು ಆದಮೇಲೆ he went to the Magistrate Court. ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Magistrate Court ನವರು FIR ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಮಾಡಿಕೊಂಡ ತಕ್ಷಣವೇ ಬೇಡವೆಂದರೂ ಕೂಡ ಅವರು ಆ ಘಳಿಗೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತಾರೆ.

**(ಮುಂದು...)**

(937)13.11.2017-05.00-ಎಲ್‌ಎಲ್-ಎಕೆ

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):- (ಮುಂದುವರೆದಿದೆ...)**

ಶ್ರೀ ರಮೇಶ್‌ಕುಮಾರ್‌ರವರು ಈ ಸದನದಲ್ಲಿಯೇ ಕುಳಿತಿದ್ದಾರೆ. ನಾವು ರಾಜೀನಾಮೆ ಕೊಡಬಾರದೆಂದು ಮನವಿ ಮಾಡಿದ್ದೆವು. ಆದರೂ, ಮಾನ್ಯ ರಮೇಶ್‌ಕುಮಾರ್‌ರವರು ಕೂಡ ಆ ನಂತರ ಕೊನೆಯಲ್ಲಿ ಈ ರಾಜ್ಯಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕೆಂಬ ಉದ್ದೇಶದಿಂದ ರಾಜೀನಾಮೆ ಕೊಟ್ಟರೆ ಒಪ್ಪಿಕೊಳ್ಳಿ ಎಂದು ಸಲಹೆ ನೀಡಿದರು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಹೇಳುತ್ತಿರುವುದು ಏನು?

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ನಾನು ಆ ನಂತರ ನಾನು ರಾಜೀನಾಮೆ ಕೊಡುವುದು ಬೇಡವೆಂದು ಹೇಳಿದೆ. ಅವೊತ್ತೂ ಹೇಳಿದ್ದೇನೆ. ಇವೊತ್ತು ಹೇಳುತ್ತಿದ್ದೇನೆ. ಎಫ್.ಐ.ಆರ್. ಆದ ತಕ್ಷಣ ನನ್ನ ಪ್ರಕಾರ ರಾಜೀನಾಮೆ ಕೊಡಬೇಕಾದಂತಹ ಅಗತ್ಯವಿಲ್ಲ. ಸಿ.ಬಿ.ಐ. ನವರಾಗಲಿ ಅಥವಾ ಸುಪ್ರೀಂ ಕೋರ್ಟ್ ಆಗಲಿ ಎಲ್ಲಿಯಾದರೂ ಶ್ರೀ ಕೆ.ಜೆ. ಜಾರ್ಜ್‌ರವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆಯೇ? ಅಥವಾ ಸಿ.ಐ.ಡಿ. ವರದಿಯನ್ನು comment ಮಾಡಿದ್ದಾರೆಯೇ? ಸುಪ್ರೀಂ ಕೋರ್ಟ್‌ನವರು, 'we are not expressing any opinion on merits' ಎಂದು ಹೇಳಿದ್ದಾರೆ. It is very very clear in the orders. ಇವರು ಏನು ಓದುತ್ತಾರೆಂದರೆ, Appellant's lawer ಏನು ವಾದವನ್ನು ಮಂಡಿಸಿದ್ದಾರೆ, ಆ ವಾದದ ಪ್ರತಿಯನ್ನು ಇಟ್ಟುಕೊಂಡು ಇಲ್ಲಿ ಹೇಳುತ್ತಿದ್ದಾರೆ. Where is the question of interfering with the investigation of the C.B.I.? Is he a

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Home Minister? No. ಆಗಲೂ ಗೃಹ ಮಂತ್ರಿಗಳಾಗಿರಲಿಲ್ಲ. ಆಗಲೂ ರಾಜೀನಾಮೆ ಕೊಟ್ಟಿದ್ದರು. ಆಗ ರಾಜೀನಾಮೆ ಕೊಟ್ಟರೆಂದು ಇವರು ಈ ರೀತಿ ಆರೋಪ ಮಾಡಿರುವವರಿಗೆ ರಾಜೀನಾಮೆ ಕೊಡಬೇಕೆಂದು ಹೇಳಬೇಕು. ಯಾರ ಯಾರ ಮಂತ್ರಿಗಳ ವಿರುದ್ಧ ಎಫ್.ಐ.ಆರ್. ಇದೆ ಅವರಿಗೆ ಶ್ರೀ ಜಾರ್ಜ್‌ರವರು ರಾಜೀನಾಮೆ ಕೊಟ್ಟಿದ್ದಾರೆ, ತಾವು ಕೂಡ ರಾಜೀನಾಮೆ ಕೊಡಬೇಕೆಂದು ಹೇಳಬೇಕು. ಅದನ್ನು ಬಿಟ್ಟು ಇಲ್ಲಿ ಕೊಡಿ ಕೊಡಿ ಎಂದು ಇಲ್ಲಿ ಹೇಳಿದರೆ ಅವರು ರಾಜೀನಾಮೆ ಕೊಡಬೇಕಾದಂತಹ ಅಗತ್ಯ ಇಲ್ಲ. ಈ ಬಗ್ಗೆ ತಾವು ಒಂದು ಆದೇಶ ಮಾಡಿದ್ದೀರಿ. ಆ ಆದೇಶ ನಿಯಮಾವಳಿಗಳ ಪ್ರಕಾರ ಇದೆ. ಸಂವಿಧಾನದ ಪ್ರಕಾರ ಇದೆ. ಕಾನೂನು ಪ್ರಕಾರವಾಗಿದೆ. ಬಹುಶಃ ತಾವು ಅವರಿಗೆ ಮತ್ತೊಮ್ಮೆ ತಿಳಿ ಹೇಳುವುದಿದ್ದರೆ ತಾವು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಆರೋಪಿ ನಂ.1 ಬಗ್ಗೆ ಹೇಳುತ್ತಿರುವುದು.

**(ಗೊಂದಲ)**

ರಾಜೀನಾಮೆ ಕೊಡಿ. ಈ ಹಿಂದೆ ಹೇಗಾದರೂ ಸಿ.ಐ.ಡಿ.ಯಿಂದ ಕ್ಲೀನ್ ಚಿಟ್ ತೆಗೆದುಕೊಳ್ಳಬಹುದೆಂದು ರಾಜೀನಾಮೆ ಕೊಟ್ಟಿದ್ದರು. ಆ ನಂತರ 6 ವಾರಗಳಲ್ಲಿ ಸಿ.ಐ.ಡಿ.ಯಿಂದ ಕ್ಲೀನ್ ಚಿಟ್ ತೆಗೆದುಕೊಂಡುಬಿಟ್ಟರು.

**(ಗೊಂದಲ)**

ಅದಕೋಸ್ಕರವೇ ರಾಜೀನಾಮೆ ತೆಗೆದುಕೊಂಡು ಮತ್ತೆ ಕ್ಯಾಬಿನೆಟ್‌ಗೆ ತೆಗೆದುಕೊಂಡಿದ್ದಾರೆ. ಈಗಲೂ ಅವರಿಂದ ರಾಜೀನಾಮೆ ತೆಗೆದುಕೊಳ್ಳಿ. ಅವರಿಗೆ ಸುಪ್ರೀಂ ಕೋರ್ಟ್‌ನಿಂದ ಕ್ಲೀನ್‌ಚಿಟ್ ಬಂದರೆ ಮತ್ತೆ ಅವರನ್ನು ಕ್ಯಾಬಿನೇಟ್‌ಗೆ ತೆಗೆದುಕೊಳ್ಳಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬೇಕಾದಂತಹ ಅಗತ್ಯವಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಏತಕ್ಕೆ ಅವರು ರಾಜೀನಾಮೆ ಕೊಡುವುದಕ್ಕಾಗುವುದಿಲ್ಲವೆಂದು ನಾವು ನೋಡುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ದರಾಮಯ್ಯ:-** ನೋಡಿ, ನೀವು ರಾಜಕೀಯವಾಗಿ ಮುಂದುವರೆಯುವುದಾದರೆ we will also face politically. We don't care. ನಿಮಗೆಲ್ಲಾ ನಾವು ರಾಜಕೀಯವಾಗಿ ಹೆದರಿಕೊಳ್ಳುತ್ತೇವೆಯೇ? ತಮ್ಮನ್ನು ರಾಜಕೀಯವಾಗಿ ಎದುರಿಸುವುದಕ್ಕೆ ನಾವೂ ತಯಾರಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆರೋಪಿಗಳ ರಕ್ಷಣೆಯನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹೇಗೆ ಮಾಡುತ್ತಿದ್ದಾರೆಂದು ನಾವೂ ಕೂಡ ರಾಜ್ಯದ ಜನರ ಮುಂದೆ ಹೋಗುತ್ತೇವೆ.

**ಶ್ರೀ ಸಿದ್ದರಾಮಯ್ಯ:-** ಹೋಗೋಣ ನಡೆಯಿರಿ. ಏಪ್ರಿಲ್‌ನಲ್ಲಿ ಚುನಾವಣೆ ಬರುತ್ತದೆ. ಬನ್ನಿ ಹೋಗೋಣ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈ ದಿನದ ಕಾರ್ಯಕಲಾಪಗಳು ದೃಷ್ಟಿಯಿಂದ ತಾವು ಯಾವುದಾದರೂ ನಿರ್ದಿಷ್ಟವಾದಂತಹ ಸೂಚನೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಈಗ ನಾನು ಈ ನಿಲುವಳಿ ಸೂಚನೆಯ ವಿಷಯವನ್ನು ಮುಗಿಸಿದ್ದೇನೆ. ಈಗ ದಯಮಾಡಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡುವ ದೃಷ್ಠಿಯಿಂದ ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು. ಮುಂದಿನ ಕಾರ್ಯಕಲಾಪಗಳ ಪಟ್ಟಿ ಪ್ರಕಾರ ಇವತ್ತು ಎಷ್ಟು ಸಾಧ್ಯವೋ ಅಷ್ಟು ಸದನವನ್ನು ನಡೆಸುವುದಕ್ಕೆ ಪ್ರಯತ್ನ ಮಾಡೋಣ. ಅದಕ್ಕಾಗಿ ನನಗೆ ತಾವೆಲ್ಲ ಸಹಕಾರ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆರೋಪಿ ನಂ.1 ಅನ್ನು ಸಚಿವ ಸಂಪುಟದಲ್ಲಿ ಇಟ್ಟುಕೊಂಡು, ಸದರಿ ಪ್ರಕರಣದ ಬಗ್ಗೆ ಸಿ.ಬಿ.ಐ. ತನಿಖೆಯಾಗುತ್ತಿರುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ ನಾವು ಕುಳಿತುಕೊಳ್ಳಬೇಕೇ? ವಿರೋಧ ಪಕ್ಷದವರಾಗಿ ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ. ದಾಖಲೆಗಳನ್ನು ತಿದ್ದಿದ್ದಾರೆಂದು ಅನೇಕ ಅಭಿಪ್ರಾಯಗಳು ಈಗಾಗಲೇ ಬಂದಿವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ದಾಖಲೆಗಳನ್ನು ತಿದ್ದಿದ್ದಾರೆಂದು ಅಭಿಪ್ರಾಯ ಬಂದಿದೆ. ಜೊತೆಗೆ ದಾಖಲೆಗಳ ಸಾಕ್ಷ್ಯ ನಾಶವಾಗಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ವರದಿಯಾಗಿರುವುದು ಸರಿಯೇ ಎಂದು ಕೇಳಿದರೆ ನಾನು ಏನು ಹೇಳಲಿ. ಹಾಗಾದರೆ, ದಾಖಲೆಗಳನ್ನು ತಿದ್ದಿಲ್ಲವೇ? ಸಾಕ್ಷ್ಯಗಳ ನಾಶ ಆಗಿಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ದಾಖಲೆಗಳನ್ನು ತಿದ್ದಿಲ್ಲ, ನಾಶ ಮಾಡಿಲ್ಲ ಎಂದು ಹೇಳಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದರ ಅಗತ್ಯವೇ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಏನು ಅಗತ್ಯ ಇಲ್ಲ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ದಾಖಲಾತಿಗಳನ್ನು ತಿದ್ದುವಂತಹದ್ದಾಗಲಿ, ದಾಖಲೆಗಳನ್ನು ನಾಶ ಮಾಡುವುದಾಗಲಿ, ಅದು ನಮ್ಮ ಕೆಲಸವಲ್ಲ. ನಮಗೆ ಈ ನೆಲದ ಕಾನೂನಿನ ಬಗ್ಗೆ ಮತ್ತು ಸಂವಿಧಾನದ ಬಗ್ಗೆ ಗೌರವವಿದೆ. ಕಾನೂನಿಗೆ ತಲೆ ಬಾಗುತ್ತೇವೆಯೇ ಹೊರತು ವಿರೋಧ ಪಕ್ಷದವರು ಹೇಳಿದ ತಕ್ಷಣ ನಾವು ದಾಖಲೆಗಳನ್ನು ನಾಶ ಮಾಡಿದ್ದೇವೆಂದು ಅರ್ಥವೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ದಾಖಲೆಗಳನ್ನು ತಿದ್ದಿದ್ದಾರೆಂದು ವರದಿಯಾಗಿದೆಯಲ್ಲ ಅದರ ಬಗ್ಗೆ ಏನು ಹೇಳುತ್ತೀರಿ?

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಸಾಕ್ಷ್ಯ ನಾಶದ ಬಗ್ಗೆ ವರದಿಯ ಪ್ರತಿಯನ್ನು ಸದನದಲ್ಲಿ ಪ್ರದರ್ಶಿಸಿದರು)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, is it an evidence? Is it admissible? Is it admissible according to the Indian Evidence Act?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತುಂಬಾ ಸ್ಪಷ್ಟವಾಗಿ 'ಸಾಕ್ಷ್ಯ ನಾಶದಲ್ಲಿ ಜಾರ್ಜ್‌ರವರ ಕೈಚಳಕ' ಎಂದು ವರದಿ ಬಂದಿರಬೇಕಾದರೆ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, it is not at all admissible. It is not relevant. It is not admissible.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಸ್ವಾತ್ರಂತ್ಯಕ್ಕೂ ದೊಡ್ಡ ಗೌರವವಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು Indian Evidence Act ಅನ್ನು ಓದಿದ್ದಾರೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪತ್ರಿಕಾ ರಂಗದವರು ತಮ್ಮ ಪತ್ರಿಕೆಯ ಮೂಲಕ ಅನೇಕ ಅಂಶಗಳನ್ನು ಹೊರಗೆ ತಂದಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸುಮ್ಮನೆ ಏನೇನೋ ಹೇಳುವುದಕ್ಕೆ ಹೋಗಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತುರ್ತು ಪರಿಸ್ಥಿತಿಗಳಲ್ಲಿ ಈ ರೀತಿಯ ಅನೇಕ ಅಂಶಗಳನ್ನು ಹೊರಗೆ ತಂದಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಗೊತ್ತಿಲ್ಲದೇ ಏನೇನೋ ಹೇಳುವುದು... It is not at all admissible under the Indian Evidence Act. It is not relevant at all. ಪೇಪರ್‌ನಲ್ಲಿ ಬಂದಿರುವುದನ್ನು ತೋರಿಸಿ ಶಿಕ್ಷೆ ಕೊಡಿ ಎಂದು ಹೇಳುವುದಕ್ಕಾಗುತ್ತದೆಯೇ? Conviction ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲಿ ನೋಡಿ "Government of Karnataka, State Forensic Laboratory..." ವರದಿಯನ್ನು ತಾವು ನಂಬುತ್ತಿರಿಯೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, unless there is a cogent evidence on record, ಅದರಲ್ಲಿಯೂ ಇಲ್ಲಿ offence ಇರುವುದು ಯಾವುದೆಂದರೆ 'abetment'. It is an offence under Section 306 of the I.P.C. i.e. Section 306 read with Section 34. Section 34 of I.P.C. states about 'common intention'. Where is the common intention? Where is the abetment? It is very very difficult. As an Advocate ನಾನು ಹೇಳುತ್ತಿದ್ದೇನೆ ಆ ರೀತಿ evidence ಇರುವುದಿಲ್ಲ. ಅದು ಆಗುವುದಕ್ಕೂ ಸಾಧ್ಯವಿಲ್ಲ. ಈಗ 306 ಆಗುತ್ತದೆ... ಯಾರಿಗೆ minimum common sense ಇರುತ್ತದೆ, even a layman will not agree to this argument.

**(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮುಖಾಂತರ ಬೆಂಬಲ ಸೂಚಿಸಿದರು.)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು... ಪತ್ರಿಕೆಯಲ್ಲಿ ಬಂದಿರುವುದನ್ನು ಒಪ್ಪುವುದಿಲ್ಲವೆಂದರೆ...

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವ ವಿಚಾರವನ್ನು ಮತ್ತೆ ಮತ್ತೆ ಹೇಳಿದರೆ ನಾವು ಉತ್ತರ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, Government of Karnataka, State Forensic Laboratory ನಿಂದ The Superintendent of Police ರವರಿಗೆ ಪತ್ರ ಕಳುಹಿಸಿದ್ದಾರೆ. ಇದನ್ನು ತಾವು ನಂಬುತ್ತೀರಿಯೇ?

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ. ಅಬ್ದುಲ್ ಜಬ್ಬಾರ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಇಡೀ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವ ವಿಚಾರವನ್ನೇ ಕೇಳಬೇಕೆ?

**(ಗೊಂದಲ)**

**ಸಭಾಪತಿಯವರು:–** ನಾನು ಕೂಡ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಸದನ ಮುಂದೆ ನಡೆಯಲಿ, ಅದಕ್ಕೆ ತಾವು ನಿರ್ದೇಶನ ನೀಡಿ. ಪ್ರಶ್ನೋತ್ತರ ಅವಧಿ ನಡೆಯಬೇಕು. ಇನ್ನು ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು.

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರಿಗೆ ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಭಾರತೀಯ ಜನತಾ ಪಕ್ಷದ ಸದಸ್ಯರುಗಳ ವಿರುದ್ಧ ಧಿಕ್ಕಾರ, ಧಿಕ್ಕಾರ ಎನ್ನುವ ಘೋಷಣೆಗಳನ್ನು ಕೂಗಿದರು)**

ರಾಜ್ಯದ ಜನರಿಗೆ ಒಳಿತು ಮಾಡುವುದು ಇವರಿಗೆ ಇಷ್ಟವಿಲ್ಲ. ರಾಜಕಾರಣ ಮಾಡುವುದು ಬಿಟ್ಟರೆ ಬೇರೆ ಏನೂ ಇಲ್ಲ. ಈ ಪ್ರಕರಣದಿಂದ ರಾಜಕೀಯವಾಗಿ ಮುಂದೆ ಚುನಾವಣೆಯಲ್ಲಿ ಏನಾದರೂ ಲಾಭವಾಗುತ್ತದೆಯೆಂದು ಇವರು ಭಾವಿಸಿದ್ದಾರೆ.

**(ಗೊಂದಲ)**

ಜನರು ನಮ್ಮನ್ನು ಮುಂದಿನ ಚುನಾವಣೆಯಲ್ಲಿ ಬಹಳ ಕೆಟ್ಟದಾಗಿ ಸೋಲಿಸುತ್ತಾರೆಂದು ಬಿಜೆಪಿಯವರು ತೀರ್ಮಾನ ಮಾಡಿಕೊಂಡುಬಿಟ್ಟಿದ್ದಾರೆ. ಇದರಲ್ಲಿ ರಾಜಕೀಯ ಮಾಡಿದರೆ ಇವರಿಗೆ ಏನೂ ಲಾಭವಾಗುವುದಿಲ್ಲ. I am making it very very clear. ಜಾರ್ಜ್‌ರವರ ರಾಜೀನಾಮೆ ಕೇಳಿದರೆ ಚುನಾವಣೆಯಲ್ಲಿ ಲಾಭವಾಗುತ್ತದೆಂದು ಭಾವಿಸಿದ್ದರೆ ಅದು ಅವರ ಭ್ರಮೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

ಇವರಿಗೆ ಮುಂದಿನ ಚುನಾವಣೆಯಲ್ಲಿ ಸೋಲುತ್ತೇವೆಂದು ಗೊತ್ತಾಗಿದೆ. ಅದಕ್ಕಾಗಿ ಈ ರೀತಿ ನಾಟಕ ಮಾಡುತ್ತಿದ್ದಾರೆ. ಈ ನಾಟಕಕ್ಕೆ ನಾವು ಸೊಪ್ಪು ಹಾಕುವುದಿಲ್ಲ. We will face you politically. Come to the field, we will face you.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಭಾರತೀಯ ಜನತಾ ಪಕ್ಷದ ಸದಸ್ಯರುಗಳ ವಿರುದ್ಧ ಶೇಮ್ ಶೇಮ್ ಎಂಬ ಘೋಷಣೆಗಳನ್ನು ಕೂಗಿದರು.)**

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ಸರ್ಕಾರ [xxx] ರಿಗೆ ರಕ್ಷಣೆ ಮಾಡುವುದಕ್ಕೆ ಹೋಗುತ್ತಿದೆ...

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನೆ ಮತ್ತೆ ಮತ್ತೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಾರದು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸಾಕ್ಷಿಗಳನ್ನು ನಾಶ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಮಾನ್ಯ ಸಚಿವರು ರಾಜೀನಾಮೆ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ.

**(ಗೊಂದಲ)**

ಈ ಸರ್ಕಾರ ಭಂಡ ಸರ್ಕಾರ. ಈ ಸರ್ಕಾರಕ್ಕೆ ಜನಗಳ ರಕ್ಷಣೆ ಮಾಡಿ ಎಂದು ಹೇಳಿದರೆ ಮಾಡುವುದಿಲ್ಲ. ಆದರೆ, ಯಾರು ಆರೋಪಿಗಳಿದ್ದಾರೆ, ಅವರನ್ನು ರಕ್ಷಣೆ ಮಾಡುತ್ತಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಈ ಸದನವನ್ನು ಮುಂದೂಡುವುದಕ್ಕೆ ಮುಂಚೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಇವರು ಮಾಡುತ್ತಿರತಕ್ಕಂತಹ ದುಷ್ಕೃತ್ಯ.. ಸಾಕ್ಷಿಗಳ ನಾಶ....

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ...

---

**[xxx] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಕ್ಷದವರಷ್ಟು ದುಷ್ಕೃತ್ಯಗಳನ್ನು ನಮ್ಮ ಸರ್ಕಾರ ಮಾಡಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರೆ ತಮಗೂ ಗೊತ್ತು, ನಮಗೂ ಗೊತ್ತು, ಈ ವಿಷಯವನ್ನು ರಾಜಕೀಯವಾಗಿ ಹಿಡಿದು ಬಡಿಯೋಣವೆಂದು ಹೊರಟಿದ್ದೀರಿ...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಖಂಡಿತ ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇದೆಲ್ಲವನ್ನೂ ಜನ ಅರ್ಥ ಮಾಡಿಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ರಾಜಕೀಯ ಎನ್ನುವುದು ಇಲ್ಲ. ಇನ್ನೂ 3 ತಿಂಗಳಲ್ಲಿ ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈ ರಾಜ್ಯದ ಜನ ಭಾರತೀಯ ಜನತಾ ಪಕ್ಷದವರನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕೆ ಅಧಿಕಾರದಲ್ಲಿದ್ದವರನ್ನೆಲ್ಲ ಜನ ಸೋಲಿಸಿದರು.......

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇನ್ನು 3 ತಿಂಗಳಿಗೆ ಅವರಿಗೆ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ತಮಗೆ ಗೊತ್ತಿದೆ, 2013ರ ಚುನಾವಣೆಯಲ್ಲಿ ಸುಮಾರು 112 ಸ್ಥಾನದಲ್ಲಿದ್ದವರು 40 ಸ್ಥಾನಗಳಿಗೆ ಇಳಿದರು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಿದ್ದರಾಮಯ್ಯನವರು ಭಾರತೀಯ ಜನತಾ ಪಕ್ಷ, ಕೆ.ಜೆ.ಪಿ. ಎಂದು ಆದ ತಕ್ಷಣ ಲಾಟರಿ ಹೊಡೆದ ರೀತಿಯಲ್ಲಿ ಮುಖ್ಯಮಂತ್ರಿಗಳಾದರು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರಿಗೆ ಆಗ majority ಬಂದಿತ್ತಾ?

**(ಗೊಂದಲ)**

ಉಪ ಮುಖ್ಯಮಂತ್ರಿಯಾಗಿ ಹೀನಾಯವಾಗಿ ಸೋತವರು ಇವರು.

**(ಗೊಂದಲ)**

ಜನ ಅವರನ್ನು 3ನೇ ಸ್ಥಾನಕ್ಕೆ ಕಳುಹಿಸಿದ್ದಾರೆ. ಇನ್ನೂ ಬುದ್ಧಿ ಬಂದಿಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಪದೇ ಪದೇ ಕೇಳುತ್ತಿದ್ದೇನೆ. ತಾವು ಅವಕಾಶ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈ ದಿನ ಸದನ ಪ್ರಾರಂಭವಾದ ಘಳಿಗೆ ಯಾಕೋ ಸರಿಯಿಲ್ಲವೆಂದು ಕಾಣುತ್ತಿದೆ. ಒಳ್ಳೆಯ ಘಳಿಗೆಯಲ್ಲಿ ಈ ದಿನ ಸದನ ಪ್ರಾರಂಭವಾಗಿಲ್ಲ. ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 9 ನಿಮಿಷಕ್ಕೆ ಮುಕ್ತಾಯಗೊಂಡಿತು. ಪುನಃ ದಿನಾಂಕ 14ನೇ ನವೆಂಬರ್ ಮಾಹೆ 2017ರಂದು ಮಂಗಳವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”